2. ವಿತ್ತೀಯ ಕಾರ್ಯಕಲಾಪ

(ಅ) 2005-06ನೇ ಸಾಲಿನ ಅನುದಾನ ಬೇಡಿಕೆಗಳ ಮಂಡನೆ.

ಅಭಿಯಾಚನೆ ಕ್ರಮಾಂಕ 14 - ಕಂದಾಯ

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2006 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಕಂದಾಯ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 76233.28 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1121.00 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 11 - ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

ಶ್ರೀಮತಿ ಭಾಗೀರಥಿ ಮರುಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2006 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಮಹಿಳಾ ಮತ್ತು ಮಕ್ಕಳ ಅಭಿವೃಗ್ಧಿ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 36685.89 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1396.00 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 7-ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2006 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಗ್ರಾಮೀಣಾಬಿವೃದ್ದಿ ಮತ್ತು ಪಂಚಾಯತ್ ರಾಜ್' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 102004.83 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 51085.63 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 22-ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ಶ್ರೀ ಎನ್. ಚೆಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2006 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಆರೋಗ್ಯ ಮತ್ತು ಕುಟುಂಬ ಕಲ್ಯಾಣ' ಸಂದಾಯ ಮಾಡುವಲ್ಲಿ ಬರತಕ್ಕಂತ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 116103.27 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು

ಮತ್ತು ಬಂಡವಾಳ ಖಾತೆಯಲ್ಲಿ 8801.20 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ 12– ವಾರ್ತಾ ಪ್ರವಾಸೋದ್ಯಮ ಮತ್ತು ಯುವ ಜನ ಸೇವೆಗಳು

ಶ್ರೀ ಬಿ. ಶಿವರಾಮು (ವಾರ್ತಾ ಪ್ರವಾಸೋದ್ಯಮ ಮತ್ತು ಯುವ ಜನ ಸೇವೆಗಳ ಸಚಿವರು) : ಮಾನ್ಯ ಅಧ್ಯಕ್ಷರೆ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31–3–2006 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ವಾರ್ತಾ ಪ್ರವಾಸೋದ್ಯಮ ಮತ್ತು ಯುವ ಜನ ಸೇವೆಗಳು' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5656.00 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 80.00 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಎಲ್ಲಾ ಬೇಡಿಕೆಗಳನ್ನು ಸದನದ ಮುಂದೆ ಮಂಡಿಸಲಾಗಿದೆ.

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಅಭಿಯಾಚನೆ ಕ್ರಮಾಂಕ 5 ಹಾಗೂ 6 ಇದೆ. ಅದು ಮುಖ್ಯಮಂತ್ರಿಗಳ ಬೇಡಿಕೆಯಲ್ಲಿ ಮೀನುಗಾರಿಕೆ ಇರುವುದರಿಂದ ಸೇರಿಕೊಂಡಿದೆ. ಆಗ ಅದನ್ನು ಮಂಡಿಸುತ್ತಾರೆ. ಅದನ್ನು ಏನು ಮಾಡಿದ್ದಾರೆ ಎಂದರೆ ಸಿಬ್ಬಂದಿ ಮತ್ತು ಪಶುಸಂಗೋಪನೆ ಮತ್ತು ಮೀನುಗಾರಿಕೆ ಇರುವುದರಿಂದ ಮುಖ್ಯಮಂತ್ರಿಗಳ ಕಡೆಗೆ ಲಿಸ್ಟ್ ಮಾಡಿದ್ದಾರೆ. ಆದ್ದರಿಂದ ಅವರು ಅದನ್ನು ಮಂಡಿಸುತ್ತಾರೆ. ತಾವು ಈ ಐದು ವಿಚಾರಗಳಲ್ಲಿಯೇ ಇವತ್ತು ಚರ್ಚೆಯನ್ನು ಪ್ರಾರಂಭಿಸಬಹುದು. ಕಂದಾಯ, ಗ್ರಾಮೀಣಾಭಿವೃದ್ದಿ, ವಾರ್ತಾ ಮತ್ತು ಪ್ರವಾಸೋದ್ಯಮ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ. ಮಾನ್ಯ ಸದಸ್ಯರೆಲ್ಲರೂ ಸಹಕರಿಸಿದರೆ ಇದನ್ನು ಪ್ರಾರಂಭ ಮಾಡಬಹುದು.

ಶ್ರೀ ಗೋವಿಂದಪ್ಪ ಮಕಟಪ್ಪ ಕಾರಜೋಳಃ ಎಲ್ಲವನ್ನೂ ಮಂಡಿಸಿಬಿಡಿ. ಏಕೆಂದರೆ, ಒಬ್ಬೊಬ್ಬರು ಒಂದೊಂದು ಇಲಾಖೆ ಮೇಲೆ...

ಶ್ರೀ ಎಂ. ಪಿ ಪ್ರಕಾಶ್ಃ ಮಂತ್ರಿಗಳು ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ಃ ಆಯಾ ಇಲಾಖೆಗಳ ಮಂತ್ರಿಗಳು ಇರಬೇಕಲ್ಲಾ.

ಶ್ರೀ ಗೋವಿಂದಪ್ಪ ಮಕಟಪ್ಪ ಕಾರಜೋಳಃ ಅವರೇ ಮಂಡಿಸಬಹುದು.

ಅಧ್ಯಕ್ಷರುಃ ಈಗ ಬೇರೆ ಇಲಾಖಾ ಮಂತ್ರಿಗಳ ಪರವಾಗಿಯೂ ಬೇಡಿಕೆಗಳನ್ನು ಮಂಡಿಸಬಹುದು.

ಶ್ರೀ ವಾಟಾಳ್ ನಾಗರಾಜ್ಃ ಖಂಡಿತ ಆಗುವುದಿಲ್ಲ ಅದು ಸಂಪ್ರದಾಯವೂ ಅಲ್ಲ. ಕಾಗದ ಪತ್ರಗಳನ್ನು ಮಂಡಿಸಬಹುದಷ್ಟೇ ಹೊರತು, ಮಂತ್ರಿಗಳಾದವರು ತಮ್ಮ ಇಲಾಖಾ ಬೇಡಿಕೆಗಳನ್ನು ಅವರೇ ಮಂಡಿಸಬೇಕಾಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್: ನಾನೇ ಉದ್ದೇಶಪೂರ್ವಕವಾಗಿ ಬೇಡವೆಂದು ಹೇಳಿದೆ. ಸನ್ಮಾನ್ಯ ಅಧ್ಯಕ್ಷರೆ, ಹಿಂದೆ ಈ ತರಹದಲ್ಲಿ ಮಂತ್ರಿಗಳಲ್ಲ, ಸಚಿವ ಸಂಪುಟದ ಯಾರಾದರೊಬ್ಬರು ಇದನ್ನು ಮಂಡಿಸುವುದಕ್ಕೆ ಸಾಧ್ಯತೆ ಇದೆ. ಅದಕ್ಕೆ ನಿಯಮಾವಳಿಗಳಲ್ಲಿ ಅವಕಾಶವೂ ಇದೆ. ಆದರೆ, ತಮ್ಮ ಪ್ರಶ್ನೆ ಇಷ್ಟೇ ಬರುತ್ತದೆ. ಇದರಲ್ಲಿ ಬಹಳ ಪಟ್ಟಿ ಮಾಡಿದ್ದಾರೆ. ಆದುದರಿಂದ, ಯಾವುದೇ ಒಂದು ಪಟ್ಟಿಗೆ, ಇಲಾಖೆಗೆ ನಾವು ನ್ಯಾಯವನ್ನು ಒದಗಿಸಿಕೊಡುವುದಕ್ಕಾಗುವುದಿಲ್ಲ. ಲೋಕೋಪಯೋಗಿ ಇಲಾಖೆಯ ಸಚಿವರು ಈಗ ಬಂದಿರುವುದರಿಂದ ಒಟ್ಟು ಆರಕ್ಕೆ ಸೀಮಿತಗೊಳಿಸಿದರೆ, ಒಂದು ಅರ್ಥಪೂರ್ಣ ಚರ್ಚೆಯಾಗುತ್ತದೆ. ಮತ್ತು ಉತ್ತರ ಕೊಡುವುದಕ್ಕೂ ಆಗುತ್ತದೆ. ಬೇಡಿಕೆಗಳ ಸಂಖ್ಯೆ 14 ಮತ್ತು 15 ಅನ್ನು ಒಂದು ಕಡೆ ಸೇರಿಸಿದರೆ, ಉತ್ತರ ಕೊಡಲು ಏನಾಗುತ್ತದೆಂದರೆ, ನಮಗೆ ಕನಿಷ್ಠ ಎರಡು ತಾಸು ಬೇಕಾಗುತ್ತದೆ. ಈಗ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ನಿಯಮ 69ರ ಕೆಳಗೆ ಪರಿವರ್ತನೆ ಮಾಡಿದಿರಿ. ಇಲ್ಲಿಯವರೆಗೂ ಅವಕಾಶ ಬರಲಿಲ್ಲ. ಆಪಾದನೆ ಮಾಡಿರತಕ್ಕಂಥಾದ್ದು ಪತ್ರಿಕೆಗಳಲ್ಲಿ ಬಂತು. ಸರ್ಕಾರ ಏನು ಉತ್ತರ ಕೊಡಬೇಕಾಗಿತ್ತು, ನಿಯಮ 69 ಚರ್ಚೆಗೇ ಬರಲಿಲ್ಲ. ಅಡ್ಜರ್ನಮೆಂಟ್ ಮೋಷನ್ ಅನ್ನು ನಿಯಮ 69ಕ್ಕೆ ಕನ್‌ವರ್ಟ್ ಮಾಡಿದಿರಿ. ಈ ರೀತಿ ಬೆಡಿಕೆಗಳಾದ 14 ಮತ್ತು 15 ಅನ್ನು ಒಂದು ಪಟ್ಟಿಗೆ ಸೇರಿಸಿಬಿಟ್ಟರೆ, ಉತ್ತರ ಕೊಡಲು ತೊಂದರೆಯಾಗುತ್ತದೆ. ಈಗ ಲೋಕೋಪಯೋಗಿ ಇಲಾಖೆ ಸಚಿವರು ತಮ್ಮ ಅನುದಾನದ ಬೇಡಿಕೆಯನ್ನು ಮಂಡಿಸುತ್ತಾರೆ. ಈ ಆರು ಬೇಡಿಕೆಗಳಿಗೆ ಸೀಮಿತಗೊಳಿಸಿ ಇವೊತ್ತು ಚರ್ಚೆಯಾಗಲಿ.

ಬೇಡಿ ಕೆಗಳ ಸಂಖ್ಯೆ 20, 24 – ಇಂಧನ ಮತ್ತು ಲೋಕೋಪಯೋಗಿ ಕಾಮಗಾರಿ

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು): ಮಾನ್ಯ ಸಭಾಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31.3.2006 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮ ಸಂಖ್ಯೆ 24, 20ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವು ಸೇರಿದಂತೆ ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಗೋವಿಂದಪ್ಪ ಮಕಟಪ್ಪ ಕಾರಜೋಳ: ಅಧ್ಯಕ್ಷರೆ, ಉಳಿದ ಇಲಾಖೆಗಳ ಬೇಡಿಕೆಗಳನ್ನೂ ಮಂಡಿಸುವುದಕ್ಕೆ ಹೇಳಿಬಿಡಿ.

ಅಧ್ಯಕ್ಷರು: ಮಂತ್ರಿಗಳು ಸದನಕ್ಕೆ ಬಂದಂತೆಲ್ಲಾ ಬೇಡಿಕೆಗಳನ್ನು ಮಂಡಿಸುತ್ತಾರೆ, ಬಿಡಿ. ಈಗ ಇದರ ಬಗ್ಗೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ತೀರಾ ಆಗುವುದಿಲ್ಲವೆಂದರೆ, ನಾನೂ ಒಂದೆರಡು ಬಡೆಇಕೆಗಲನ್ನು ಮಂಡಿಸಿಬಿಡುತ್ತೇನೆ. ತಾವು ಅವಕಾಶ ಕೊಟ್ಟರೆ ಒಂದೆರಡು ಮೂರು ಬೇಡಿಕೆಗಳನ್ನು ನಾವೇ ಮಂಡಿಸಿಬಿಡುತ್ತೇವೆ. ಆಮೇಲೆ ಒಟ್ಟಿಗೆ ಎಲ್ಲವನ್ನೂ ನೋಡಿಕೊಳ್ಳೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಜೆಂಡಾದಲ್ಲಿ ನೀವು 14, 16 ಬೇಡಿಕೆಗಳನ್ನು ಮಂಡಿಸಿದ ನಂತರದಲ್ಲಿ ನಾವು ನಮ್ಮ ಸದಸ್ಯರುಗಳಿಗೆ ಈ ಎಲ್ಲಾ ವಿಷಯಗಳ ಬಗ್ಗೆ ಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕೆ ವಿನಂತಿಸಿಕೊಂಡಿರುವುದರಿಂದ ಅವರುಗಳು ಬೇರೆ ಬೇರೆ ಬೇಡಿಕೆಗಳ ಬಗ್ಗೆ ಮಾತನಾಡುವುದಕ್ಕೆ ಸಿದ್ಧತೆ ಮಾಡಿಕೊಂಡಿದ್ದಾರೆ.

ಶ್ರೀ ಬಿ. ಶಿವರಾಂ: ಎಲ್ಲಾ ಬೇಡಿಕೆಗಳನ್ನೂ ಮಂಡಿಸುವುದು ಒಳ್ಳೆಯದು. ಚರ್ಚೆಗೆ ಅನುಕೂಲವಾಗುತ್ತದೆ. ಎಲ್ಲವನ್ನೂ ಕವರ್ ಮಾಡಿದಂತಾಗುತ್ತದೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ: 15 – ಮಾಹಿತಿ ತಂತ್ರಜ್ಞಾನ

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) (ಸಣ್ಣ ಉಳಿತಾಯ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರ ಪರವಾಗಿ): ಮಾನ್ಯ ಸಭಾಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 21.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 15ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವನ್ನು ಸೇರಿದಂತೆ ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ.

ಬೇಡಿಕೆ ಸಂಖ್ಯೆ: 5, 21 – ಒಳಾಡಳಿತ, ಸಾರಿಗೆ ಮತ್ತು ಜಲ ಸಂಪನ್ಮೂಲ

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರ ಪರವಾಗಿ): ಮಾನ್ಯ ಸಭಾಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 5 ಹಾಗು 21ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವು ಸೇರಿದಂತೆ ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ: 2, 4, 19, 25 – ಪಶು ಸಂಗೋಪನೆ, ಮೀನುಗಾರಿಕೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ, ನಗರಾಭಿವೃದ್ಧಿ, ಹಾಗೂ ಕನ್ನಡ ಮತ್ತು ಸಂಸ್ಕೃತಿ

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಸಭಾಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 2, 4, 19 ಹಾಗೂ 25ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವು ಸೇರಿದಂತೆ ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ: 13 – ಆಹಾರ ಮತ್ತು ನಾಗರಿಕ ಸರಬರಾಜು

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರ ಪರವಾಗಿ): ಮಾನ್ಯ ಸಭಾಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 13ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವು ಸೇರಿದಂತೆ ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ: 27, 28 – ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 27 ಹಾಗೂ 28ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವು ಸೇರಿದಂತೆ ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ: 3 ಮತ್ತು 26 ಆರ್ಥಿಕ, ಯೋಜನೆ ಮತ್ತು ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) (ಉಪ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಸಭಾಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 3 ಹಾಗೂ 26ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವು ಸೇರಿದಂತೆ ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಬೇಡಿಕೆ ಸಂಖ್ಯೆ: 8 – ಅರಣ್ಯ ಜೀವಪರಿಸ್ಥಿತಿಶಾಸ್ತ್ರ ಮತ್ತು ಪರಿಸರ

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ 31.3.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 8ಕ್ಕೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನೂ ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವು ಸೇರಿದಂತೆ ಮಂಜೂರು ಮಾಡುವ ಅನುದಾನದ ಬೇಡಿಕೆಯನ್ನು ಮಂಡಿಸುತ್ತಿದ್ದೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

(ಆ) ಅನುದಾನ ಬೇಡಿಕೆಗಳ ಮೇಲೆ ಚರ್ಚೆ

ಶ್ರೀ ಗೋವಿಂದಪ್ಪ ಮಕಟಪ್ಪ ಕಾರಜೋಳ(ಮುಧೋಳ): ಮಾನ್ಯ ಅಧ್ಯಕ್ಷರೆ, 2005–06ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊಟ್ಟಮೊಲನೆಯದಾಗಿ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಧ್ಯಕ್ಷರೆ, ನೀರಾವರಿ ಯೋಜನೆಗಳು ಈ ರಾಜ್ಯದಲ್ಲಿ ಬಚಾವತ್ ತೀರ್ಪಿನ ಪ್ರಕಾರ ಕೃಷ್ಣಾ ಕಣಿವೆ ಯೋಜನೆಯಲ್ಲಿ ಸುಮಾರು 734 ಟಿಎಂಸಿಯಷ್ಟು ನೀರು ಹಂಚಿಕೆಯಾಗಿದೆ. ಹಂಚಿಕೆಯಾಗಿ ಮೇ 2000ರ ಒಳಗಾಗಿ ನಮಗೆ ಹಂಚಿಕೆಯಾದ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ನೀರಾವರಿ ಮಾಡಬೇಕಾಗಿತ್ತು. ಆದರೆ, ಸರ್ಕಾರ ಸಂಪೂರ್ಣ ವಿಫಲವಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆಲಮಟ್ಟಿ ಅಣೆಕಟ್ಟಿನಲ್ಲಿ, ಕೃಷ್ಣಾ ಮೇಲ್ದಂಡೆಯಲ್ಲಿ ಬರುವ ಯೋಜನೆಗಳಲ್ಲಿ 173 ಟಿಎಂಸಿಯಷ್ಟು ನಾವು ಆಲಮಟ್ಟಿ ಜಲಾಶ ಯದಲ್ಲಿ ಸಂಗ್ರಹಿಸಿದ ನೀರನ್ನು ಉಪಯೋಗಿಸಿಕೊಂಡು ಸುಮಾರು 6 ಲಕ್ಷ 22 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನಾವು ನೀರನ್ನು ಈಗಾಗಲೇ ಕೊಡಬೇಕಾಗಿತ್ತು. ಆದರೆ, ಇವೊತ್ತು ಮೇ 2005 ಜುಲೈ ಬಂದರೂ ಕೂಡ ನಾವು ಕೇವಲ 4 ಲಕ್ಷ 65 ಸಾವಿರ ಹೆಕ್ಟೇರ್‌ಗಳಿಗೆ ಮಾತ್ರ ನೀರಾವರಿ ಮಾಡಿದ್ದೇವೆ. ಇನ್ನೂ ಒಂದೂವರೆ ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಮಾಡುವುದಕ್ಕೆ ನಮ್ಮಿಂದ ಆಗಿಲ್ಲ. ಅದರಲ್ಲೂ ವಿಶೇಷವಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯ ಹಿನ್ನೀರಿನಲ್ಲಿ ಬಾಧಿತ ಪ್ರದೇಶದ ಜನರೇನಿದ್ದಾರೆ, ಅವರಿಗೆ ಅಲ್ಪಸ್ವಲ್ಪ ಉಳಿದ ನೀರನ್ನು ಒದಗಿಸಿಕೊಡುವುದಕ್ಕೆ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಈ ದೇಶದಲ್ಲಿ ಭೀಮಾ ನದಿ ದಂಡೆ ಮೇಲಿರುವ ಅತ್ಯುತ್ತಮವಾದ ಫಲವತ್ತಾದ ಭೂಮಿ ಬಿಟ್ಟರೆ, ನಮ್ಮ ರಾಜ್ಯದ ಕೃಷ್ಣಾ ನದಿ ಭೂಮಿಯೇ ಅತ್ಯಂತ ಫಲವತ್ತಾದ ಭೂಮಿಯಾಗಿದೆ. ಕೃಷ್ಣಾ ಬೇಸಿನ್‌ನಲ್ಲಿ ನಾವು ಒಟ್ಟಾರೆ ಸುಮಾರು 3 ಲಕ್ಷ 25 ಸಾವಿರ ಎಕರೆಗಳಷ್ಟು ಫಲವತ್ತಾದ ಭೂಮಿಯನ್ನು ನಾವು ಕಳೆದುಕೊಂಡಿದ್ದೇವೆ. ಈ ರೀತಿ ಭೂಮಿ ಕಳೆದುಕೊಂಡ ಜನರ ಅನುಕೂಲಕ್ಕಾಗಿ 'ಎ' ಸ್ಕೀಮ್‌ನಲ್ಲಿ ಹಂಚಿಕೆಯಾದ ನೀರಿನಲ್ಲಿ ಕೆಲವು ಯೋಜನೆಗಳನ್ನು ಸರ್ಕಾರ ಹಾಕಿಕೊಂಡಿದೆ. ಯೋಜನೆಗಳು ಹೆಚ್ಚಿಗೆ ಬರತಕ್ಕಂಥಾದ್ದು ಬಿಜಾಪುರ, ಬಾಗಲಕೋಟೆ, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ. ಈ ಭೂಮಿಗೆ ನೀರು ಹರಿಸಲು ನಾರಾಯಣಪುರ ಲೆಫ್ಟ್

ಬ್ಯಾಂಕ್ ಕೆನಾಲ್‌ಗೆ ನೀರು ಅಲೋಕೇಶನ್ ಆದುದ್ದು, 114.450 ಟಿಎಂಸಿ 4 ಲಕ್ಷ ಹೆಕ್ಟೇರ್‌ಗಳಷ್ಟು ನೀರಾವರಿ ಮಾಡಬೇಕಾಗಿದೆ. ಆದರೆ, ಇದುವರೆಗೂ ನಮಗೆ ಸಂಪೂರ್ಣ ನೀರಾವರಿ ಮಾಡುವುದಕ್ಕಾಗಿಲ್ಲ.

ಆಲಮಟ್ಟಿ left bank cannel 4.5 ಟಿ.ಎಂ.ಸಿ. ನೀರನ್ನು ಅಲೋಕೇಷನ್ ಮಾಡಿದ್ದರು, 1 ಲಕ್ಷದ 62 ಸಾವಿರ ಹೆಕ್ಟೇರ್ ನಾವು ನೀರಾವರಿ ಮಾಡಬೇಕಾಗಿತ್ತು, ಆದರೆ ಇದುವರೆಗೆ ಪೂರ್ಣವಾಗಿ ಮಾಡುವುದಕ್ಕಾಗಿಲ್ಲ. ನಾರಾಯಣ್‌ಪುರ್ right bank cannelಗೆ 23 ಟಿ.ಎಂ.ಸಿ. ನೀರು ಹಂಚಿಕೆಯಾಗಿದ್ದು ಪಾಯಿಂಟ್ 84 ಲಕ್ಷ ಹೆಕ್ಟೇರ್ ನೀರಾವರಿಯಾಗಬೇಕಾಗಿತ್ತು, ಇದುವರೆಗೆ ಕೇವಲ ಪಾಯಿಂಟ್ ಐದು ಲಕ್ಷ ಹೆಕ್ಟೇರ್ ಆಗಿದೆ. ಇಂಡಿ ಲಿಫ್ಟ್ ಇರಿಗೇಷನ್, ಬರಗಾಲಕ್ಕೆ ಹೆಸರಾದಂಥ ಇಂಡಿ ತಾಲ್ಲೂಕು. ಅಲ್ಲಿ 11.48 ಟಿ.ಎಂ.ಸಿ. ನೀರು ಅಲೋಕೇಷನ್ ಆಗಿತ್ತು 42 ಸಾವಿರ ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸಬೇಕಾಗಿತ್ತು, ಸಾಧನೆ ಇವತ್ತಿಗೂ ಶೂನ್ಯ ಇದೆ. ಒಂದು ಎಕರೆಗೂ ನೀವು ನೀರಾವರಿ ಮಾಡುವುದಕ್ಕಾಗಿಲ್ಲ. ರಾಮ್‌ಪುರ್ ಲಿಫ್ಟ್ ಇರಿಗೇಷನ್, 5.55 ಟಿ.ಎಂ.ಸಿ. ನೀರು ಅಲೋಕೇಷನ್ ಆಗಿತ್ತು, 20 ಸಾವಿರ ಹೆಕ್ಟೇರ್ ನೀರಾವರಿ ಮಾಡಬೇಕಾಗಿತ್ತು, ಆದರೆ ಇವತ್ತಿನವರೆಗೆ ಸಾಧನೆ ಶೂನ್ಯ ಇದೆ. ಆಲಮಟ್ಟಿ ಎಕ್ಸಟೆನ್ಷನ್ left bank cannel 1.11 ಟಿ.ಎಂ.ಸಿ. ನೀರಿನ ಅಲೋಕೇಷನ್ ಇದೆ, 4 ಸಾವಿರ ಹೆಕ್ಟೇರ್ ನೀರಾವರಿ ಮಾಡಬೇಕಾಗಿತ್ತು, ಇವತ್ತಿನವರೆಗೂ ಅದು ಆಗಿಲ್ಲ. ಆಲಮಟ್ಟಿ ರೈಟ್ ಬ್ಯಾಂಕ್ ಕೆನಾಲ್‌ಗೆ 4.41 ಟಿ.ಎಂ.ಸಿ. ನೀರು ಅಲೋಕೇಷನ್ ಆಗಿತ್ತು, 16 ಸಾವಿರ ಹೆಕ್ಟೇರ್ ನೀರಾವರಿ ಮಾಡಬೇಕಾಗಿತ್ತು, ಆದರೆ ಅದೊಂದು ಮಾತ್ರ hundred percent ಸಾಧನೆಯಾಗಿದೆ. ಮುಳುವಾಡ ಏತ ನೀರಾವರಿ, ಬರಗಾಲಕ್ಕೆ ಹೆಸರಾದಂಥ ಬಿಜಾಪುರ ತಾಲ್ಲೂಕಿಗೆ ನೀರಾವರಿ ಯಾಗಬೇಕು. ಅಲ್ಲಿ 8.5 ಟಿ.ಎಂ.ಸಿ. ನೀರು ಅಲೋಕೇಷನ್ ಆಗಿದೆ, ಆದರೆ ಸಾಧನೆ ಸಹ ಶೂನ್ಯ 38 ಸಾವಿರ ಹೆಕ್ಟೇರ್ ನೀರಾವರಿ ನಾವು ಮಾಡಬೇಕಾಗಿತ್ತು. ಆದರೆ ಸಾಧನೆ ಶೂನ್ಯ ಮಾಡುವುದಕ್ಕೆ ಆಗಿಲ್ಲ. ರಾಮ್‌ಟಾಳ್ ಏತ ನೀರಾವರಿ ಸ್ಕೀಮ್ ಸಹ 'ಎ' ಸ್ಕೀಮ್‌ನಲ್ಲಿ ಸೇರಿದೆ, ಅಲ್ಲಿ 5.72 ಟಿ.ಎಂ.ಸಿ. ನೀರು ಅಲೋಕೇಷನ್ ಆಗಿದೆ, 26 ಸಾವಿರ ಹೆಕ್ಟೇರ್ ನೀರಾವರಿಯಾಗಬೇಕಾಗಿತ್ತು, ಆದರೆ ಇವತ್ತಿನವರೆಗೆ ಸಾಧನೆ ಶೂನ್ಯ ಇದೆ. ಮರೋಳ್ ಏತ ನೀರಾವರಿ, ಅದು ಕೂಡ 'ಎ' ಸ್ಕೀಮ್‌ನಲ್ಲಿ ಸೇರಿರುವಂಥದ್ದು, 5.84 ಟಿ.ಎಂ.ಸಿ. ನೀರು ಅಲೋಕೇಷನ್ ಆಗಿದೆ, 26 ಸಾವಿರ ಹೆಕ್ಟೇರ್ ನೀರಾವರಿ ಮಾಡಬೇಕಾಗಿತ್ತು, ಅದೂ ಆಗಿಲ್ಲ.

ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್: ಮಾನ್ಯ ಅಧ್ಯಕ್ಷರೆ, ಒಂದು ವಿಚಾರ, ಮರೋಳ್ ಏತ ನೀರಾವರಿಯ ಬಗ್ಗೆ ಹೇಳಿದಿರಲ್ಲಾ ನೀವು, 5.8 ಟಿ.ಎಂ.ಸಿ. ನೀರಿನಿಂದ 26 ಸಾವಿರ ಹೆಕ್ಟರ್ ಭೂಮಿಗೆ ನೀರಾವರಿಯಾಗುತ್ತದೆ. ರಾಮ್‌ಟಾಳ್ ಮರೋಳ್ ಎರಡೂ ಕೂಡಿ ಒಂದೆಯೇ; ಎ.ಆರ್.ಬಿ.ಸಿ ಸಂಪೂರ್ಣವಾಗಿದೆಯೆಂದು ನೀವು ಹೇಳಿದ್ದೀರಿ, ಆದರೆ ಅಲ್ಲಿ ಕೇವಲ ಒಂದು ಟಿ.ಎಂ.ಸಿ, ನೀರು ಮಾತ್ರ ಉಪಯೋಗ ಮಾಡಿದ್ದಾರೆ, 67 ಕಿಲೋಮೀಟರ್‌ನಲ್ಲಿ ಬರೀ 18 ಕಿಲೋಮೀಟರ್‌ರದ್ದು ಮಾತ್ರ ಮಾಡಿದ್ದಾರೆ.

ಶ್ರೀ ಗೋವಿಂದ ಮಕಟಪ್ಪ ಕಾರಜೋಳ: ನಾನು ಪ್ರಾರಂಭದಲ್ಲೇ ಹೇಳಿದೆ, 2000ದ ಮೇ 31 ರ ಒಳಗಾಗಿ ಸಂಪೂರ್ಣವಾಗಿ ಆಗಬೇಕಾಗಿತ್ತು, ಆಗಿಲ್ಲವೆಂದು. ಅಲ್ಪಸ್ವಲ್ಪ ಅಗಿರಬಹುದು. ಪಾಯಿಂಟ್ ಒಂದು, ಎರಡು ಆಗಿರಬಹುದು. ಅದೇನು ಲೆಕ್ಕಕ್ಕೆ ಬರುವುದಿಲ್ಲ. 'ಬಿ' ಸ್ಕೀಮ್ ಬಗ್ಗೆ, 'ಬಿ' ಸ್ಕೀಮ್‌ನಲ್ಲಿ ನೀರು ಹಂಚಿಕೆಯಾಗಬೇಕಾಗಿತ್ತು. Inter State water dispute Act

1956ರ ಪ್ರಕಾರ ನಮಗೆ ನೀರನ್ನು ಹಂಚಿಕೆ ಆಗಬೇಕಾಗಿದೆ. ಕೇಂದ್ರ ಸರ್ಕಾರ ಈಗಾಗಲೇ ಕಮಿಷನ್‌ನನ್ನು ನೇಮಕ ಮಾಡಿದೆ. ಮೂರು ಜನ ಸದಸ್ಯರಿದ್ದಾರೆ. ನ್ಯಾಯಮೂರ್ತಿಗಳಾದ ಬ್ರಿಜೇಶ್‌ಕುಮಾರ್‌ರವರು, ಸುಪ್ರಿಂ ಕೋರ್ಟ್‌ನ ನಿವೃತ್ತ ನ್ಯಾಯಾಧೀಶರು, ಅದರ ಅಧ್ಯಕ್ಷರಿದ್ದಾರೆ, ಎಸ್.ಪಿ. ಶ್ರೀವಾತ್ಸವರವರು, ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರು, ಅವರು ಸದಸ್ಯರಾಗಿದ್ದಾರೆ, ಡಿ. ಕೆ. ಸೇಠ್‌ರವರು, ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರು, ಅವರು ಸದಸ್ಯರಾಗಿದ್ದಾರೆ. ಅಲ್ಲಿ ರೀಸೆಂಟ್ ಗೇಜಿಂಗ್‌ನ ಪ್ರಕಾರ ಕೃಷ್ಣ ನದಿಯಲ್ಲಿ ಹರಿಯತಕ್ಕಂಥ ನೀರು ಮೂರು ರಾಜ್ಯಗಳಿಗೆ ಹಂಚಿಕೆಯಾಗಬೇಕಾಗುತ್ತದೆ. ಸುಮಾರು 568 ಟಿ.ಎಂ.ಸಿ. ಯಷ್ಟು ನೀರು ಹೆಚ್ಚಿಗೆ ಹರಿಯುತ್ತದೆ, ಅಲೋಕೇಷನ್ ಆಗಬೇಕಾಂಥ ನೀರು, ಅದರಲ್ಲಿ ಕರ್ನಾಟಕಕ್ಕೆ ಶೇಕಡ 50 ರಷ್ಟು ಭಾಗ ನೀರು ಬರಬೇಕಾಗುತ್ತದೆ. ಅಂದರೆ 284 ಟಿ.ಎಂ.ಸಿ. ಯಷ್ಟು ನೀರು ನಮ್ಮ ರಾಜ್ಯಕ್ಕೆ ಬರಬೇಕಾಗುತ್ತದೆ. ಮಹಾರಾಷ್ಟ್ರಕ್ಕೆ 25 ಪರ್‌ಸೆಂಟ್ ಮತ್ತು ಆಂಧ್ರಕ್ಕೆ 25 ಪರ್‌ಸೆಂಟ್. ಇದು ವಸ್ತು ಸ್ಥಿತಿ. ಆದರೆ ಏನಾಗಿದೆಯೆಂದರೆ ಈ 'ಎ' ಸ್ಕೀಮ್‌ನಲ್ಲೇ ನೂರಕ್ಕೆ ತೊಂಬತ್ತರಷ್ಟು ನೀರನ್ನು ಬಳಸಿಕೊಂಡವರಿಗೇನೇ ಸರ್ಕಾರ ಇವತ್ತು ಮತ್ತೆ ಎರಡನೆ ಹಂತದ್ದು ಅಂದರೆ 'ಬಿ' ಸ್ಕೀಮ್‌ನಲ್ಲಿ ಬರತಕ್ಕ ಯೋಜನೆಗಳಲ್ಲೂ ಕೂಡ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಮೂಲಭೂತ ವ್ಯವಸ್ಥೆಯನ್ನು ಮಾಡಿ ಅಲ್ಲಿಯೇ ಮೊದಲು ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂದು ವಿಚಾರವನ್ನು ಇಟ್ಟುಕೊಂಡಿದ್ದಾರೆ. ಯಾರು ಈ ದೇಶಕ್ಕಾಗಿ ತಮ್ಮ ಸರ್ವಸ್ವವನ್ನೇ ತ್ಯಾಗ ಮಾಡಿ, ಮನೆ ಮಠ ಮುಳುಗಿಸಿ ನಿರಾಶ್ರಿತರಾಗಿದ್ದಾರೆ, ಆ ಜನಾಂಗದವರ ಸಲುವಾಗಿ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ. ಈಗಾಗಲೇ 'ಬಿ' ಸ್ಕೀಮ್‌ನಲ್ಲೆ ಏನೇನು ಹಂಚಿಕೆ ಆಗತಕ್ಕ ನೀರನ್ನು ಗಮನದಲ್ಲಿ ಇಟ್ಟುಕೊಂಡು ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಿ ಮಾಡಿದ್ದರೆ ಅನುಕೂಲವಾಗುತ್ತಿತ್ತು. ಅದರೆ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ನಮ್ಮ ನೆರೆಯ ರಾಜ್ಯವಾದ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದವರು 'ಬಿ' ಸ್ಕೀಮ್‌ಗಿಂತಲೂ ಹೆಚ್ಚಿಗೆ, ಏನು 'ಬಿ' ಸ್ಕೀಮ್‌ನಲ್ಲಿ ಅವರಿಗೆ ಬರಬೇಕಾಗಿದೆ ಅದಕ್ಕಿಂತಲೂ ಹೆಚ್ಚಿಗೆ ನೀರನ್ನು ಅವರು ಉಪಯೋಗ ಮಾಡಿಕೊಂಡಿದ್ದಾರೆ. ಮುಂದೆ ಕೂಡ ಅವರೇ ಉಪಯೋಗ ಮಾಡಿಕೊಳ್ಳಲು ಯೋಜನೆಗಳನ್ನು ಪ್ರಾರಂಭ ಮಾಡಿದ್ದಾರೆ. ಇವತ್ತು ಮಹಾರಾಷ್ಟ್ರದ್ದು ಒಂದು ಉದಾಹರಣೆಯನ್ನು ತಮಗೆ ಹೇಳುತ್ತೇನೆ. ಭೀಮಾ ನದಿಯ ಪರಿಸ್ಥಿತಿ, ಭೀಮ ನದಿ ಮಹಾರಾಷ್ಟ್ರದ ಪುಣೆ ಜಿಲ್ಲೆಯ ಪಶ್ಚಿಮ ಘಟ್ಟದಲ್ಲಿ ಭೀಮಾ ಶಂಕರ್‌ನಲ್ಲಿ ಉಗಮವಾದಂಥ ನದಿ. ಸುಮಾರು 535 ಮೈಲಿ ಮೂರು ರಾಜ್ಯಗಳಲ್ಲಿ ಹರಿಯುತ್ತದೆ. ಮಹಾರಾಷ್ಟ್ರದಲ್ಲಿ 303 ಮೈಲಿ, ಕರ್ನಾಟಕದಲ್ಲಿ 186 ಮೈಲಿ, ಆಂಧ್ರ ಪ್ರದೇಶದಲ್ಲಿ 6 ಮೈಲಿ ಹರಿಯುತ್ತದೆ. ಬಚಾವತ್ ತೀರ್ಪಿನ ಪ್ರಕಾರ ಅಲೋಕೇಷನ್ ಆದದ್ದು ಮೂರು ರಾಜ್ಯಕ್ಕೆ ನೀರು, 95 ಟಿ.ಎಂ.ಸಿ. ಮಹಾರಾಷ್ಟ್ರಕ್ಕೆ, 15 ಟಿ.ಎಂ.ಸಿ. ಕರ್ನಾಟಕಕ್ಕೆ 8 ಟಿ.ಎಂ.ಸಿ. ಆಂಧ್ರಪ್ರದೇಶಕ್ಕೆ ಹಂಚಿಕೆಯಾಗಿದೆ. ಆದರೆ ಮಹಾರಾಷ್ಟ್ರದವರು ಈಗಾಗಲೇ 250 ಟಿ.ಎಂ.ಸಿ. ಯಷ್ಟು ನೀರನ್ನು ಉಪಯೋಗ ಮಾಡಿಕೊಂಡಿದ್ದಾರೆ. 95 ಟಿ.ಎಂ.ಸಿ. ಬದಲಾಗಿ ಈಗಾಗಲೇ ಅವರು 250 ಟಿ.ಎಂ.ಸಿ. ಬಳಕೆ ಮಾಡಿಕೊಂಡಿದ್ದಾರೆ. ಯಾವ ರೀತಿ ಬಳಕೆ ಮಾಡಿಕೊಂಡಿದ್ದಾರೆಂದರೆ, 160 ಜಲಸಂಗ್ರಹಗಳನ್ನು ನಿರ್ಮಿಸಿ ನೀರಾವರಿ ಮಾಡಿಕೊಂಡಿದ್ದಾರೆ. ಟಾಟಾ ಜಲ ವಿದ್ಯುತ್ ಯೋಜನೆಗೆ 90 ಟಿ.ಎಂ.ಸಿ.ಯನ್ನು ಉಪಯೋಗ ಮಾಡಿಕೊಂಡಿದ್ದಾರೆ. ಹೀಗಾಗಿ ಅವರು ಒಟ್ಟಾರೆ 250 ಟಿ.ಎಂ.ಸಿ. ಯಷ್ಟು ನೀರನ್ನು ಉಪಯೋಗ ಮಾಡಿಕೊಂಡಿದ್ದಾರೆ. ಮಹಾರಾಷ್ಟ್ರದವರು ಪರ್ಮಿಷನ್ ಇಲ್ಲದೆಯೆ ಅನಧಿಕೃತವಾಗಿ 71 ಜಲ ಸಂಗ್ರಹಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಅಣೆಕಟ್ಟುಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಅದರಲ್ಲಿ 39 already completed ಆಗಿದೆ, 19 ಪ್ರೋಗ್ರೆಸ್‌ನಲ್ಲಿದೆ, 13ರನ್ನೂ ಪ್ರಾರಂಭ ಮಾಡಬೇಕಾಗಿದೆ. ಇದು ಮಹಾರಾಷ್ಟ್ರದ ಪರಿಸ್ಥಿತಿ.

ಮಹಾರಾಷ್ಟ್ರದವರು ಅಷ್ಟನ್ನೇ ಮಾಡಲಿಲ್ಲ, 2000 ಇಸವಿಯಲ್ಲಿ ಭೀಮಾ ನದಿಯನ್ನು ಸುರಂಗ ಮಾರ್ಗದ ಮೂಲಕ 19.5 ಕಿಲೋಮೀಟರ್ ಸುರಂಗ ಮಾರ್ಗ ನಿರ್ಮಾಣ ಮಾಡಿ ಸಂಪೂರ್ಣ ನದಿಯನ್ನೇ ಡೈವರ್ಟ್ ಮಾಡಿಕೊಂಡಿದ್ದಾರೆ. ನಮ್ಮ ಸರ್ಕಾರ ಏನು ಮಾಡುತ್ತಿದೆ? ಕಣ್ಣುಮುಚ್ಚಿಕೊಂಡು ಕುಳಿತಿದೆ ಕಣ್ಣಿಲ್ಲವೆ ಸರ್ಕಾರಕ್ಕೆ? ಹೇಳಿದರೆ ಕೇಳಿಸಿಕೊಳ್ಳಲು ಕಿವಿಯೂ ಸರ್ಕಾರಕ್ಕೆ ಇಲ್ಲವೆಂದು ಹೇಳಬೇಕಾಗುತ್ತದೆ. ಇಂಥ ಒಂದು ಕೆಟ್ಟ ಪರಿಸ್ಥಿತಿ ಇವತ್ತು ಇದೆ. 2000ದ ಇಸವಿಯಿಂದ ಭೀಮಾ ಪರಿಸ್ಥಿತಿಯಾಗಿದೆ. ರೈತರು ಸ್ವತಃ ಹೋರಾಟ ಮಾಡಿದ್ದಲ್ಲದೆ ಸುಪ್ರಿಂ ಕೋರ್ಟ್‌ಗೆ ಹೋಗಿ ಆದೇಶ ತೆಗೆದುಕೊಂಡು ಬಂದಿದ್ದಾರೆ. ಆದೇಶ ತೆಗೆದುಕೊಂಡು ಬಂದರೂ ಕೂಡ ಮಹಾರಾಷ್ಟ್ರ ಸರ್ಕಾರದ ಜೊತೆಯಲ್ಲಿ ಮಾತುಕತೆಯಾಡಿ ಬಗೆಹರಿಸಲು ಈ ಸರ್ಕಾರಕ್ಕೆ ಆಗಲಿಲ್ಲ. ಇದು ನಾಚಿಗೇಡಿನ ಸಂಗತಿ. ಒಂದು ನಾಗರೀಕ ಸರ್ಕಾರವಿದ್ದರೆ ನಮ್ಮ ನೆಲ, ಜಲ ಸಂರಕ್ಷಣೆ ಮಾಡತಕ್ಕ ಜವಾಬ್ದಾರಿಯನ್ನು ಹೊತ್ತುಕೊಂಡು ಮಾಡಬೇಕಾಗಿತ್ತು, ಆದರೆ ಇವತ್ತು ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಮಹಾರಾಷ್ಟ್ರದವರು ಬಚಾವತ್ ತೀರ್ಪನ್ನು ಉಲ್ಲಂಘನೆ ಮಾಡಿದ್ದಾರೆಂದು ಸರ್ವ ಪಕ್ಷದ ನಿಯೋಗವನ್ನು ಒಯ್ದು ಪ್ರಧಾನ ಮಂತ್ರಿಗಳಿಗೆ, ಸಂಬಂಧಪಟ್ಟ ಮಂತ್ರಿಗಳಿಗೆ ಭೇಟಿಯಾಗಿ ಆ ಯೋಜನೆಗಳನ್ನು ತಡೆಹಿಡಿಯಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಬೀಳಗಿ ಮತ್ತು ಜಮಖಂಡಿ ತಾಲ್ಲೂಕು ಹೆಚ್ಚು ಭಾದಿತ ಪ್ರದೇಶ, ಹಳ್ಳಿಗಳು ಮುಳುಗಡೆಯಾಗಿದೆ, ಜಮೀನುಗಳು ಮುಳುಗಡೆಯಾಗಿದೆ, ಅಥಣಿ ತಾಲ್ಲೂಕಿನಲ್ಲಾಗಿದೆ, ಮುದ್ದೇಬಿಹಾಳ್ ತಾಲ್ಲೂಕಿನಲ್ಲಾಗಿದೆ, ಬಾಗೇವಾಡಿ ತಾಲ್ಲೂಕಿನಲ್ಲಾಗಿದೆ, ಈ ಜನರ ಸಂರಕ್ಷಣೆಗಾಗಿ ನೀರಾವರಿ ಮಾಡಬೇಕಾದದ್ದು ಸರ್ಕಾರದ ಸಂಪೂರ್ಣವಾದ ಜವಾಬ್ದಾರಿಯಾಗಿದೆ. ಸರ್ಕಾರ ಇದುವರೆಗೂ ಆ ಜವಾಬ್ದಾರಿಯನ್ನು ನಿರ್ವಹಿಸಿಲ್ಲವೆಂದು ಈ ಸಂದರ್ಭದಲ್ಲಿ ನಾನು ಬಹಳ ನೊಂದು ಹೇಳಬೇಕಾಗುತ್ತದೆ. ಈ ನೀರಾವರಿ ಯೋಜನೆಗಳನ್ನು ನಾವು ಎಷ್ಟು ಉಪಯೋಗ ಮಾಡಿಕೊಂಡಿದ್ದೇವೆಂದರೆ ಸುಮಾರು 500 ಟಿ.ಎಂ.ಸಿ. ಯಷ್ಟು ನಾವು ಉಪಯೋಗ ಮಾಡಿಕೊಂಡಿದ್ದೇವೆ. ಮುಂದೆ ಏನು ಸರ್ಪ್ಲಸ್, ಅಂದರೆ ನಮಗೆ ಹಂಚಿಕೆಯಾದಂಥ ನೀರು ಸುಮಾರು 225 ಟಿ.ಎಂ.ಸಿ. ಗಿಂತ ಹೆಚ್ಚು ನೀರನ್ನು ನಾವು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಆದರೆ ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸರ್ಕಾರದ ಇಚ್ಛಾಶಕ್ತಿಯ ಕೊರತೆ ಇದೆ. ಸರ್ಕಾರ ಇವತ್ತು ಬಜೆಟ್‌ನಲ್ಲಿ ಎಂಟು ಇಲ್ಲವೆ ಹತ್ತು ಸಾವಿರ ಕೋಟಿಯನ್ನು ಇಟ್ಟು ಈ ಕಾಲಮಿತಿಯೊಳಗೆ ಈ ಯೋಜನೆಗಳನ್ನು ಪೂರ್ಣ ಮಾಡಿದ್ದರೆ ನಾಡಿನ ರೈತರ ಭವಣೆಯನ್ನು ತಪ್ಪಿಸಲು ಸಾಧ್ಯವಾಗುತ್ತಿತ್ತು. ಆದರೆ ಇವತ್ತು ಸರ್ಕಾರ ಆ ಕೆಲಸ ಮಡುವುದಕ್ಕೆ ಸಂಪೂರ್ಣವಾಗಿ ವಿಫಲವಾಗಿದೆ. ಇವತ್ತು ಸಣ್ಣ ನೀರಾವರಿ ವಿಚಾರದ ಬಗ್ಗೆ, ನಂಜುಂಡಪ್ಪ ವರದಿಯ ಪ್ರಕಾರ ಏನು ಉತ್ತರ ಕರ್ನಾಟಕದ ಹಿಂದುಳಿದಂಥ ಜಿಲ್ಲೆಗಳು ಇದ್ದಾವೆ, ಅಲ್ಲಿ ಕೆರೆಕಟ್ಟೆಗಳ ಸಂಖ್ಯೆ ಬಹಳ ಕಡಿಮೆ ಇದೆ. ಕೆರೆಗಳನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರ ಯಾವುದೇ ಒಂದು ನಿರ್ದಿಷ್ಟವಾದ ಯೋಜನೆಗಳನ್ನು ಹಾಕಿಕೊಂಡಿಲ್ಲ. ಇವತ್ತು ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಮಾಡುತ್ತೇನೆ. ಕೃಷ್ಣ ಜಲಾಶಯದಿಂದ ಏನು ನೀರು ಇದೆ ಅದನ್ನು ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಬರತಕ್ಕಂಥ ಪ್ರತಿಯೊಂದು ಕೆರೆಗೆ ತುಂಬಿಸುವುದಕ್ಕೆ ಕೆನಾಲ್‌ಗಳ ಮೂಲಕವಾಗಲಿ, ಲಿಫ್ಟ್ ಮೂಲಕವಾಗಲಿ ಮಾಡಿದರೆ ಸರ್ಕಾರಕ್ಕೇನೂ ಬಹಳಹೊರೆಯಾಗುವುದಿಲ್ಲ. ನಾವು ಈಗಾಗಲೇ ಸುಮಾರು ಹತ್ತು ಸಾವಿರ ಕೋಟಿಯಷ್ಟು ಹಣವನ್ನು ಖರ್ಚು ಮಾಡಿ ಕೃಷ್ಣ ಯೋಜನೆಯನ್ನು ಮಾಡಿದ್ದೇವೆ. ಅದೇ ಯೋಜನೆಯ ಅಡಿಯಲ್ಲಿ 250 ರಿಂದ 300 ಕೋಟಿ ರೂ. ಖರ್ಚು ಮಾಡಿದರೆ

ಇಡೀ ಜಿಲ್ಲೆಯಲ್ಲಿ ಇರತಕ್ಕಂಥ ಕೆರೆಕಟ್ಟೆಗಳನ್ನು ತುಂಬುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಸರ್ಕಾರ ಈ ಸಂದರ್ಭದಲ್ಲಿ ತೀವ್ರಗತಿಯಲ್ಲಿ ಸರ್ವೆ ಮಾಡಿಸಿ, ಎಸ್ಟಿಮೇಟ್ಸ್ ಮಾಡಿಸಿ ಮಂಜೂರಾತಿಯನ್ನು ಕೊಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇವತ್ತು ಸರ್ಕಾರ ಈ ವರ್ಷ ಸುಮಾರು 3800 ಕೋಟಿ ರೂ.ನಷ್ಟು ಹಣವನ್ನು ಕೊಡುತ್ತೇವೆಂದು ಬಜೆಟ್‌ನಲ್ಲಿ ಹೇಳಿದ್ದರು. ಪ್ರೋಗ್ರೆಸ್ ನೋಡಿದರೆ ಬಹಳ ಕಡಿಮೆ ಇದೆ. ಅದಕ್ಕೆ ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ, ಸುಮಾರು 8000 ಕೋಟಿ ರೂ. ನಷ್ಟು ಹಣವನ್ನು ತೆಗೆದು ಇಟ್ಟು ಈ ಎಲ್ಲಾ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣ ಮಾಡಬೇಕು. ಮತ್ತು ಏನು ಉತ್ತರ ಕರ್ನಾಟಕದ ಬರಗಾಲ ಜಿಲ್ಲೆಗಳು ಇದ್ದಾವೆ ಆ ಜಿಲ್ಲೆಗಳನ್ನು ನೀರಾವರಿ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇವತ್ತೇನು ನಮಗೆ ಇಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ ಅದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಪಾಪರೆಡ್ಡಿ (ರಾಯಚೂರು) :– ಮಾನ್ಯ ಅಧ್ಯಕ್ಷರೆ, ನಾನು ಒಂದೆರಡು ನಿಮಿಷಗಳ ಕಾಲ ಮಾತನಾಡುತ್ತೇನೆ. ಬಿ ಸ್ಕೀಂ ಪ್ರಕಾರ ನಮ್ಮ ರಾಯಚೂರು ಜಿಲ್ಲೆಗೆ ಬಹಳಷ್ಟು ಅನ್ಯಾಯವಾಗಿದೆ. ನಾನು ಬರುವಂತಹ ಕ್ಷೇತ್ರಕ್ಕೆ 95 ಕಿ.ಮೀ.ವರೆಗೆ...

ಅಧ್ಯಕ್ಷರು :– 10 ನಿಮಿಷಗಳಲ್ಲಿ ನೀವು ಮುಗಿಸಬೇಕು.

ಶ್ರೀ ಎ. ಪಾಪರೆಡ್ಡಿ :– ಬಿ ಸ್ಕೀಂನ ಅಡಿಯಲ್ಲಿ ಈಗಾಗಲೇ 95 ಕಿ.ಮೀ.ವರೆಗೆ ಕಾಲುವೆ ಬಂದಿದೆ. ಅದು 157 ಕಿ.ಮೀ.ವರೆಗೆ ಹೋಗಬೇಕಾಗಿತ್ತು. ಸರ್ಕಾರದ ಸತತವಾದ ನಿರ್ಲಕ್ಷ್ಯದಿಂದ ಅಲ್ಲಿ ಕೆಲಸ ಆಗುತ್ತಿಲ್ಲ. ಚುನಾವಣೆ ಬಂದಾಗ ಎಲ್ಲರೂ 157 ಕಿ.ಮೀ.ವರೆಗೆ ಕಾಲುವೆಯನ್ನು ತೆಗೆದುಕೊಂಡು ಹೋಗುತ್ತೇವೆ, ಕೆಳಭಾಗದಲ್ಲಿ ಇರುವಂತಹ ರೈತರಿಗೆ 1 ಲಕ್ಷ 80 ಸಾವಿರ ಎಕರೆ ಜಮೀನಿಗೆ ನೀರಾವರಿ ಕೊಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಈ ಸರ್ಕಾರ ಬಂದು ಒಂದು ವರ್ಷವಾಯಿತು. ಇನ್ನೂ ಅಲ್ಲಿ ಕಾಲುವೆ ಕೆಲಸ ಪ್ರಾರಂಭವಾಗಿಲ್ಲ. ಬರೇ ಕುಂಟು ನೆಪಗಳನ್ನು ಹೇಳುತ್ತಿದ್ದಾರೆ. 95 ಕಿ.ಮೀ.ನಿಂದ ಮುಂದೆ ಬರುವಂತಹ ಕಿ.ಮೀ.ನಲ್ಲಿ ಬಿ ಸ್ಕೀಂ ಬರುತ್ತಿದೆ. ಬಿ ಸ್ಕೀಂ ಮಾಡಬೇಕಾದರೆ ಕೇಂದ್ರದ ಅನುಮತಿ ಬೇಕು. ಕೇಂದ್ರ ಅನುಮತಿ ಕೊಟ್ಟ ಮೇಲೆ ಆ ಕಾಲುವೆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಕೆಳಗಡೆ ಇದ್ದಂತಹ ಆಂಧ್ರ ಪ್ರದೇಶದವರು ನೆಂಟ್ಟುಪಾಡು ಯೋಜನೆ ಎಂದು ಪ್ರಾರಂಭ ಮಾಡಿದ್ದಾರೆ. ಜುರಾಲಾ ಪ್ರಾಜೆಕ್ಟ್ ಆದ ಮೇಲೆ ಈ ನೆಂಟ್ಟುಪಾಡು ಯೋಜನೆ ಬರುತ್ತದೆ. 1500 ಕೋಟಿ ರೂಪಾಯಿಗಳ ವೆಚ್ಚದ ಯೋಜನೆಗೆ ಇವತ್ತು ಕೇಂದ್ರದ ಅನುಮತಿ ಇಲ್ಲದೆ ಟೆಂಡರ್ ಕರೆದಿದ್ದಾರೆ, ಕೆಲಸ ಪ್ರಾರಂಭವಾಗಿದೆ. ಆದರೆ ನಮ್ಮವರು ನೀರು ಇಟ್ಟುಕೊಂಡರೂ, ಇವತ್ತಿನತನಕ ಕಾಲುವೆ ಕೆಲಸವನ್ನು ಏಕೆ ಪ್ರಾರಂಭ ಮಾಡುತ್ತಿಲ್ಲ? 250 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಕಾಲುವೆ ಆಗುತ್ತದೆ. ಆ ಕಾಲುವೆ ಈಗಲೇ ಆದರೆ, ಯಾವಾಗ ಬಿ ಸ್ಕೀಂ ನಲ್ಲಿ ಮಂಜೂರಾತಿ ಸಿಗುತ್ತದೋ, ಆಗ ನಾವು ಅದರಲ್ಲಿ ನೀರನ್ನು ಬಿಡಬಹುದು. ಬಿ ಸ್ಕೀಂ ಮಂಜೂರಾತಿ ಸಿಕ್ಕಿದ ಮೇಲೆ ನೀವು ಕಾಲುವೆ ಮಾಡಬೇಕಾದರೆ ಮತ್ತೆ 10 ವರ್ಷಗಳಾಗುತ್ತದೆ. ಈಗಲೇ ಆ ಕಾಲುವೆಯನ್ನು ನೀವೇಕೆ ಮಾಡಬಾರದು?

250 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ, 1 ಲಕ್ಷದ 80 ಸಾವಿರ ಎಕರೆ ಜಮೀನಿಗೆ ನೀರಾವರಿ ಮಾಡುವಂತಹ ಕೆಲಸ ಆಗಿಯೇ ಹೋಗುತ್ತದೆ. ಆ ಕಾರಣದಿಂದ ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಒತ್ತಾಯ ಮಡುತ್ತೇನೆ. ಈ ಒಂದು ಕೆಲಸವನ್ನು ಮಾಡಿದರೆ ಅನುಕೂಲವಾಗುತ್ತದೆ. ಸತತವಾಗಿ ಕಳೆದ ಐದು ವರ್ಷಗಳಿಂದ ಬರಗಾಲ ಬರುತ್ತಿದೆ. ಆ ಬರಗಾಲದ ಜನರಿಗೆ ಈ ಕಾಲುವೆ ಬಂದರೆ ವರದಾನವಾಗುತ್ತದೆ ಮತ್ತು ಸಸ್ಯಶಾಮಲವೂ ಸಹ ಬರುತ್ತದೆ. ಆದುದರಿಂದ ಸರ್ಕಾರ ಈ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ. ಅದೇ ತರಹ ನನ್ನ ಕ್ಷೇತ್ರದಲ್ಲಿ ಐದು ಏತ ನೀರಾವರಿಗಳಿವೆ. ಅವು 1978ರಲ್ಲಿ ಮಾಡಿದಂತಹ ಏತ ನೀರಾವರಿಗಳು. ಆ ಭಾಗದಲ್ಲಿ 65 ಹಳ್ಳಿಗಳಲ್ಲಿ 31 ಹಳ್ಳಿಗಳು ಎಲ್ಲಾ ನಕ್ಸಲೈಟ್ ವಾಸ ಮಾಡುವಂತಹ ಹಳ್ಳಿಗಳು. ಅಲ್ಲಿ ಏತ ನೀರಾವರಿಗಳಿವೆ. ಆ ಏತ ನೀರಾವರಿಗಳು, ಕೃಷ್ಣಾ ನದಿ ದಂಡೆ ಮೇಲಿರುವ ಐದು ಸಾವಿರ ಎಕರೆ ಜಮೀನಿಗೆ ನೀರಾವರಿ ಕೊಡುವಂತಹ ಯೋಜನೆಗಳಾಗಿವೆ. ಇವತ್ತು ಅವು ಹಾಳಾಗಿ ನಿಂತು ಬಿಟ್ಟಿವೆ. ಅದರ ಬಗ್ಗೆ ಕಾಳಜಿಯೇ ಇಲ್ಲ. ನಕ್ಸಲೈಟ್ ಹಾವಳಿ ಇರುವಂತಹ ಪ್ರದೇಶಗಳಲ್ಲಿ ಅಭಿವೃದ್ಧಿಯಾಗಬೇಕು, ಸರಿಯಾದಂತಹ ನೀರಾವರಿ ಸೌಲಭ್ಯ ಸಿಗಬೇಕು, ಎಲ್ಲಾ ರೋಡ್‌ಗಳ ವ್ಯವಸ್ಥೆಯಾಗಬೇಕು, ಸ್ಕೂಲುಗಳ ವ್ಯವಸ್ಥೆಯಾಗಬೇಕು ಎಂದು ಎಲ್ಲರೂ ಹೇಳುತ್ತೀರಿ. ಆದರೆ ಇಲ್ಲಿರುವ ಐದು ಏತ ನೀರಾವರಿ ಯೋಜನೆಗಳನ್ನು ಇವತ್ತು ಯಾರೂ ನೋಡುವವರೇ ಇಲ್ಲದಂತಾಗಿದೆ. ಇಲ್ಲಿಯ ಎಲ್ಲಾ ಮೆಷಿನ್ಸ್ ಕೆಟ್ಟು ಹೋಗಿದೆ. 5 ಸಾವಿರ ಎಕರೆಗೆ ನೀರಾವರಿ ಕೊಡುವಂತಹ ಏತ ನೀರಾವರಿಗಳು ಇವತ್ತು ನೂರು ಎಕರೆಗೂ ಕೂಡ ನೀರು ಹರಿಸುತ್ತಿಲ್ಲ. ಅವುಗಳು ರಿಪೇರಿಯಾಗಿಲ್ಲ. ಕರೆಂಟ್ ರೊಕ್ಕ ತುಂಬಿಲ್ಲ, ಆದ್ದರಿಂದ ಕರೆಂಟ್ ಕಟ್ ಮಾಡುತ್ತಿದ್ದಾರೆ. ಸರಿಯಾಗಿ ಕರೆಂಟ್ ನೀಡುವಂತಹ ವ್ಯವಸ್ಥೆಯಾಗುತ್ತಿಲ್ಲ. ಈ ಭಾಗದಲ್ಲಿರುವಂತಹ ನಕ್ಸಲೈಟ್‌ಗಳು ವಾಸ ಮಾಡುವಂತಹ ಹಳ್ಳಿಗಳಲ್ಲಿ ಸುಧಾರಣೆಯಾಗಬೇಕಾದರೆ, ಈ ಏತ ನೀರಾವರಿ ಯೋಜನೆಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡಬೇಕು. ಆಗ ಮಾತ್ರವೇ ಅಲ್ಲಿರುವ ರೈತರಿಗೆ ಉದ್ಯೋಗ ದೊರೆತು, ಅವರು ಒಳ್ಳೆಯ ಬೆಳೆ ಬೆಳೆದು, ಆ ಜನರ ಸುಧಾರಣೆಯಾಗುತ್ತದೆ. ಈ ಸುಧಾರಣೆ ಆಗಬೇಕೆಂದು ನಾವು ಇಲ್ಲಿ ಕುಳಿತು ಚರ್ಚೆ ಮಾಡುತ್ತೇವೆ. ಆದರೆ ವಾಸ್ತವವಾಗಿ ಅಲ್ಲಿ ಇರುವಂತಹ, ಅಲ್ಲಿಯ ಎಂ.ಎಲ್.ಎ.ಗಳಾದ ನಾವುಗಳು ಇವತ್ತು ಆ ಭಾಗದಲ್ಲಿ ಹೋಗಬೇಕಾದರೆ ಅಂಜಿಕೆಯಿಂದ ತಿರುಗಾಡಬೇಕಾಗುತ್ತದೆ, ಅಂಜಿಕೆಯಿಂದ ಓಡಾಡಬೇಕಾಗುತ್ತದೆ. ಅಂತಹ ಪರಿಸ್ಥಿತಿಯನ್ನು ಸರ್ಕಾರ ನಿರ್ಮಾಣ ಮಾಡಿದೆ. ಸರ್ಕಾರ ಈ ಐದು ಏತ ನೀರಾವರಿ ಯೋಜನೆಗಳ ಸುಧಾರಣೆ ಮಾಡಿದರೆ, ಅಲ್ಲಿಯ ಐದು ಸಾವಿರ ಎಕರೆ ಜಮೀನಿಗೆ ನೀರಾವರಿಯಾಗಿ, ಅಲ್ಲಿಯ ಜನರಿಗೆ ಉದ್ಯೋಗಾವಕಾಶ ಸಿಗುತ್ತದೆ, ರೈತರು ತಮ್ಮ ಕಾಲ ಮೇಲೆ ತಾವು ನಿಲ್ಲುತ್ತಾರೆ, ಅವರಿಗೆ ಒಳ್ಳೆಯ ರೊಕ್ಕ ಬಂದು ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸಿ, ಅವರ ಮಕ್ಕಳು ಓದುವಂತಾಗುತ್ತದೆ. ಇವೆಲ್ಲಾ ಅಗಬೇಕಾದರೆ ಆ ಐದು ಏತ ನೀರಾವರಿ ಯೋಜನೆಗಳ ರಿಪೇರಿಯಾಗಬೇಕು. ಸರಿಯಾದ ರೀತಿಯಲ್ಲಿ ನೀರು ಬಿಡುವಂತಹ ವ್ಯವಸ್ಥೆಯಾಗಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಅದೇ ಪ್ರಕಾರ ನಮ್ಮ ಭಾಗದಲ್ಲಿ ಬೂಗಲ್ ಬ್ಯಾರೇಜ್ ಎಂದು ಪ್ರಾರಂಭ ಮಾಡಿದರು. ಸನ್ಮಾನ್ಯ ಮುಖ್ಯಮಂತ್ರಿಗಳು PWD Minister ಆಗಿದ್ದಾಗ ಆ ಯೋಜನೆಗೆ ಅಡಿಗಲ್ಲು ಹಾಕಿದರು. ಅದು ಇವತ್ತು ನಿಂತು ಹೋಗಿ ಬಿಟ್ಟಿದೆ. ಅದು ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ. ಈ right bank canal ಗೆ ಬಂದರೆ, ನಮ್ಮ ರೈತರಿಗಾಗಿ ಎಂದು ಒಂದು ಬೃಹತ್ ಏತ ನೀರಾವರಿ ಯೋಜನೆವೊಂದಿದೆ. ಅದನ್ನು ಸರ್ಕಾರದ ಮುಂದಿಟ್ಟು ಐದು ವರ್ಷಗಳಾಯಿತು. ಆ ಕೆಲಸ ಇನ್ನೂ ಪ್ರಾರಂಭವಾಗಲಿಲ್ಲ.

ಆ ಕೆಲಸ ಪ್ರಾರಂಭ ಮಾಡಿದರೆ ಅಲ್ಲಿ ಒಂದು ಲಕ್ಷ ಎಕರೆಗೆ ನೀರಾವರಿಯಾಗುವಂತಹ ಯೋಜನೆಯಾಗುತ್ತದೆ. ಅದರ ಕೆಲಸ ಕೂಡಲೇ ಪ್ರಾರಂಭವಾಗಬೇಕು. ಅಲ್ಲಿಯ ಹಳ್ಳಿಗಳಲ್ಲಿನ ಜನರಿಗೆ ನೀರಿನ ವ್ಯವಸ್ಥೆಯಾಗಬೇಕು. ಅವರಿಗೆ ಬೆಳೆ ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ (ಹುಕ್ಕೇರಿ) :– ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಅನೇಕ ಡ್ಯಾಮ್‌ಗಳನ್ನು ಮಾಡಲಾಗಿದೆ. ಇದರಲ್ಲಿ ಸಾಕಷ್ಟು ಹಣವನ್ನೂ ಸಹಿತ ತೊಡಗಿಸಲಾಗಿದೆ. ಅನೇಕ ಸ್ಕೀಮ್‌ಗಳು ಅಪೂರ್ಣವಾಗಿವೆ. ಬಚಾವತ್ ಅವಾರ್ಡ್ ಅನ್ನು ನೆನಪಿನಲ್ಲಿಟ್ಟುಕೊಂಡು, ಯೋಜನೆಗಳನ್ನು ಇವತ್ತು ಪೂರ್ತಿಗೊಳಿಸಬೇಕಾಗಿದೆ. ನಮ್ಮ ಪಾಲಿನ ಒಟ್ಟು ನೀರನ್ನು ಇವತ್ತು ಕರ್ನಾಟಕ ಬಳಸಿಕೊಂಡಿಲ್ಲ. ಇದನ್ನೂ ಸಹಿತ ನಾವು ಇವತ್ತು ಬಳಸಿಕೊಳ್ಳಬೇಕಾಗಿದೆ. ರೈತರ ಜಮೀನುಗಳಿಗೆ ನೀರನ್ನು ಒದಗಿಸಿ, ಆರ್ಥಿಕ ಭದ್ರತೆಗೆ ಬುನಾದಿಯನ್ನು ಹಾಕಬೇಕಾಗಿದೆ. ಈ ಹಿನ್ನೆಲೆಯಲ್ಲಿ ನಾವು ಬಹಳಷ್ಟು ಹಿಂದೆ ಬಿದ್ದಿದ್ದೇವೆ. ಪಕ್ಕದ ನೆರೆ ರಾಜ್ಯಗಳು ಇವತ್ತು ತಮ್ಮ ಪಾಲಿನ ಪೂರ್ತಿ ನೀರನ್ನೂ ಸಹಿತ ಬಳಸಿಕೊಂಡಿವೆ. ನನ್ನ ಮತಕ್ಷೇತ್ರದಲ್ಲಿ ಹಿಡಕಲ್ ಜಲಾಶಯ, ರಾಜಾ ಲಕ್ಕಮಗೌಡ ಜಲಾಶಯ ಪೂರ್ತಿಯಾಗಿ ಇಪ್ಪತ್ತು ವರ್ಷಗಳಾಯಿತು. ಇವತ್ತು ನಾವು 24 ಹಳ್ಳಿಗಳನ್ನು ಕಳೆದುಕೊಂಡಿದ್ದೇವೆ. ಆ ಹಳ್ಳಿಯ ರೈತರಿಗೆ ಪೂರ್ತಿ ಪ್ರಮಾಣವಾದಂತಹ ಹಣವನ್ನು ಕೊಟ್ಟೇ ಇಲ್ಲ. ಆ ಭಾಗದಲ್ಲಿ ಅನೇಕ ಸ್ಕೀಮ್‌ಗಳಿವೆ. ಕೊಟ್ಟಬಾಗಿ, ರುಸ್ತುಂಪುರಿ ಏತ ನೀರಾವರಿಗಳನ್ನು ಕಳೆದ 20 ವರ್ಷಗಳಿಂದ ಸರ್ಕಾರ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತಲೇ ಬಂದಿದೆ. ಆದರೆ ಅವುಗಳು ಇವತ್ತಿನವರೆಗೂ ಪೂರ್ತಿಯಾಗಿಲ್ಲ. ಇವತ್ತು ನಿಜವಾಗಿಯೂ ಆ ಭಾಗದ ರೈತರು ಬಹಳಷ್ಟು ತೊಂದರೆಯಲ್ಲಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಸತತ ಬರಗಾಲವನ್ನೂ ಸಹಿತ ಇವತ್ತು ಅನುಭವಿಸುತ್ತಿದ್ದೇವೆ. ಹಿಡಕಲ್ ಡ್ಯಾಮ್‌ನ ನೀರು ಇವತ್ತು ಬಿಜಾಪುರ, ಬೀಳಗಿಯವರೆಗೆ ಸಹಿತ ಹೋಗುತ್ತದೆ. ಅಲ್ಲಿಯ ಕೆಳಗಡೆ ಒಂದು ಹತ್ತು ಕಿ.ಮೀ.ಗಳವರೆಗೆ ನೀರು ಬಂದಿಲ್ಲ ಈ ವ್ಯವಸ್ಥೆಯನ್ನೂ ಸಹಿತ ಬೇಗ ಮುಗಿಸಲು ಹೇಳಬೇಕು. ಅದರ ಜೊತೆಗೆ ಇವತ್ತು ಚಿಕ್ಕೋಡಿ ಮತ್ತು ನಿಪ್ಪಾಣಿ ಭಾಗದಲ್ಲೂ ಸಹಿತ ಅನೇಕ ರೈತರು ಬರಗಾಲಕ್ಕೆ ತುತ್ತಾಗಿದ್ದಾರೆ.

ಮೂರನೇ ಸ್ಕೀಂ ಮಾಡಿ ಕರಗಾವ್ ಏತ ನೀರಾವರಿ ಎಂದು ಈಗಾಗಲೇ ಸರ್ಕಾರದಲ್ಲಿ ಪ್ರಸ್ತಾವನೆ ಇದೆ, ಅದನ್ನು ಸಹಿತ ಪೂರ್ಣಗೊಳಿಸಬೇಕಾಗಿ ಮಾನ್ಯ ಅಧ್ಯಕ್ಷರ ಮೂಲಕ ನೀರಾವರಿ ಸಚಿವರಿಗೆ ನಾನು ವಿನಂತಿಮಾಡಿಕೊಳ್ಳುತ್ತೇನೆ. ಕೊಟಬಾಗಿಯಲ್ಲಿ ಏತ ನೀರಾವರಿ ಬಹಳ ತೀವ್ರಗತಿಯಲ್ಲಿ ಕೆಲಸ ನಡೆದಿದೆ. ಆ ಕೊಟಬಾಗಿ ಏತ ನೀರಾವರಿಯ ಕೆಲವು ಕಾಲುವೆಗಳು ಸಹಿತ ಮಾಡುತ್ತಿದ್ದಾರೆ. ನಿಜವಾಗಿ ಅವು ಬಹಳ ಕಳಪೆ ಮಟ್ಟದ ಕಾಮಗಾರಿಗಳಾಗಿವೆ. ನನ್ನ ಹತ್ತಿರ ಅದರ ಫೋಟೋ ಸಹಿತ ಇದೆ. ಮೊನ್ನೆ ಅನೇಕ ಅಧಿಕಾರಿಗಳನ್ನು ಆ ಭಾಗಕ್ಕೆ ಕರೆದುಕೊಂಡು ಹೋಗಿ ನೋಡಿದಾಗ ಬಹಳ ಕಳಪೆ ಮಟ್ಟದ ಕೆಲಸ ಆಗಿದೆ. ಆ ಕಳಪೆ ಮಟ್ಟದ ಕೆಲಸ ಯಾರ್‍ಯಾರು ಮಾಡಿದ್ದಾರೆ, ಯಾವ ಯಾವ ಕಾಲದಲ್ಲಿ ಆಗಿದೆ, ಕಳೆದ ಎರಡು ವರ್ಷಗಳಲ್ಲಿ ಮಾಡಿದಂತಹ ಕೆನಾಲ್ ಈಗಾಗಲೇ ಪೂರ್ತಿ ಮುಚ್ಚಿ ಹೋಗಿದೆ. ಅಲ್ಲಿ ಕಳಪೆ ಕೆಲಸ ಆಗಿದೆ, ಅದರ ಮೇಲೆ ತನಿಖೆ ಆಗಬೇಕು. ಕೆಲಸ ಮಾಡಿದಂತಹ ಕಾಂಟ್ರಾಕ್ಟರ್‌ಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಕಾಂಟ್ರಾಕ್ಟರನ್ನು ಕಪ್ಪು ಪಟ್ಟಿಗೆ ಸೇರಿಸಿ ಈ ರೀತಿ ಆಗದ ಹಾಗೆ ನೋಡಿಕೊಂಡರೆ ಅನುಕೂಲವಾಗುತ್ತದೆ. ಕೆಲವು ಕೆನಾಲ್‌ಗಳು

ಕಳಪೆ ಮಟ್ಟದಲ್ಲಿ ಆಗಿದ್ದರಿಂದ ಕೋಟಿಗಟ್ಟಲೆ ರೂ. ದುಡ್ಡು ಖರ್ಚು ಮಾಡಿ ಜವಳು ಹಿಡಿದ ಭೂಮಿಯ ನೀರನ್ನು ಹೊರಗಡೆ ಹಾಕಿ ಬೆಳೆಯನ್ನು ಬೆಳೆಯತಕ್ಕಂತಹ ಅನೇಕ ರೈತರು ಗೋಳಾಡುತ್ತಿದ್ದಾರೆ. ಆ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳದಿದ್ದರೆ, ಬರುವಂತಹ ದಿವಸಗಳಲ್ಲಿ ಭೂಮಿ ಸಹಿತ ಪೂರ್ತಿ ಹಾಳಾಗಿ ಹೋಗುತ್ತದೆ. ಭೂಮಿ ಸಲುವಾಗಿ ಬಹಳ ಗಮನ ಕೊಡಬೇಕಾಗಿದೆ. ನೀರಿನ ನಿರ್ವಹಣೆಯನ್ನು ವ್ಯವಸ್ಥಿತವಾಗಿ ಮಾಡಬೇಕಾಗಿದೆ. ಆ ನಿಟ್ಟಿನಲ್ಲಿ ಸರ್ಕಾರ ವಿಚಾರ ಮಾಡಬೇಕು, ನೀರನ್ನು ನಿಲ್ಲಿಸಿ ನೀರನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಲಿಲ್ಲ ಎಂದರೆ, ಬಹಳಷ್ಟು ತೊಂದರೆಯಾಗುತ್ತದೆ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶಿವರಾಜ್ ಸಜ್ಜನರ್ (ಹಾವೇರಿ) : ಮಾನ್ಯ ಅಧ್ಯಕ್ಷರೆ, ಜಲ ಸಂಪನ್ಮೂಲ ಇಲಾಖೆಯಲ್ಲಿ ಬರುವಂತಹ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯಲ್ಲಿ ಬರುವಂತಹ
ಏತ ನೀರಾವರಿ ಯೋಜನೆಗಳ ಬಗ್ಗೆ ತಮ್ಮ ಅಪ್ಪಣೆ ಪಡೆದುಕೊಂಡು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈ ರಾಜ್ಯದಲ್ಲಿ ಒಟ್ಟು 473 ಏತ ನೀರಾವರಿ ಯೋಜನೆಗಳಿವೆ. 473 ರಲ್ಲಿ ಇಲಾಖೆಯ ವರದಿಯ ಪ್ರಕಾರ 123 ಏತ ನೀರಾವರಿ ಯೋಜನೆಗಳು ನಾನಾ ಕಾರಣಗಳಿಂದ ಸ್ಥಗಿತಗೊಂಡು ಕೋಟ್ಯಾಂತರ ರೂಪಾಯಿ ತೊಡಗಿಸಿದಂತಹ ಹಣ ಇವತ್ತು ಸಂಪೂರ್ಣವಾಗಿ ನಿಂತು ಹೋಗಿರುವಂಥದ್ದು ನಮ್ಮ ರಾಜ್ಯದ ರೈತರ ದುರ್ದೈವ ಎಂದು ನಾವು ಹೇಳಬೇಕಾಗುತ್ತದೆ. ಅನೇಕ ಕಾರಣಗಳಿಂದ ಇವತ್ತು ಏತ ನೀರಾವರಿ ಯೋಜನೆಗಳು ಬಂದ್ ಆಗಿವೆ. ಅದರಲ್ಲಿ ಪ್ರಮುಖವಾಗಿ ನೀರು ಇಲ್ಲದೆ ಇರುವುದು. ದುರಸ್ತಿ ಮಾಡದೆ ಇರುವುದು, ಮತ್ತು ವಿದ್ಯುತ್ ಬಾಕಿಯನ್ನು ಕಟ್ಟದೆ ಇರುವಂತಹ ಅನೇಕ ಯೋಜನೆಗಳು ಇವತ್ತು ಸ್ಥಗಿತಗೊಂಡು ರೈತರಿಗೆ ಈ ಸರ್ಕಾರ ಸಂಪೂರ್ಣ ಅನ್ಯಾಯ ಮಾಡುತ್ತಿದೆ ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ. ಹಾವೇರಿ, ಧಾರವಾಡ ಮತ್ತು ಗದಗ್ ಜಿಲ್ಲೆಗಳಲ್ಲಿ ಧಾರವಾಡ ವಿಭಾಗದಲ್ಲಿ ಒಟ್ಟು 34 ಏತ ನೀರಾವರಿ ಯೋಜನೆಗಳು ಇವೆ. ಆ 32 ಏತ ನೀರಾವರಿ ಯೋಜನೆಗಳಲ್ಲಿ 13 ಏತ ನೀರಾವರಿ ಯೋಜನೆಗಳು ನಾನಾ ಕಾರಣಗಳಿಂದ ಸ್ಥಗಿತಗೊಂಡಿವೆ. ಕೇವಲ 11 ಯೋಜನೆಗಳು ಮಾತ್ರ ಅಲ್ಲಿ ಚಾಲನೆಯಲ್ಲಿವೆ. ಒಟ್ಟು 34 ಏತ ನೀರಾವರಿ ಯೋಜನೆಗಳಿಂದ 15,758 ಹೆಕ್ಟೇರ್ ಜಮೀನಿಗೆ ನೀರನ್ನುಕೊಡುತ್ತಿದ್ದಾರೆ. ಅದರಲ್ಲಿ ಸ್ಥಗಿತಗೊಂಡಿರುವಂತಹ 13 ಏತ ನೀರಾವರಿ ಯೋಜನೆಗಳಲ್ಲಿ 12,766 ಹೆಕ್ಟೇರ್ ಜಮೀನು ಸ್ಥಗಿತಗೊಂಡಿರುವ ಏತ ನೀರಾವರಿಯಿಂದಲೇ ರೈತರಿಗೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಕೇವಲ 15,768 ಹೆಕ್ಟೇರ್‌ಗಳಲ್ಲಿ ಚಾಲೂ ಸ್ಥಿತಿಯಲ್ಲಿರುವ 11 ಏತ ನೀರಾವರಿ ಯೋಜನೆಗಳಿಂದ ಕೇವಲ 2,992 ಹೆಕ್ಟೇರ್ ಜಮೀನಿಗೆ ಮಾತ್ರ ಇವತ್ತು ನೀರನ್ನು ಒದಗಿಸುವುದಕ್ಕೆ ಸಾಧ್ಯವಾಗಿದೆ. ಇಷ್ಟೆಲ್ಲಾ ದೊಡ್ಡ ಪ್ರಮಾಣದಲ್ಲಿ ಮಾಡಿ ಕೇವಲ ಧಾರವಾಡ ಹಾವೇರಿ ವಲಯದಲ್ಲಿ ಮಾತ್ರ ಸುಮಾರು 16 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಅಲ್ಲಿ ವಿನಿಯೋಗಿಸಿ ಕೇವಲ 2,992 ಹೆಕ್ಟೇರ್ ಜಮೀನಿಗೆ ನಾವು ನೀರನ್ನು ಕೊಡುತ್ತಿದ್ದೇವೆ. ಅಂದರೆ ನಾವು ಇವತ್ತು ನಾಚಿಕೆ ಪಟ್ಟುಕೊಳ್ಳಬೇಕು. ಇಷ್ಟೊಂದು ದೊಡ್ಡ ಪ್ರಮಾಣದ ಮೊತ್ತವನ್ನು ಅಲ್ಲಿ ಏತ ನೀರಾವರಿ ಯೋಜನೆಗೆ ತೊಡಗಿಸಿ ಅದರಲ್ಲಿ ಎಲ್ಲಾ ಯೋಜನೆಗಳು ದುರಸ್ತಿ ಇರಬಹುದು, ವಿದ್ಯುತ್ ಬಿಲ್ಲಿನ ಬಾಕಿ ಇರಬಹುದು, ಎಲ್ಲಾ ತುಂಬದೆ ಇರುವುದರಿಂದ ಈ ರಾಜ್ಯದಲ್ಲಿ ಇವತ್ತು ಏತ ನೀರಾವರಿ ಯೋಜನೆಗಳು ಸಂಪೂರ್ಣ ಅವನತಿಗೆ ಬಂದಿವೆ.

ಕೋಟ್ಯಾಂತರ ರೂಪಾಯಿ ಹಣ ಇವತ್ತು ವ್ಯರ್ಥವಾಗಿ ಹರಿದು ಹೋಗುತ್ತಿರುವುದು ನಮ್ಮ ರಾಜ್ಯದ ರೈತರ ದುರ್ದೈವ ಎಂದು ನಾವು ಇವತ್ತಿನ ದಿವಸ ಹೇಳಬೇಕಾಗಿದೆ. ಅನೇಕ ಏತ ನೀರಾವರಿ ಯೋಜನೆಗಳಿಗೆ ನಾವು ಇವತ್ತಿಗೂ ಕೂಡ ಸರ್ಕಾರದಲ್ಲಿ.....

ಶ್ರೀ ಗೋವಿಂದ ಎಂ. ಕಾರಜೋಳ: ಸನ್ಮಾನ್ಯ ಅಧ್ಯಕ್ಷರೆ ಇವತ್ತು ಈ ರಾಜ್ಯದಲ್ಲಿ ಇರುವ ಕಾನೂನು ಸುವ್ಯಸ್ಥೆ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಇರತಕ್ಕಂತಹ ಪೋಲಿಸ್ ಇಲಾಖೆ ಬಗ್ಗೆ.....

ಅಧ್ಯಕ್ಷರು: ಇಂಟರ್‌ಸೆಷನ್ ಅಂದರೆ ಒಂದೆರಡು ಕ್ಲ್ಯಾರಿಫಿಕೇಷನ್ ಕೇಳುತ್ತಾರೆ. ನೀವು ಸುಮ್ಮನೆ ಕೂತು ಬಿಟ್ಟಿರಿ.

ಶ್ರೀ ಗೋವಿಂದ ಎಂ. ಕಾರಜೋಳ: ಮೂರು–ನಾಲ್ಕು ಜನ ಎದ್ದರು ಅವರಿಗೆ ಅವಕಾಶ ಮಾಡಿ ಕೊಟ್ಟೆ..

ಅಧ್ಯಕ್ಷರು: ಆಯಿತು ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ: ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಈ ರಾಜ್ಯದಲ್ಲಿರುವ ಕಾನೂನು ಮತ್ತು ಸುವ್ಯಸ್ಥೆ ಬಗ್ಗೆ ಮಾತನಾಡುತ್ತೇನೆ.

ಅಧ್ಯಕ್ಷರು: ನೀವು ಇರಿಗೇಷನ್ ಬಗ್ಗೆ ಮಾತನಾಡಿದ್ದೀರಿ, ಪೋಲಿಸ್ ಇಲಾಖೆ ಬಗ್ಗೆ ಇನ್ನೊಂದು ಸಾರಿ ಮಾತನಾಡುವಿರಂತೆ. ಅಥವಾ ಈಗಲೇ ಮಾತನಾಡುತ್ತೀರಾ ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ: ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಕಾನೂನು ಮತ್ತು ಸುವ್ಯವಸ್ಥೆ ರಾಜ್ಯದಲ್ಲಿ ಸಂಪೂರ್ಣವಾಗಿ ಹದಗೆಟ್ಟಿದೆ. ಇವತ್ತು ಪೋಲಿಸ್ ಇಲಾಖೆ ಆಡಳಿತ ಯಾವ ಮಟ್ಟಕ್ಕೆ ಬಂದಿದೆ ಎಂದರೆ, ಮೊನ್ನೆ ಕೆಲವು ಪತ್ರಿಕೆಗಳಲ್ಲಿ ನಾವು ನೋಡಿದೆವು, ಟ್ರಾನ್ಸ್‌ಫರ್‌ಗೆ ರೇಟ್ ಫಿಕ್ಸ್ ಮಾಡುತ್ತಾರೆ. ಸಬ್ ಇನ್ಸ್‌ಪೆಕ್ಟರ್‌ಗೆ ಇಷ್ಟು, ಇನ್ಸ್‌ಪೆಕ್ಟರ್‌ಗೆ ಇಷ್ಟು, ಡಿವೈಎಸ್‌ಪಿಗೆ ಇಷ್ಟು, ಮತ್ತು ಎಸ್‌ಪಿಗೆ ಇಷ್ಟು ಎಂದು ಹೇಳುವ ಪರಿಸ್ಥಿತಿ ಈ ರಾಜ್ಯಕ್ಕೆ ಬಂದೊದಗಿದರೆ ನಾವು ಜನರಿಗೆ ಕಾಪಾಡುವುದಕ್ಕೆ ಸಾಧ್ಯ ಇದೆಯಾ? ಜನರ ರಕ್ಷಣೆ ಮಾಡುವುದಕ್ಕೆ ಸಾಧ್ಯ ಇದೆಯಾ?

ಅಧ್ಯಕ್ಷರು: ಯಾವುದಕ್ಕೆ ರೇಟ್ ಫಿಕ್ಸ್ ಮಾಡಿದ್ದಾರೆ?

ಶ್ರೀ ಗೋವಿಂದ ಎಂ. ಕಾರಜೋಳ: ವರ್ಗಾವಣೆಗೆ.

ಶ್ರೀ ಶಿವರಾಜ್ ಸಜ್ಜನರ್: ಯಾರಿಗೆ ಕೊಡಬೇಕೆಂಬುದನ್ನು ಹೇಳಿಬಿಡಿ.

ಶ್ರೀ ಗೋವಿಂದ ಎಂ. ಕಾರಜೋಳ: ಪೋಲಿಸ್ ಇಲಾಖೆ ಇರಬೇಕು. ಏತಕ್ಕಾಗಿ? ಜನರ ರಕ್ಷಣೆ ಮಡುವುದಕ್ಕಾಗಿ ಬೇಕು. ಜನರ ರಕ್ಷಣೆ ಮಾಡಲಾರದೆ, ಜನರ ಭಕ್ಷಣೆ ಮಾಡಿದರೆ ಹೇಗೆ? ಈ ಪೋಲಿಸ್ ಇಲಾಖೆ ವ್ಯವಸ್ಥೆ ಬಂದಿದ್ದು ಬ್ರಿಟಿಷರ ಆಡಳಿತದಲ್ಲಿ. ಬ್ರಿಟಿಷರು ಏತಕ್ಕಾಗಿ ಪೋಲೀಸರನ್ನು ನೇಮಕ ಮಾಡಿಕೊಂಡರು ಅಂದರೆ, ಈ ದೇಶದಲ್ಲಿ ಇರತಕ್ಕಂತಹ ಜನ ವಿದ್ಯಾವಂತರು ಇಲ್ಲ, ಕಾನೂನಿಗೆ ಅವರು ಮರ್ಯಾದೆ ಕೊಡುವುದಿಲ್ಲ, ಕಾನೂನನ್ನು ಪಾಲನೆ ಮಾಡುವುದಿಲ್ಲ, ಆ ಜನರನ್ನು ಜನರಿಂದಲೇ ಹೊಡೆದು ಹತ್ತಿಕ್ಕುವ ಸಲುವಾಗಿ ಪೋಲೀಸರನ್ನು ನೇಮಕಾತಿ ಮಾಡಿಕೊಳ್ಳುವ ವ್ಯವಸ್ಥೆ ಮಾಡಿದರು. ಆದರೆ ಮಾನ್ಯ ಅಧ್ಯಕ್ಷರೆ, ಪೋಲಿಸ್ ಸ್ಟೇಷನ್ ಪರಿಸ್ಥಿತಿ ಏನಾಗಿದೆ ಎಂದರೆ, ಜನ ಪೋಲಿಸ್ ಸ್ಟೇಷನ್‌ಗೆ ಹೋಗಬೇಕೆಂದರೆ ಭಯಭೀತರಾಗುತ್ತಾರೆ. ಹೆದರಿ ಸಾಯುತ್ತಾರೆ. ಹೋದರೆ ಅವರು ಕೇಳಿದಷ್ಟು ದುಡ್ಡು ಕೊಡಬೇಕು. ಅವರು ಹೊಡೆಯುತ್ತಾರೆ, ಬಡಿಯುತ್ತಾರೆ ಇವೆಲ್ಲಾ ಮಾಡಿಸಿಕೊಂಡು, ಹಳ್ಳಿಗಳಲ್ಲಿ ಜನ ಪೋಲಿಸ್ ಸ್ಟೇಷನ್ ಎಂದರೆ, ಹೆದರಿ ಪೋಲಿಸ್ ಸ್ಟೇಷನ್‌ಗೆ ಕಂಪ್ಲೇಂಟ್ ಸಹ ಕೊಡುವುದಕ್ಕೆ ಹೋಗುವುದಿಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ಒಂದು ಸಲಹೆ ಮಾಡುತ್ತೇನೆ. ಪೋಲಿಸ್ ವ್ಯವಸ್ಥೆಯನ್ನು ಸಮಗ್ರವಾಗಿ ಬದಲಾವಣೆ ಮಾಡಬೇಕು. ಪೋಲಿಸ್ ಸ್ಟೇಷನ್‌ಗಳೆಂದರೆ ದೇವಾಲಯಗಳಂತೆ ಆಗುವ ಹಾಗೆ ಸರ್ಕಾರ ನೋಡಿಕೊಳ್ಳಬೇಕು. ಮತ್ತು ಈ ಕಾನೂನನ್ನು

ಸಮಗ್ರವಾಗಿ ತಿದ್ದುಪಡಿ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡಲಿಕ್ಕೆ ಬಯಸುತ್ತೇನೆ. ಇಂಧನ ಇಲಾಖೆ ಬಗ್ಗೆ ಹೇಳಬೇಕೆಂದರೆ, ಇವತ್ತು ರೈತರಿಗೆ ಒಂದು ಟಿಸಿ ಕೊಡಬೇಕೆಂದರೆ, ಸುಮಾರು 10 ರಿಂದ 12,000 ರೂಪಾಯಿ ಕೊಡಬೇಕಾಗುತ್ತದೆ. ಯಾರು ಟಿಸಿಗೆ ಹಣ ಕೊಡುವುದಿಲ್ಲ ಅವರಿಗೆ ಟಿಸಿ ಸಿಗುವುದಿಲ್ಲ. ಹೀಗಾಗಿ ರೈತರು ಅವರು ಬೆಳೆದಂತಹ ಬೆಳೆ ಒಣಗಿ ಕಂಗಾಲಾಗಿದ್ದಾರೆ. ಎಷ್ಟೋ ಕಡೆ ಆರು ತಿಂಗಳು, ಎಂಟು ತಿಂಗಳು ಮತ್ತು ಒಂದು ವರ್ಷ ಆದರೂ ಕೂಡ ಟಿಸಿ ಕೊಡುತ್ತಿಲ್ಲ. ಅದಕ್ಕಾಗಿ ನಾನು ಇವತ್ತು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಟಿ.ಸಿ. ಸುಟ್ಟ ತಕ್ಷಣ ಸರದಿ ಮೇಲೆ ಟಿ.ಸಿ.ಯನ್ನು ಕೊಡಿಸುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ರೈತರು ಬದುಕುವುದಕ್ಕೆ ಸಾಧ್ಯವಿಲ್ಲ. ಇವೊತ್ತು ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ಸರಬರಾಜು ಬಹಳ ಕಳಪೆ ಮಟ್ಟದಲ್ಲಿದೆ. ಉತ್ತಮ ಗುಣಮಟ್ಟದ ವಿದ್ಯುತ್ ಅವರಿಗೆ ಸಿಗುವ ರೀತಿ ಇಲ್ಲ. ಒಂದು ಬಲ್ಬ್ ಕೂಡ ಹತ್ತುವುದಿಲ್ಲ. ಮೋಟಾರ್ ಸ್ಟಾರ್ಟ್ ಆಗುವುದಿಲ್ಲ. ಇಂಥ ಪರಿಸ್ಥಿತಿ ಇವೊತ್ತು ರಾಜ್ಯದೆಲ್ಲೆಡೆ ಇದೆ. ಮೊದಲೇ ಬರಗಾಲ ನೀರಿಲ್ಲ. ಅಂಥದ್ದರಲ್ಲಿ ಎಲ್ಲೋ ಒಂದು ಸ್ವಲ್ಪ ನೀರಿದ್ದರೆ ಅದನ್ನು ಉಪಯೋಗ ಮಾಡಿಕೊಳ್ಳೋಣವೆಂದರೆ ಕರೆಂಟಿನ ವ್ಯವಸ್ಥೆ ಇವೊತ್ತು ಸರಿಯಾಗಿಲ್ಲ. ಇನ್ನು ಲೋಕೋಪಯೋಗಿ ಇಲಾಖೆ ಬಗ್ಗೆ ಹೇಳುವುದಾದರೆ ಲೋಕೋಪಯೋಗಿ ಇಲಾಖೆ ಹಿಂದಿನ ಸರ್ಕಾರದಲ್ಲಿ ರಸ್ತೆಗಳಲ್ಲಿ ಎಂತ ಗುಂಡಿಗಳು ಬಿದ್ದಿದ್ದವೆಂದರೆ ಎಮ್ಮೆಗಳು ಈಜಾಡುವಂಥ ಗುಂಡಿಗಳು ಬಿದ್ದಿದ್ದವು, ಅಂಥ ದೊಡ್ಡ ದೊಡ್ಡ ಗುಂಡಿಗಳು ಆಗಿದ್ದವು. ರಸ್ತೆ ಸುಧಾರಣೆ ಆಗಿರಲಿಲ್ಲ. ಆದರೆ ರೇವಣ್ಣನವರು ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾದ ಮೇಲೆ ಸ್ವಲ್ಪ ಮಟ್ಟಿಗೆ ಇಂಟರೆಸ್ಟ್ ತೆಗೆದುಕೊಂಡು ರಿಪೇರಿಗೆ ಸಹಾಯ ಮಾಡಿದ್ದಾರೆ. ಅಷ್ಟಕ್ಕೇ ಮುಗಿಯಲಿಲ್ಲ ಮಾನ್ಯ ಅಧ್ಯಕ್ಷರೆ, ಇವೊತ್ತು ಲೋಕೋಪಯೋಗಿ ಇಲಾಖೆಯಲ್ಲಿ ಏನಾಗಬೇಕಾಗಿದೆಯೆಂದರೆ ಒಂದು ಸಮಗ್ರವಾಗಿ ಬದಲಾವಣೆಯಾಗಬೇಕಾಗಿದೆ. ಹಿಂದೆ 25 ರಿಂದ 30 ವರ್ಷಗಳ ಹಿಂದೆ ಇದ್ದಂಥ ಸ್ಪೆಸಿಫಿಕೇಶನ್‌ಗಳನ್ನೇ ನಾವು ಹಾಕಿಕೊಂಡು ನಾವು ರಸ್ತೆಗಳನ್ನು ನಿರ್ಮಾಣ ಮಾಡಿದರೆ ರಸ್ತೆಗಳು ಉಳಿಯುವುದಿಲ್ಲ. ಇವೊತ್ತು ವಾಹನ ಸಂಚಾರ ಹೆಚ್ಚಾಗಿದೆ. ಭಾರವಾದ ವಾಹನಗಳ ಸಂಖ್ಯೆ ಹೆಚ್ಚಾಗಿದೆ 50–60 ಟನ್‌ಗಳನ್ನು ಹೊತ್ತುಕೊಂಡು ಓಡಾಡುವ ವಾಹನಗಳ ಸಂಖ್ಯೆ ಹೆಚ್ಚಾಗಿದೆ. ಅದಕ್ಕೆ ಅನುಗುಣವಾಗಿ ಇವೊತ್ತು ಸ್ಪೆಸಿಫಿಕೇಶನನ್ನು ಸಂಪೂರ್ಣವಾಗಿ ಬದಲಾವಣೆಯನ್ನು ಮಾಡಿಕೊಂಡು ರಸ್ತೆಗಳನ್ನು ನಿರ್ಮಾಣ ಮಾಡಿದರೆ ಹೆಚ್ಚು ಉಪಯುಕ್ತವಾಗುತ್ತದೆ. ಈಗಾಗಲೇ ಕೆಸಿಫ್ ಮುಖಾಂತರ, ಕೆ.ಆರ್.ಡಿ.ಎಲ್. ಮುಖಾಂತರ ಹೊಸ ರಸ್ತೆಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಆ ರಸ್ತೆಗಳ ನಿರ್ಮಾಣ ಯಾವ ರೀತಿಯಾಗಿದೆಯೆಂದರೆ ಅದನ್ನು ಯಾರೂ ನೋಡುವವರೇ ಇಲ್ಲ. ಪ್ಯಾಕೇಜ್ ಸಿಸ್ಟಂ ಎಂದು ಮಾಡಿಬಿಟ್ಟಿದ್ದಾರೆ. ಪ್ಯಾಕೇಜ್ ಅಂದರೇನು, ಎಲ್ಲವನ್ನೂ, ಮೆಟೀರಿಯಲ್‌ನ್ನೂ ಅವರೇ ತರುವುದು, ಸೂಪರ್‌ವಿಶನ್‌ನ್ನೂ ಕೂಡ ಅವರೇ ಮಾಡುವುದು, ಎಸ್ಟಿಮೇಟನ್ನೂ ಅವರೇ ಮಾಡುವುದು, ಕನ್ಸಲ್‌ಟೆಂಟ್ ಕೂಡ ಅವರೇ, ಅವರದೇ ಲ್ಯಾಬೋರೇಟರಿ. ಇದೆಂಥ ಪರಿಸ್ಥಿತಿ. ಈ ರೀತಿಯಾದರೆ ಉತ್ತಮ ಗುಣಮಟ್ಟದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೇನು? ಅದಕ್ಕಾಗಿ ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ, ಇಲಾಖೆಯ ಅಧಿಕಾರಿಗಳನ್ನು ಅದರಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ಇಲಾಖೆಯ ಅಧಿಕಾರಿಗಳಿಗೆ ಸಂಪೂರ್ಣವಾಗಿ ಅಧಿಕಾರವನ್ನು ತೆಗೆದುಬಿಟ್ಟಿದ್ದಾರೆ. ಇಲಾಖೆಯ ಅಧಿಕಾರಿಗೆ ಯಾವುದೇ ಒಂದು ಅಧಿಕಾರವಿಲ್ಲ. ಅವರಿಗೆ ಬಿಲ್ ಬರೆಯುವ ಅಧಿಕಾರವಿಲ್ಲ, ಚೆಕ್ ಕೊಡುವ ಅಧಿಕಾರವಿಲ್ಲ, ಅವರನ್ನು ನೋಡುವ ಅಧಿಕಾರವಿಲ್ಲ, ಇನ್‌ಸ್ಪೆಕ್ಷನ್ ಮಾಡುವ ಅಧಿಕಾರವಿಲ್ಲ, ಪ್ಯಾಕೇಜ್ ಸಿಸ್ಟಂನಲ್ಲಿ ಅದೇ ರೀತಿ

ಆಗಿದೆ. ಅದಕ್ಕಾಗಿ ಅದನ್ನೆಲ್ಲಾ ಬದಲಾವಣೆ ಮಾಡಿ ಇವೊತ್ತು ಮೊದಲಿನ ಸಿಸ್ಟಂಗೆ ಮಾಡಿದರೆ ಉತ್ತಮವಾಗುತ್ತದೆ. ಏಕೆಂದರೆ ಗುಣಮಟ್ಟವನ್ನು ಕಾಪಾಡುವುದಕ್ಕೆ ಮತ್ತು ಅದನ್ನು ಚೆಕ್ ಮಾಡುವುದಕ್ಕೆ ಯಾರೂ ಇಲ್ಲವೆಂದರೆ ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ ಈ ಇಲಾಖೆಯ ಅಧಿಕಾರಿಗಳನ್ನು ಸಮಗ್ರವಾಗಿ ಉಪಯೋಗ ಮಾಡಿಕೊಂಡು ಇನ್ಸ್‌ಪೆಕ್ಷನ್ ಮಾಡುವುದಕ್ಕೆ, ಗುಣಮಟ್ಟ ಕಾಪಾಡಲು ನೋಡುವಂಥ ಅಧಿಕಾರವನ್ನು ಅವರಿಗೆ ನೀಡಬೇಕೆಂದು ನಾನು ಈ ಸಂಧರ್ಬದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ರಸ್ತೆಗಳ ನಿರ್ವಹಣೆಗೆ ಪ್ರತಿ ಕಿಲೋಮೀಟರ್‌ಗೆ ನ್ಯಾಶನಲ್ ಹೈವೇಗೇ ಇಷ್ಟು, ಸ್ಟೇಟ್ ಹೈವೇಗೆ ಇಷ್ಟು, ಎಂ.ಡಿ.ಆರ್.ಗೆ ಇಷ್ಟು, ವಿಲೇಜ್ ರಸ್ತೆಗೆ ಇಷ್ಟು ಎಂದು ಹಣವನ್ನು ನಿಗಧಿ ಮಾಡಲಾಗಿದೆ. ಇಷ್ಟು ಕಡಿಮೆ ಹಣದಲ್ಲಿ ರಸ್ತೆಗಳ ನಿರ್ವಹಣೆ ಮಾಡುವುದಕ್ಕೆ ಆಗುವುದಿಲ್ಲ. ಏಕೆ ಆಗುವುದಿಲ್ಲವೆಂದರೆ ಇವೊತ್ತು ಡಾಂಬರ್ ವ್ಯಾಲ್ಯೂ ತುಂಬಾ ಜಾಸ್ತಿ ಇದೆ. ಸುಮಾರು ಎರಡೂವರೆಯಿಂದ ಮೂರು ಸಾವಿರ ರೂಪಾಯಿ ಒಂದು ಬ್ಯಾರಲ್‌ಗೆ ಆಗಿದೆ. ನಿರ್ವಹಣೆ ಮಾಡುವುದಕ್ಕೆ ಕನಿಷ್ಟ ಪಕ್ಷ ವರ್ಷಕ್ಕೆ 18 ಬ್ಯಾರಲ್ ಆದರೂ ಬೇಕಾಗುತ್ತದೆ. ಅದಕ್ಕಾಗಿ ಅವಶ್ಯಕತೆಗನುಗುಣವಾಗಿ ಪ್ರತಿ ಕಿಲೋಮೀಟರ್‌ಗೆ ನಿರ್ವಹಣಾ ವೆಚ್ಚವನ್ನು ಹೆಚ್ಚು ಮಾಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ. ಇನ್ನು ಪಶು ಸಂಗೋಪನಾ ಇಲಾಖೆ ಬಗ್ಗೆ ಹೇಳುವುದಾದರೆ ಇವೊತ್ತು ಈ ಇಲಾಖೆಯಲ್ಲಿ ಏನಾಗಿದೆಯೆಂದರೆ ಈ ರೈತರು ಏನು ಜಾನುವಾರುಗಳನ್ನು ಸಾಕಿಕೊಂಡಿದ್ದಾರೆ ಆ ಜಾನುವಾರುಗಳಿಗೆ ಕಾಲುಬೇನೆ, ಮತ್ತು ಇನ್ನಿತರ ರೋಗಗಳು ಬಂದರೆ ಅಲ್ಲಿ ಕೊಡಲಿಕ್ಕೆ ಔಷಧಗಳೇ ಇರುವುದಿಲ್ಲ. ವ್ಯಾಕ್ಸಿನ್ನೇ ಅವರ ಹತ್ತಿರ ಇಲ್ಲ. ಯಾವ ಕೇಂದ್ರದಲ್ಲಿ ಕೇಳಿದರೂ ಸರ್ಕಾರದಿಂದಲೇ ಸಪ್ಲೈ ಆಗಿಲ್ಲಾರೀ ನಮಗೆ ಬಿಡುಗಡೆ ಆಗಿಲ್ಲಾರಿ, ಜಿಲ್ಲಾ ಪರಿಷತ್ತಿನವರು ಕೊಡುತ್ತಿಲ್ಲ, ಬರೇ ಇದೇತಕರಾರನ್ನು ಅವರು ಹೇಳುತ್ತಾರೆ. ಅದಕ್ಕಾಗಿ ತಾವು ಪ್ರತಿಯೊಂದು ಆಸ್ಪತ್ರೆಗೂ ಇಂತಿಷ್ಟು ಹಣವೆಂದು ಹೇಳಿ ನಿಗಧಿ ಮಾಡಿ ಕೊಟ್ಟರೆ ಒಳ್ಳೆಯದಾಗುತ್ತದೆ. ಇಲ್ಲಾ ಅಂತ ಹೇಳಿದರೆ ಔಷಧಿ ವ್ಯವಸ್ಥೆಯನ್ನು ಸರ್ಕಾರವೇ ಪೂರೈಸುವುದಾದರೂ ಕೂಡ ಅದೂ ಕೂಡ ಉತ್ತಮವಾಗುತ್ತದೆ. ಅದಕ್ಕಾಗಿ ಸರ್ಕಾರ ಹೆಚ್ಚು ಕಾಳಜಿಯನ್ನು ವಹಿಸಬೇಕು. ಇವೊತ್ತು ಹಣವನ್ನು ಒದಗಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಗ್ಗೆ ಹೇಳುವುದಾದರೆ, ಇವೊತ್ತು ಇಡೀ ರಾಜ್ಯದಲ್ಲಿ ಯಾವುದೇ ಆಸ್ಪತ್ರೆಗೆ ಹೋದರೂ ಕೂಡ ಎ.ಎನ್.ಎಂ.ಗಳು ಇಲ್ಲ, ಡಾಕ್ಟರ್‌ಗಳು ಇಲ್ಲ, ಅಲ್ಲಿ ಉಪಚಾರ ಮಾಡುವುದಕ್ಕೆ ಸಿಬ್ಬಂಧಿ ಕೂಡ ಇಲ್ಲ. ಯಾವ ಆಸ್ಪತ್ರೆಗೆ ಹೋದರು ಕೂಡ ಇದೇ ಕೊರತೆ. ಔಷಧಿಯಂತೂ ಪೂರೈಕೆಯೇ ಆಗಿಲ್ಲ. ಪ್ರತಿಯೊಬ್ಬರಿಗೂ ಹೊರಗಡೆ ಔಷಧಿ ತೆಗೆದುಕೊಂಡು ಬನ್ನಿ ಎಂದು ಚೀಟಿ ಬರೆದುಕೊಡುತ್ತಾರೆ. ಸರ್ಕಾರಿ ಆಸ್ಪತ್ರೆಗೆ ಹೋಗತಕ್ಕಂಥವರು ಬಡವರು. ಆ ಬಡವರಿಗೆ ಹೊರಗಡೆಯಿಂದ ಔಷಧಿ ತೆಗೆದುಕೊಂಡು ಪೂರೈಕೆ ಮಾಡಿ ಎಂದರೆ ಬಡವರು ಎಲ್ಲಿಂದ ಔಷಧಿ ತರುವುದಕ್ಕೆ ಸಾದ್ಯವಾಗುತ್ತದೆ? ಅದಕ್ಕಾಗಿ ಸರ್ಕಾರ ಒಂದು ನಿರ್ಧಿಷ್ಟವಾದಂಥ ಕಾರ್ಯಕ್ರಮ ರೂಪಿಸಬೇಕಾಗುತ್ತದೆ, ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ವೈದ್ಯಕೀಯ ಉಪಚಾರ ವ್ಯವಸ್ಥೆಇಲ್ಲದೇ ಇರುವುದರಿಂದ ಬಹಳಷ್ಟು ಜನರಿಗೆ ತೊಂದರೆಯಾಗಿದೆ. ಇವೊತ್ತು ಡೆಲಿವರಿಗೆ ಹೋದಂಥ ಎಷ್ಟೋ ಜನರಿಗೆ ಈ ಆಸ್ಪತ್ರೆಗಳಲ್ಲಿ ಅವರನ್ನು ಇಟ್ಟುಕೊಳ್ಳುವುದಕ್ಕೂ ಕೂಡ ವ್ಯವಸ್ಥೆ ಇಲ್ಲ. ಈ ಪಿ.ಹೆಚ್.ಸಿ.ಗಳಲ್ಲಿ, ಸಣ್ಣ ಸಣ್ಣ ಆಸ್ಪತ್ರೆಗಳಲ್ಲಿ. ಅದಕ್ಕಾಗಿ ಸರ್ಕಾರ ಎಲ್ಲಾ ಆಸ್ಪತ್ರೆಗಳಿಗೂ ಕೂಡಲೇ ವೈದ್ಯರನ್ನು ನೇಮಿಸಬೇಕು; ಮತ್ತು ಸಿಬ್ಬಂದಿಯನ್ನು ನೇಮಿಸಬೇಕು. ಔಷಧ ಕೊಡತಕ್ಕಂಥ

ವ್ಯವಸ್ಥೆಯನ್ನು ಮಾಡಬೇಕು. ಅಲ್ಲಿರತಕ್ಕಂಥ ಹಾಸಿಗೆಗಳ ವ್ಯವಸ್ಥೆಯನ್ನು ತಾವು ನೋಡಿದಿರೆಂದರೆ ತಮಗೇ ಗೊತ್ತಾಗುತ್ತದೆ ಮಾನ್ಯ ಅಧ್ಯಕ್ಷರೆ, ಒಂದು ಹಾಸಿಗೆ ಕೂಡ ಚೆನ್ನಾಗಿರುವುದಿಲ್ಲ, ಅದರ ಮೇಲೆ ಬೆಡ್‌ಶೀಟ್ ಇರುವುದಿಲ್ಲ, ತಲೆದಿಂಬು ಇರುವುದಿಲ್ಲ, ಕಸ ಹೊಡೆದಿರುವುದಿಲ್ಲ. ಇಂಥ ಒಂದು ಕೆಟ್ಟ ಪರಿಸ್ಥಿತಿ ಅಸ್ಪತ್ರೆಗಳಲ್ಲಿ ಇದೆ. ಯಾವ ಕಡೆ ಹೋದರೂ ಜನರು ತಮ್ಮ ಗೋಳನ್ನು ತೋಡಿಕೊಳ್ಳುತ್ತಾರೆ. ಇವೊತ್ತು ಸರ್ಕಾರ ಏನೂ ಕೊಟ್ಟಿಲ್ಲವೆಂದು ಅಲ್ಲಿರತಕ್ಕಂಥ ಒಬ್ಬರೋ ಇಬ್ಬರೋ ವೈದ್ಯರು ಇದ್ದರೆಂದರೆ ಅವರು ಹೇಳುತ್ತಾರೆ. ಇಲ್ಲದೇ ಇದ್ದರೆ ಈ ಜನರನ್ನು ಸುಲಿಗೆ ಮಾಡುತ್ತಾರೆ. ನಾವೇ ಔಷಧ ತಂದು ಇಟ್ಟಿದ್ದೇವೆ. ದುಡ್ಡು ಕೊಟ್ಟು ನೀವು ಇಂಜೆಕ್ಷನ್ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಜನರ ಕಡೆಯಿಂದ ದುಡ್ಡನ್ನು ತೆಗೆದುಕೊಂಡು ಇಂಜೆಕ್ಷನ್ ಕೊಡುತ್ತಾರೆ. ಇಂಥ ಒಂದು ಪರಿಸ್ಥಿತಿ ಇದೆ. ಏಕೆ ಎಂದು ಕೇಳಿದರೆ ಸರ್ಕಾರ ಔಷಧ ಕೊಟ್ಟಿಲ್ಲ, ನಮ್ಮ ಹತ್ತಿರ ಔಷಧ ಇಲ್ಲ. ನಿಮಗೆ ಇಂಜೆಕ್ಷನ್ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ನೀವು ಕೊಟ್ಟರೆ ನಾನು ನನ್ನ ಸ್ವಂತ ಹಣದಿಂದ ತಂದಿದ್ದೇನೆ. ಅದರಿಂದ ನಾನು ಇಂಜೆಕ್ಷನ್ ಮಾಡುತ್ತೇನೆ ಎಂದು ಹೇಳತಕ್ಕಂಥದ್ದು ಬಹಳಷ್ಟು ಕಡೆ ನೂರಕ್ಕೆ ತೊಂಭತ್ತರಷ್ಟು ಈ ವ್ಯವಸ್ಥೆ ಇದೆ. ಅದಕ್ಕಾಗಿ ಬಡವರಿಗೆ ಸರ್ಕಾರ ಮಾಡತಕ್ಕಂಥದ್ದು ಒಂದೇ ಒಂದು, ಶಿಕ್ಷಣ ಮತ್ತು ಆರೋಗ್ಯ. ಇವೆರಡನ್ನೂ ಅವರಿಗೆ ಕೊಡಲು ಸರ್ಕಾರ ವಿಫಲವಾದರೆ ಜನರಿಗೆ, ಬಡವರಿಗೆ ನಾವೇನೂ ಮಾಡಿದಂತಾಗುವುದಿಲ್ಲ. ಬಡವರಿಗೆ ನಾವು ಅನ್ಯಾಯ ಮಾಡಿದಂತಾಗುತ್ತದೆ. ಅದಕ್ಕಾಗಿ ಈ ಇಲಾಖೆಯಿಂದ ಹೆಚ್ಚು ಹಣವನ್ನು ಕೊಟ್ಟು ಎಲ್ಲಾ ಆಸ್ಪತ್ರೆಗಳಲ್ಲಿ ವೈದ್ಯರನ್ನು ಮತ್ತು ನುರಿತ ಸಿಬ್ಬಂದಿಯನ್ನು ನೇಮಿಸಿ ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಬಡವರಿಗೆ ಸಹಾಯ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇನ್ನು ಆಹಾರ ಮತ್ತು ನಾಗರಿಕ ಪೂರೈಕೆ ಬಗ್ಗೆ ಹೇಳುವುದಾದರೆ ಈ ಇಲಾಖೆ ಗಬ್ಬು ಎದ್ದಂಥ ಇಲಾಖೆಯಾಗಿದೆ. ಇಲ್ಲೇನಾಗಿದೆಯೆಂದರೆ, ಹಳ್ಳಿಗಳಲ್ಲಿ ನಾವು ಸೊಸೈಟಿಗಳನ್ನು ಮಾಡಿಕೊಟ್ಟಿದ್ದೇವೆ. ಎಷ್ಟೋ ಮಂದಿಗೆ ನಾವು ಸೊಸೈಟಿಗಳನ್ನು ನೇಮಿಸಿದ್ದೇವೆ. ಅವರು ಏನು ಮಾಡುತ್ತಾರೆಂದರೆ ರೇಶನ್ ಕಾರ್ಡ್‌ಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಿ ಅವರ ಹತ್ತಿರ ಇಟ್ಟುಕೊಂಡಿರುತ್ತಾರೆ. ಈಗ ಒಂದು ಐದುನೂರು ಕಾರ್ಡ್ ಇತ್ತು ಎಂದರೆ ಎರಡು ನೂರು ಕಾರ್ಡ್‌ಗಳನ್ನು ಮಾತ್ರ ಜನರಿಗೆ ಕೊಡುತ್ತಾರೆ. ಇನ್ನು ಮುನ್ನೂರು ಕಾರ್ಡ್‌ಗಳನ್ನು ತಮ್ಮ ಬಳಿಯೆ ಇಟ್ಟುಕೊಂಡಿರುತ್ತಾರೆ. ಅದರಲ್ಲಿ ಬರತಕ್ಕಂಥ ಆಹಾರವೆಲ್ಲವನ್ನೂ ಅವರು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಾರೆ. ಹೆಚ್ಚಿನ ಹಣವನ್ನು ತೆಗೆದುಕೊಳ್ಳುತ್ತಾರೆ. ಹೆಚ್ಚಿನ ದರ ತೆಗೆದುಕೊಳ್ಳುತ್ತಾರೆ. ಎಷ್ಟೋ ಕಡೆ ಪೋಲಿಸ್ ಕೇಸ್‌ಗಳೂ ಕೂಡ ಆಗಿದೆ. ಆ ವಿಚಾರದ ಮೇಲೆ. ಆದರೂ ಕೂಡ ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡು ಅವರ ಮೇಲೆ ಬಿಗಿ ತರತಕ್ಕಂಥ ವ್ಯವಸ್ಥೆಯನ್ನು ಮಾಡಿಲ್ಲ. ಅದನ್ನು ಮಾಡಬೇಕಾಗುತ್ತದೆ. ಅಷ್ಟೇ ಅಲ್ಲದೇ ಇವೊತ್ತು ಬಡವರು ಬಹಳಷ್ಟು ಜನರಿಗೆ ನಾವು ಕಾರ್ಡ್‌ನ್ನು ಕೊಡುತ್ತೇವೆ ಎಂದು ಸರ್ಕಾರ ಎಲೆಕ್ಷನ್‌ಗಿಂತ ಮುಂಚೆ ಬಿಳಿ ಚೀಟಿಗಳನ್ನು ಕೊಟ್ಟಿದ್ದಾರೆ. ಆ ಬಿಳಿ ಚೀಟಿಗಳೂ ಇವೊತ್ತಿನವರೆಗೆ ಪಕ್ಕಾ ಕಾರ್ಡ್‌ಗಳಾಗಿ ಪರಿವರ್ತನೆ ಆಗಿಲ್ಲ. ಆದ್ದರಿಂದ ಯಾರು ಯಾರು ಈ ಬಿಳಿ ಚೀಟಿಗಳನ್ನು ಹೊಂದಿದ್ದಾರೋ ಅವರಿಗೆ ಹಳದಿ ಕಾರ್ಡ್‌ಗಳನ್ನು ಸರ್ಕಾರ ಕೊಡಬೇಕಾಗುತ್ತದೆ. ಆಗಸ್ಟ್ 15 ರಂದು ಕೊಡುತ್ತೇವೆಂದು ಮೊನ್ನೆ ನಮ್ಮ ಆಹಾರ ಮಂತ್ರಿಗಳು ಹೇಳಿದರು. ಆದರೆ ಎಲ್ಲಾ ಬಡವರಿಗೂ, ಪ್ರತಿಯೊಬ್ಬ ಕಡು ಬಡವರಿಗೂ ರೇಶನ್ ಕಾರ್ಡ್‌ನ್ನು ಕೂಡಲೇ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯವನ್ನು ಮಾಡುತ್ತೇನೆ. ಇನ್ನು ನಗರಾಭಿವೃದ್ಧಿ ಇಲಾಖೆ

ಬಗ್ಗೆ ಹೇಳುವುದಾದರೆ, ಈ ಮುನಿಸಿಪಾಲಿಟಿ ಸರಹದ್ದಿನಲ್ಲಿ ಬರತಕ್ಕಂಥ ಭೂಮಿ ಬೆಲಿಬಹಳ ಹೆಚ್ಚಾಗಿದೆ. ಇವೊತ್ತೇನಾಗಿದೆ ನಾವು ಪ್ರತಿನಿತ್ಯ ನೋಡುತ್ತಿದ್ದೇವೆ, ಬೆಂಗಳೂರಿನಲ್ಲಿ ಭೂಗಳ್ಳರು ಇದ್ದಾರೆ, ಸರ್ಕಾರದ ಭೂಮಿಯನ್ನು ಒತ್ತುವರಿ ಮಾಡುತ್ತಾರೆ, ಇದನ್ನೆಲ್ಲಾ ನೋಡೇ ನೋಡುತ್ತೇವೆ. ಈ ಸದನದಲ್ಲಿಯೂ ಕೂಡ ಸಾಕಷ್ಟು ಬಾರಿ ಚರ್ಚೆಯಾಗಿದೆ. ಮಾನ್ಯ ಅಧ್ಯಕ್ಷರೆ, ಇದು ಬೆಂಗಳೂರಿಗಷ್ಟೇ ಸೀಮಿತವಾಗಿಲ್ಲ. ಈ ಭೂಮಿ ನೆಲಗಳ್ಳರದ್ದು ಇಡೀ ರಾಜ್ಯಕ್ಕೇ ವಿಸ್ತರಿಸಿದೆ. ಇಡೀ ರಾಜ್ಯದಲ್ಲಿ ಪ್ರತಿಯೊಬ್ಬರೂ, ಇವೊತ್ತೇನಾಗಿದೆಯೆಂದರೆ ಸರ್ಕಾರದ್ದು ಭೂಮಿ ಇತ್ತು ಎಂದರೆ, ಪುರಸಭೆಗೆ ಸೇರಿದ ಭೂಮಿ ಇತ್ತು ಎಂದರೆ, ಅದನ್ನು ಒತ್ತುವರಿ ಮಾಡಿಕೊಳ್ಳುತ್ತಾರೆ. ಮತ್ತು ಅಲ್ಲಿ ಯಾರಾದರೂ ಬಡವರು ಗುಡಿಸಲು ಹಾಕಿಕೊಂಡು ಬದುಕು ನಡೆಸುತ್ತಿದ್ದರು ಅಂದರೆ ಅವರನ್ನು ಓಡಿಸಿ ಅದನ್ನು ತಾವೇ ಉಪಯೋಗ ಮಾಡಿಕೊಳ್ಳುತ್ತಾರೆ. ಇದು ನಿಲ್ಲಬೇಕಾಗುತ್ತದೆ. ಇದಷ್ಟೇ ಅಲ್ಲದೆ ಈ ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ಕೆರೆಗಳನ್ನೂ ಕೂಡ ಸಾಕಷ್ಟು ಒತ್ತುವರಿ ಮಡಿದ್ದಾರೆ. ಆ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸುತ್ತೇವೆಂದು ಸರ್ಕಾರ 2005 ಮತ್ತು 2006ನೇ ಸಾಲಿನ ಬಜೆಟ್ ಅಧಿವೇಶನದ ಮೊದಲನೆಯ ದಿನದ ಭಾಷಣದಲ್ಲಿ ಮಾನ್ಯ ಸಿದ್ದರಾಮಯ್ಯನವರು ಓದಿದರು. ನಾವು ಈ ರಾಜ್ಯದಲ್ಲಿರತಕ್ಕಂಥ ಎಲ್ಲಾ ಕೆರೆಕಟ್ಟೆಗಳನ್ನು ತೆರವು ಮಾಡಿಸುತ್ತೇವೆ ಮತ್ತು ಅವನ್ನು ರೆಸ್ಟೋರ್ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ಆದರೆ ಇವೊತ್ತು ಆ ಕೆಲಸವಾಗುತ್ತಿಲ್ಲ.

ಮಾನ್ಯ ಅಧ್ಯಕ್ಷರೆ, ಪಂಚಾಯತ್ ರಾಜ್ ವ್ಯವಸ್ಥೆ, ಇದರಲ್ಲಿ ಏನಾಗಿದೆ ಎಂದರೆ ಇವತ್ತು ನಾವು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗೆ ಸಾಕಷ್ಟು ಅಧಿಕಾರವನ್ನು ಕೊಡಬೇಕು, ಪೂಜ್ಯ ಗಾಂಧೀಜಿಯವರ ಕನಸನ್ನು ನನಸು ಮಾಡಬೇಕು, ಅಧಿಕಾರ ವಿಕೇಂದ್ರೀಕರಣ ವಾಗಬೇಕೆಂದು ಮಾಡಿದ್ದೆವು. ಆದರೆ ಇವತ್ತು ಅಧಿಕಾರ ವಿಕೇಂದ್ರೀಕರಣ ವಾಗಬೇಕೆಂದರೆ ನಾವು ಮೊದಲು ಜನರನ್ನು ಎಜ್ಯುಕೇಟ್ ಮಾಡಬೇಕು. ಎಜ್ಯುಕೇಟ್ ಮಾಡಿದಾಗ ಮಾತ್ರ, ಈ ಅಧಿಕಾರ ವಿಕೇಂದ್ರೀಕರಣ ಮಾಡಿದಂತಹ ಅಧಿಕಾರ ಸದುಪಯೋಗ ಮಾಡಿಕೊಳ್ಳುತ್ತಾರೆ. ಗ್ರಾಮೀಣ ಪ್ರದೇಶದ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೆ ಇದ್ದರೆ ಈ ಅಧಿಕಾರ ದುರುಪಯೋಗ ಆಗುತ್ತದೆ. ಇವತ್ತು ನಾವು ಸಾಕಷ್ಟು ಕಡೆ ನೋಡುತ್ತಿದ್ದೇವೆ; ಪ್ರಬಲವಾಗಿ ಇರತಕ್ಕಂಥವರು ಗ್ರಾಮೀಣ ಪ್ರದೇಶದಲ್ಲಿ ಸೈಟುಗಳನ್ನು ಹಂಚುವುದಿರಬಹುದು, ಮನೆಗಳನ್ನು ಕೊಡುವುದಿರಬಹುದು ಇವತ್ತು ಬಹಳಷ್ಟು ಅವ್ಯವಹಾರ ಆದುದ್ದನ್ನು ನೋಡಿದ್ದೇವೆ. ಒಂದು ಮನೆ ಕೊಡಬೇಕೆಂದರೆ, ಕನಿಷ್ಟ ಗ್ರಾಮೀಣ ಪ್ರದೇಶದಲ್ಲಿ 5 ಸಾವಿರ ರೂಪಾಯಿ ಫಲಾನುಭವಿಗಳಿಂದ ಡಿಮ್ಯಾಂಡ್ ಮಾಡುತ್ತಾರೆ. 5 ಸಾವಿರ ರೂಪಾಯಿ ಫಲಾನುಭವಿಗಳಿಂದ ತೆಗೆದುಕೊಂಡು ಮನೆ ಹಂಚಿದರೆ, ಆ ಬಡವರು ಯಾವರೀತಿಯಾಗಿ ಉದ್ದಾರವಾಗುವುದಕ್ಕೆ ಸಾಧ್ಯವಿದೆ? ಇದನ್ನು ತಾವು ವಿಚಾರ ಮಾಡಬೇಕಾಗುತ್ತದೆ. ನಾವು ಅಧಿಕಾರ ವಿಕೇಂದ್ರೀಕರಣಕ್ಕೆ ವಿರೋಧ ಇಲ್ಲ. ಆದರೆ ಕೊಟ್ಟಂತಹ ಅಧಿಕಾರವನ್ನು ಸದುಪಯೋಗ ಮಾಡಿಕೊಂಡು ಜನಹಿತಕಾರಿ ಕಾರ್ಯ ಮಾಡುತ್ತಾರೆಯೇ ಇಲ್ಲವೇ ಎನ್ನುವುದು ಬಹಳ ಮುಖ್ಯ. ಅದನ್ನು ನೋಡುವುದಕ್ಕೆ ನಾವು ಇವತ್ತು ವ್ಯವಸ್ಥೆಯನ್ನು ಮಾಡಿಲ್ಲ. ಇವತ್ತು ಈ ಜಲಾನಯನ, ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ಹಾಗೆ, 5 ಸಾವಿರ ರೂಪಾಯಿ ಕೂಡ ಬೇಕಾಗುವುದಿಲ್ಲ, ಅಂತಹ ಕೆಲಸಕ್ಕೆ ಅವರದೇ ಆದಂತ ಎಸ್ಟಿಮೇಟ್, ಅವರದೇ ಆದಂತಹ ರೇಟುಗಳನ್ನು ಮಾಡುತ್ತಾರೆ. ಒಂದು ಕೃಷಿ ಹೊಂಡಕ್ಕೆ 22,500 ರೂಪಾಯಿ ಫಿಕ್ಸ್

ಮಾಡಿದ್ದಾರೆ. ಅದನ್ನು ನಾವು ಮಾಡಿಸಿದರೆ 5 ಸಾವಿರ ರೂಪಾಯಿ ಕೂಡ ಬೇಕಾಗುವುದಿಲ್ಲ. ಇವತ್ತು ಇಷ್ಟೊಂದು ನೂರಕ್ಕೆ 75 ರಷ್ಟು ಹಣ ಅದರಲ್ಲಿ ದುರುಪಯೋಗ ಅಗುತ್ತದೆ. ಅದನ್ನು ಯಾರು ನೋಡುವುದು? ಯಾರೂ ನೋಡುತ್ತಿಲ್ಲ. ಅದಕ್ಕೆ ಸರ್ಕಾರ ಏನಾದರೂ ಒಂದು ಬಿಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ರೈನ್‌ವಾಟರ್ ಹಾರ್ವೆಸ್ಟಿಂಗ್ ಮಾಡಬೇಕು ಎನ್ನುವ ಕಾರಣಕ್ಕಾಗಿ ನಾವು ಅಲ್ಲಲ್ಲಿ ನಾಲಾ ಬಂಡ್‌ಗಳನ್ನು ಮಾಡಿದ್ದೇವೆ. ಚೆಕ್‌ಡ್ಯಾಂಗಳನ್ನು ಕಟ್ಟಿದ್ದೇವೆ. ಬ್ಯಾರೇಜುಗಳನ್ನು ಕಟ್ಟಿದ್ದೇವೆ. ಗೋಕಟ್ಟೆಗಳನ್ನು ಕಟ್ಟಿದ್ದೇವೆ. ಆದರೆ ಅದರಲ್ಲಿ ನೀರು ನಿಲ್ಲುತ್ತದೆಯೇ ಇಲ್ಲವೇ ಎಂದು ನೋಡುವುದಕ್ಕೆ ಕೂಡ ಯಾರೂ ತಯಾರಿಲ್ಲ, ಸರಿಯಾದ ಸೂಪರ್‌ವಿಷನ್ ಇಲ್ಲವೆಂದರೆ, ಇದು ಯಾವರೀತಿಯ ಸರ್ಕಾರದ ಆಡಳಿತ ಎನ್ನುವುದನ್ನು ನಾನು ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇವತ್ತು ಈ ಚೆಕ್‌ಡ್ಯಾಂಗಳು, ಗೋಕಟ್ಟೆ ಹಾಗೂ ನಾಲಾ ಬಂಡ್ ಇವುಗಳಲ್ಲಿ ನೂರಕ್ಕೆ ಎಪ್ಪತ್ತರಷ್ಟು ಹಣ ದುರುಪಯೋಗವಾಗುತ್ತಿದೆ. ಅದಕ್ಕಾಗಿ ಅದರ ಬಗ್ಗೆ ಸರ್ಕಾರ ವಸ್ತುಸ್ಥಿತಿಯನ್ನು ಅರಿತು ಪ್ರಾಕ್ಟಿಕಲ್ಲಾಗಿ ರೇಟುಗಳನ್ನು ನಿಗದಿ ಮಾಡಬೇಕು. ಇಲ್ಲಿ ಸೋರಿಕೆಯನ್ನು ತಡೆಗಟ್ಟಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಅರಣ್ಯ ಇಲಾಖೆಯಲ್ಲಿ, ನಾವು ಪ್ರತಿಯೊಂದರಲ್ಲೂ ಹಣ ಕೊಡುತ್ತೇವೆ ಅದು ಫಾರೆಸ್ಟ್ ಡೆವಲಪ್‌ಮೆಂಟ್‌ಗೆ. ನಾವು ಇವತ್ತಿನವರೆಗೂ ಸ್ವಾತಂತ್ರ್ಯ ಬಂದಮೇಲೆ ಈ ಪ್ರಜಾ ಸರ್ಕಾರದಲ್ಲಿ ಕೊಟ್ಟಂತಹ ಹಣ ನೋಡಿದರೆ, ಒಂದು ಇಂಚು ನೆಲ ಕೂಡ ಕಾಣಬಾರದು; ಎಲ್ಲಾ ಹಸಿರಾಗಿ ಕಾಣಬೇಕು, ಎಲ್ಲಾ ಕಡೆ ಗಿಡ ಮರ ಬೆಳೆಯಬೇಕು. ಆದರೆ ಏಕೆ ಆ ರೀತಿ ಆಗುತ್ತಿಲ್ಲ? ಇವತ್ತು ನಮ್ಮ ಜಿಲ್ಲೆಯಲ್ಲಿ ಹೇಳಬೇಕೆಂದರೆ ಎಲ್ಲೂ ಕೂಡ ಅರಣ್ಯ ಗಿಡಗಳನ್ನು ಬೆಳೆಸುವುದಕ್ಕೆ ಸಾಧ್ಯವಾಗಿಲ್ಲ. ಪ್ರತಿವರ್ಷ ಕೋಟಿಗಟ್ಟಲೆ ರೂ. ಹಣವನ್ನು ಒಂದೊಂದು ತಾಲ್ಲೂಕಿಗೆ ಕೊಡುತ್ತಿದ್ದೇವೆ. ಅವರಿಗೂ ಕೂಡ ಜಲಾನಯನ ಕೆಲಸ ಮಾಡುವುದಕ್ಕೆ ಹಣ ಕೊಡುತ್ತೇವೆ. ಫಾರೆಸ್ಟ್ ಏರಿಯಾದಲ್ಲಿ ಮಳೆ ನೀರನ್ನು ಹಿಡಿದು ಇಟ್ಟುಕೊಳ್ಳಬೇಕು ಮಳೆ ನೀರು ಅಲ್ಲೇ ಇಂಗಬೇಕು, ಪ್ರಾಣಿಗಳಿಗೆ, ಪಕ್ಷಿಗಳಿಗೆ ಮತ್ತು ದನಕರುಗಳಿಗೆ ಕುಡಿಯುವುದಕ್ಕೆ ಅನುಕೂಲವಾಗಬೇಕು, ಎನ್ನುವ ಕಾರಣಕ್ಕಾಗಿ ನಾವು ಇವತ್ತು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಆದರೆ ಆ ಕೆಲಸವಾಗುತ್ತಿಲ್ಲ. ಇವತ್ತು ಸಸಿಗಳನ್ನು ನೆಟ್ಟಿದ್ದೇವೆ ಎಂದು ಹೇಳುತ್ತಾರೆ, ಆದರೆ ಎಲ್ಲೂ ನಮ್ಮ ಕಣ್ಣಿಗೆ ಕಾಣುವುದಿಲ್ಲ. ಪ್ರತಿವರ್ಷ ಕನಿಷ್ಟಪಕ್ಷ ಒಂದೊಂದು ತಾಲ್ಲೂಕಿಗೆ ಒಂದೊಂದು ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಅಷ್ಟೇ ಅಲ್ಲ ಇನ್ನೊಂದು ಹೊಸದು ಪ್ರಾರಂಭವಾಗಿದೆ ಅರಣ್ಯ ಇಲಾಖೆಯಲ್ಲಿ ಎಂದರೆ, ಅರಣ್ಯ ಭೂಮಿಯಲ್ಲಿ ಇರತಕ್ಕಂಥ ಕಲ್ಲುಗಳನ್ನು ಮಾರಾಟ ಮಾಡಿಕೊಳ್ಳುವುದು, ಗೆರಸು ಮಾರಾಟ ಮಾಡಿಕೊಳ್ಳುವುದು, ಉಸುಕು ಇತ್ತೆಂದರೆ ಉಸುಕು ಮಾರಾಟ ಮಾಡಿಕೊಳ್ಳುವುದು, ಇದು ಅವ್ಯಾಹತವಾಗಿ ಇಡೀ ರಾಜ್ಯದ ತುಂಬಾ ನಡೆಯುತ್ತಿದೆ. ಇವತ್ತು ನನ್ನ ಕ್ಷೇತ್ರದಲ್ಲಿ ನಾನು, ಫಾರೆಸ್ಟ್ ಡಿಪಾರ್ಟ್‌ಮೆಂಟ್ ಸೆಕ್ರೆಟರಿಯವರಿಗೆ ಒಂದು ಪತ್ರ ಕೊಟ್ಟಿದ್ದೆ. ರೇಂಜ್ ಫಾರೆಸ್ಟ್ ಒಬ್ಬ ಅಧಿಕಾರಿ ಅರಣ್ಯ ಭೂಮಿಯಲ್ಲಿ ಇರುವಂತಹ ಮಣ್ಣು, ಗೆರಸು ಸಂಪೂರ್ಣವಾಗಿ ಮಾರಾಟ ಮಾಡಿಕೊಂಡುಬಿಟ್ಟಿದ್ದಾನೆ. 10–15 ಅಡಿಗಳಷ್ಟು ತಗ್ಗು ಇವತ್ತು ಇಡೀ ಕ್ಷೇತ್ರದ ತುಂಬಾ ಬಿದ್ದುಬಿಟ್ಟಿದೆ. ನನ್ನ ಕ್ಷೇತ್ರದಲ್ಲಿನ ಫಾರೆಸ್ಟ್ ಭೂಮಿ ಹೆಚ್ಚು ಇದೆ, ಆದರೆ ಫಾರೆಸ್ಟ್ ಬೆಳೆಸುವುದಕ್ಕಾಗಿಲ್ಲ. ಆ ಭೂಮಿಯಲ್ಲಿ ಹೆಚ್ಚು ಕಡಿಮೆ ಅಲ್ಲಿರತಕ್ಕಂಥ ಮಣ್ಣು, ಗೆರಸು ಎಲ್ಲಾ ಮಾರಾಟ ಮಾಡಿಕೊಂಡು ಆ ಭೂಮಿಯನ್ನು ಹಾಳು ಮಾಡಿದ್ದಾರೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ನಾನು ಬರೆದು ಸುಮಾರು ಎರಡು ತಿಂಗಳಾಗಿರಬಹುದು, ಆದರೆ ಆ ಇಲಾಖೆಯಿಂದ ಏನೂ ಆಗುತ್ತಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಾನ್ಯ ಅಧ್ಯಕ್ಷರೆ, ತಾವು ಅರ್ಜಿಯನ್ನು ನನಗೆ ಕೊಟ್ಟಿದ್ದರೆ, ಅದರ ಬಗ್ಗೆ ಎನ್‌ಕ್ವೈರಿ ಮಾಡಿ ತಕ್ಷಣ ಅದಕ್ಕೆ ಪರಿಹಾರ ಕೊಡಿಸುತ್ತಿದ್ದೆ. ಆ ರೀತಿ ಎಲ್ಲೆಲ್ಲಿ ಮಾಡಿದ್ದಾರೆಂದು ನನಗೆ ಕೊಡಿ. ನನಗೆ ಕೊಟ್ಟರೆ ನಾನು ಮಾಡಿ ಕೊಡುತ್ತೇನೆ. ತಕ್ಷಣ ಮಾಡಿಕೊಡುತ್ತೇನೆ. ಅದರಲ್ಲಿ ಏನಾದರೂ ತಪ್ಪು ಮಾಡಿದ್ದಾರೆ ಎಂದರೆ ಅದಕ್ಕೆ ಏನು ಶಿಕ್ಷೆ ಕೊಡಬೇಕು ಆ ಶಿಕ್ಷೆ ಕೊಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ:- ಅದನ್ನು ನಮ್ಮ ಗಮನಕ್ಕೆ ತಂದಿಲ್ಲ ನಾನು, ಅಧಿಕಾರಿಗಳಿಗೆ ಕೊಟ್ಟಿದ್ದೇನೆ. ಈಗ ಆರ್ಥಿಕ ಇಲಾಖೆ ಬಗ್ಗೆ ಹೇಳುವುದಾದರೆ ಕರ್ನಾಟಕ ಸರ್ಕಾರದಲ್ಲಿ ಆರ್ಥಿಕ ಇಲಾಖೆ ಇದೆ. ನಮಗೆ ಒಂದು ಅರ್ಥವಾಗುತ್ತಿಲ್ಲ. ಈ ಬಜೆಟ್ ಅನ್ನು ನಾವು ಮಂಡಿಸಿದ ಮೇಲೆ, ಯಾವ್ಯಾವ ಫಂಡ್‌ನಲ್ಲಿ ಯಾವ್ಯಾವ ಬಾಬ್ತಿಗೆ, ಯಾವ್ಯಾವ ಇಲಾಖೆಗೆ ನಾವು ಎಷ್ಟು ಹಣವನ್ನು ಇಟ್ಟಿರುತ್ತೇವೆ, ಆ ಹಣಕ್ಕೆ ಸದನ ಮಂಜೂರಾತಿ ಕೊಡುತ್ತದೆ. ಮಂಜೂರು ಕೊಟ್ಟಮೇಲೆ ಯಾವುದೇ ಅಡೆತಡೆಗಳು ಇಲ್ಲದೆ ಆ ಹಣಕಾಸಿನ ವರ್ಷದಲ್ಲಿ ಸಂಪೂರ್ಣ ಹಣ ಖರ್ಚಾಗಬೇಕು. ಆದರೆ ಇಲ್ಲಿ ಏನು ಹೊಸ ಸ್ಟೈಲ್ ಇದೆ ಎಂದರೆ, ಎಲ್ಲಾ ಅಧಿಕಾರವನ್ನು ಇಲ್ಲೇ ಇಟ್ಟುಕೊಳ್ಳಬೇಕೆಂದು ಹೇಳಿ, ಪ್ರತಿಯೊಂದಕ್ಕೂ ಇವತ್ತು ನಾವು ನೀರಾವರಿ ಇಲಾಖೆಗೆ, 800 ಕೋಟಿ ರೂಪಾಯಿ ಕೊಟ್ಟಿದ್ದೇವೆ ಅಂದರೆ ಆ 800 ಕೋಟಿ ರೂಪಾಯಿ ಖರ್ಚಾಗುವವರೆಗೆ ಆರ್ಥಿಕ ಇಲಾಖೆಯ ಹತ್ತಿರ ನಾವು ಹೋಗಬಾರದು. ಈ ಸದನದಲ್ಲಿ ಮಂಜೂರಾತಿ ಕೊಟ್ಟಮೇಲೆ, ಅದು ಮುಗಿಯುವವರೆಗೂ ಹೋಗಬಾರದು. 810 ರೂಪಾಯಿ ಖಚು ಮಾಡುತ್ತೇವೆ ಎಂದರೆ, ಆ ಹಣಕಾಸು ಇಲಾಖೆಗೆ 10 ರೂಪಾಯಿ ಖರ್ಚು ಮಾಡುವುದಕ್ಕೆ ಅನುಮೋದನೆಗಾಗಿ ಆರ್ಥಿಕ ಇಲಾಖೆಗೆ ಹೋಗಬೇಕು. ಆದರೆ ಈಗ ಹಾಗೆ ಆಗುತ್ತಿಲ್ಲ, ಪ್ರತಿಯೊಂದು ಕೆಲಸಕ್ಕೂ, ಇಂಡಿವಿಜ್ಯುಯಲ್ ವರ್ಕ್‌ಗೂ ಕೂಡ ಫೈಲ್ ಆರ್ಥಿಕ ಇಲಾಖೆಗೆ ಹೋಗಬೇಕು. ಅದನ್ನು ಆರ್ಥಿಕ ಇಲಾಖೆಯವರು ಇಟ್ಟು ಕೊಳ್ಳುವುದು. ಯಾವ ಕೆಲಸ ಕೂಡ ಆಗುತ್ತಿಲ್ಲ. ಇದರ ಬಗ್ಗೆ ಕೇಳಿದರೆ, ನಾವು ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ ಎಂದು ಹೇಳುತ್ತಾರೆ. ಎಷ್ಟೋ ಮಂದಿ ಸಚಿವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಿದರು. ಉದಾಹರಣೆಗೆ ನಮ್ಮ ಸೋಷಿಯಲ್ ವೆಲ್‌ಫೇರ್ ಮಿನಿಷ್ಟರ್, ನಾವು ಆರ್ಥಿಕ ಇಲಾಖೆಯನ್ನು ಕೇಳುತ್ತಿದ್ದೇವೆ ಎಂದು ಹೇಳುತ್ತಾರೆ. ಆರ್ಥಿಕ ಇಲಾಖೆಗೆ ಏಕೆ ಕೇಳುತ್ತೀರಿ, ಒಂದು ಸಲ ಅನುಮೋದನೆ ಆದ ಮೇಲೆ ಆರ್ಥಿಕ ಇಲಾಖೆಯನ್ನು ಕೇಳುವಂತಹ ಪ್ರಶ್ನೆ ಏನು ಬರುತ್ತದೆ? ಆ ಹಣಕಾಸಿನ ವರ್ಷಗಳಲ್ಲಿ ಆ ಕೆಲಸಗಳು ಆಗಲೇಬೇಕು. ಆರ್ಥಿಕ ಇಲಾಖೆಗೆ ಮತ್ತೆ ಹೋಗಬಾರದು. ಇವತ್ತು ಏನಾಗಿದೆ ಎಂದರೆ, ಕೆಲವು ವೆಕೆಂಟ್ ಪೋಸ್ಟ್‌ಗಳು, ಉದಾಹರಣೆಗೆ ಟೀಚರ್ ಪೋಸ್ಟ್‌ಗಳನ್ನು ತೆಗೆದುಕೊಳ್ಳಬೇಕು ಎಂದರೆ, ಸಾವಿರಾರು ಪೋಸ್ಟ್‌ಗಳು ವೆಕೆಂಟ್ ಒಂದೊಂದು ಜಿಲ್ಲೆಯಲ್ಲಿ ಇವೆ. ಆ ಜಿಲ್ಲೆಯಲ್ಲಿ ಅಪಾಯಿಂಟ್‌ಮೆಂಟ್ ಮಾಡಬೇಕಾದರೆ ಮತ್ತೆ ಆರ್ಥಿಕ ಇಲಾಖೆಯ ಪರ್ಮಿಷನ್ ತೆಗೆದುಕೊಳ್ಳಬೇಕು. ಆಲ್‌ರೆಡಿ ಈ ಸ್ಯಾಂಕ್ಷನ್ಡ್ ಪೋಸ್ಟ್‌ಗೆ ಈ ಸದನ ಸಂಪೂರ್ಣವಾಗಿ ಮಂಜೂರಾತಿಯನ್ನು ಕೊಟ್ಟಿರುತ್ತದೆ. ಮತ್ತೆ ಏಕೆ ನಾವು ಆರ್ಥಿಕ ಇಲಾಖೆಗೆ ಕಳುಹಿಸಬೇಕು? ಇದು ತಪ್ಪು. ಅದಕ್ಕಾಗಿ, ಈ ಆರ್ಥಿಕ ಇಲಾಖೆಯವರನ್ನು ಸರಿಯಾಗಿ ನಿರ್ವಹಣೆ ಮಾಡತಕ್ಕಂಥ ಸರಿಯಾದ ಮಂತ್ರಿಗಳು ಇಲ್ಲವೇನೋ ಎಂದು ನನಗೆ ಸಂಶಯ ಬರುತ್ತದೆ. ಏಕೆಂದರೆ 'ಆರ್ಥಿಕ ಇಲಾಖೆ ಸೆಕ್ರೆಟರಿ ಅಡ್ಡ ಬಂದಿದ್ದಾರೆ, ಆರ್ಥಿಕ ಇಲಾಖೆ ಕಮಿಷನರ್ ಅಡ್ಡ ಬಂದಿದ್ದಾರೆ' ಎಂದು ಹೇಳುತ್ತಾರೆ. ಏನು ಇದು? ಈ ವ್ಯವಸ್ಥೆ ಬದಲಾಗಬೇಕು. ಏಕೆಂದರೆ ಒಂದು ಸಾರಿ ನಾವು ಎಷ್ಟು ಸಾವಿರ ಕೋಟಿ

ರೂಪಾಯಿಗೆ ಅನುಮೋದನೆ ಕೊಟ್ಟಿರುತ್ತೇವೆ, ಅಷ್ಟು ಸಾವಿರ ಕೋಟಿ ರೂಪಾಯಿ ಖರ್ಚಾಗುವವರೆಗೂ ಅಲ್ಲಿಗೆ ಹೋಗಬಾರದು. ಅದು ಯಾವುದೇ ಇಲಾಖೆ ಇರಬಹುದು. ಅದಕ್ಕಾಗಿ ಸರ್ಕಾರ ಇದರ ಬಗ್ಗೆ ಸಂಪೂರ್ಣವಾಗಿ ಇನ್ನೊಂದು ಸಾರಿ ಇದನ್ನೆಲ್ಲಾ ನೋಡಿ ಆಯಾಯ ಹಣಕಾಸಿನ ವರ್ಷದಲ್ಲಿ ಅನುಮೋದನೆ ಆದಂತಹ ಕೆಲಸಗಳನ್ನು ಆದಷ್ಟು ಬೇಗನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ಇನ್ನೊಂದು ಏನು ಮಾಡುತ್ತಾರೆ ಅಂದರೆ, ಈ ಹಣಕಾಸು ಇಲಾಖೆಯವರು ಅಂದರೆ ಇಯರ್ ಎಂಡ್‌ವರೆಗೂ ಹಳ್ಳಿಗಳಲ್ಲಿ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ಬರತಕ್ಕಂಥ ಕೆಲಸಗಳಿಗೆ ಅನುಮೋದನೆ ಕೊಡುವುದಿಲ್ಲ, ಹಾಗೆಯೇ ಇಟ್ಟುಕೊಂಡು ಕುಳಿತುಕೊಳ್ಳುತ್ತಾರೆ. ಇಯರ್ ಎಂಡ್‌ಗೆ ಬಂದು ಹಣ ಖರ್ಚು ಮಾಡಿಲ್ಲವೆಂದು ಹೇಳಿ ರೀಅಪ್ರೋಪ್ರಿಯೇಷನ್ ಮಾಡಿಕೊಂಡು ಆ ಹಣವನ್ನು ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಿಕೊಂಡು ಬಿಡುತ್ತಾರೆ. ಅದೆಲ್ಲಾ ಬೆಂಗಳೂರಿಗೆ ಬರುತ್ತದೆ, ಅದೆಲ್ಲಾ ಮೈಸೂರಿಗೆ ಬರುತ್ತದೆ, ಅದೆಲ್ಲಾ ಹಾಸನಕ್ಕೆ ಬರುತ್ತದೆ. ಏಕೆ ಈ ರೀತಿ? ಯಾವ ಇಲಾಖೆಗೆ, ಯಾವ ಜಿಲ್ಲೆಗೆ ನಾವು ಕೊಟ್ಟಿರುತ್ತೇವೆ, ಆ ಹಣ ಅಲ್ಲೇ ಖರ್ಚಾಗಬೇಕು. ಖರ್ಚು ಮಾಡುವುದಕ್ಕಾಗಿಲ್ಲವೆಂದು ಹೇಳಿ ರೀಅಪ್ರೋಪ್ರಿಯೇಷನ್ ಮಾಡಿಕೊಳ್ಳುವುದು. ಮತ್ತೆ ತಮಗೆ ಬೇಕಾದಂತಹ ಹೊಸ ಯೋಜನೆಗಳನ್ನು ಸೇರಿಸುವುದು, ಹೊಸ ಕೆಲಸಗಳನ್ನು ಸೇರಿಸುವುದು, ಸೇರಿಸಿ ಉಪಯೋಗ ಮಾಡಿಕೊಳ್ಳುವಂತಹ ಕೆಲಸ ಸತತವಾಗಿ ನಡೆಯುತ್ತಿದೆ. ಅದಕ್ಕಾಗಿ ನಾನು ಒತ್ತಾಯ ಮಾಡುತ್ತೇನೆ, ಈ ರೀಜನಲ್ ಇಂಬ್ಯಾಲೆನ್ಸ್ ಹೋಗುವ ಸಲುವಾಗಿ, ಮತ್ತು ಈ ತಾರತಮ್ಯ ಹೋಗುವ ಸಲುವಾಗಿ ಪಾರದರ್ಶಕವಾದಂತಹ ಆಡಳಿತವನ್ನು ಸರ್ಕಾರ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಇದು ಮಾನ್ಯ ಮುಖ್ಯಮಂತ್ರಿಗಳ ನೇರ ಆಡಳಿತದಲ್ಲಿ ಬರತಕ್ಕಂಥ ಇಲಾಖೆ. ಮಾನ್ಯ ಅಧ್ಯಕ್ಷರೆ, ಇಲ್ಲಿ ಸಚಿವಾಲಯದಲ್ಲಿ ಕೆಲಸ ಮಾಡತಕ್ಕಂಥ ಸಿಬ್ಬಂದಿಯವರು ಅವರಿಗೆ ಏನಾಗಿದೆ ಅಂದರೆ ನಾವು ಮೊದಲು ನೋಡುತ್ತಿದ್ದೆವು, ಈ ಸದನದ ಬಗ್ಗೆ, ಈ ಮನೆ ಸಧಸ್ಯರ ಬಗ್ಗೆ, ಇಲ್ಲಿರತಕ್ಕಂಥ ಸಚಿವರ ಬಗ್ಗೆ ಸಾಕಷ್ಟು ಗೌರವದಿಂದ ಯಾವುದಾದರೂ ಪತ್ರ ಕಳುಹಿಸಿದರೆ, ಆ ಪತ್ರಕ್ಕೆ ಕೆಲಸ ಮಾಡಿ ಉತ್ತರ ಬರೆಯತಕ್ಕಂಥ ವ್ಯವಸ್ಥೆ ಇತ್ತು. ಸಚಿವರ ಪರ್ಸನಲ್ ಸ್ಟಾಫ್ ಕೂಡ ಆ ಒಂದು ವ್ಯವಸ್ಥೆಯನ್ನು ಇಟ್ಟುಕೊಂಡಿದ್ದರು, ಯಾರಾದರೂ ಒಂದು ಪತ್ರ ಕೊಟ್ಟರೆ, ಆ ಕೆಲಸ ಏನಾಯಿತು? ಆಯಿತು, ಇಲ್ಲ ಎನ್ನುವುದಕ್ಕೆ ಬರೆದು ತಿಳಿಸುತ್ತಿದ್ದರು.

ಆದರೆ ಇವತ್ತು ಏನಾಗಿದೆಯೆಂದರೆ ಯಾರು ಪತ್ರವನ್ನು ಕೊಟ್ಟರೂ ಯಾರೂ ಸಿಗುವುದಿಲ್ಲ. ಆ ಪತ್ರಗಳು ಕಳೆದೇ ಹೋಗಿರುತ್ರವೆ. ಆ ಪತ್ರವನ್ನು ಹುಡುಕುವುದು ಇಲ್ಲ. ಆ ಐ.ಎ.ಎಸ್. ಅಧಿಕಾರಿಗಳ ಕೆಟ್ಟ ಪ್ರವೃತ್ತಿ ಏನೆಂದರೆ, ಯವ ಶಾಸಕರು ಹೋಗಲಿ, ಸಾರ್ವಜನಿಕರು, ಅವರ ಕಚೇರಿಗೆ ಹೋದಂತಹ ಸಂದರ್ಭದಲ್ಲಿ ಅವರು 'ನಾನು ನೋಡುತ್ತೇನೆ' ಎನ್ನುವುದನ್ನು ಬಿಟ್ಟರೆ ಬೇರೆ ಏನೂ ಕಲಿತಿರುವುದಿಲ್ಲ. ಅವರು ಟ್ರೈನಿಂಗ್‌ಗೆ ಹೋದಂತಹ ಸಂದರ್ಭದಲ್ಲಿ ನೋಡುತ್ತೇನೆ, ಎನ್ನುವ ಶಬ್ದವನ್ನು ಬಾಯಿಪಾಠ ಮಾಡಿಸಿದ್ದಾರೊ, ಏನೋ ನನಗೆ ಗೊತ್ತಿಲ್ಲ. ನಾವು ಗಿಳಿಗಳಿಗೆ ಹೇಗೆ 'ರಾಮ ರಾಮ' ಎನ್ನುವುದನ್ನು ಕಲಿಸಿರುತ್ತೇವೆ. ಹಾಗೆ ಗಿಳಿ ರಾಮ, ರಾಮ ಎಂದು ಹೇಳುವ ಹಾಗೆ ಈ ಐ.ಎ.ಎಸ್. ಅಧಿಕಾರಿಗಳು ನಾನು ನೋಡುತ್ತೇನೆ ಎಂದು ಹೇಳುತ್ತಾರೆ. ನಾವು ಏನಾದರೂ ಈ ಒಂದು ಕೆಲಸ ಆಗಬೇಕು ಸಾರ್, ಎಂದು ಹೋಗಿ ಹೇಳಿದರೆ, ಆಗುತ್ತದೆಯೆ, ಇಲ್ಲವೇ ಎಂಬುದನ್ನು ನೋಡಿ ಹೇಳಬೇಕು, ಇಲ್ಲವೆಂದರೆ ನಾಲ್ಕು ದಿವಸಗಳ ಸಮಯವನ್ನು ತೆಗೆದುಕೊಂಡು

ಮಾಡಿಕೊಡುತ್ತೇವೆಂದು ಹೇಳಬೇಕು. ಅದು ಬಿಟ್ಟು ನಾನು ನೋಡುತ್ತೇನೆಂದು ಹೇಳುತ್ತಾರೆ. ಇವರು ಏನು ನೋಡುವುದು? ನಾವು ಏನು ಇವರು ನೋಡುವ ಸಲುವಾಗಿ ನಾವು ಟಪಾಲನ್ನು ತೆಗೆದುಕೊಂಡು ಹೋಗಿ ಕೊಡುವುದಕ್ಕೆ, ನಾವು ಮೆಸೆಂಜರ್ ಟೈಪ್ ಅವರ ಹತ್ತಿರ ತಿರುಗಾಡಬೇಕಾ? ಈ ಶಾಸನಸಭೆಗೆ ಏನೂ ಗೌರವ ಇಲ್ಲವೇ? ಇಲ್ಲಿ ಬಂದಂಥ ಸದಸ್ಯರಿಗೆ ಗೌರವವಿಲ್ಲವೇ? ಇಂತಹ ಒಂದು ಕೆಟ್ಟ ಪರಿಸ್ಥಿತಿ ಇದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇದರಲ್ಲಿ ಸುಧಾರಣೆಯನ್ನು ತರಬೇಕಾಗುತ್ತದೆ. ಈ ಸಚಿವಾಲಯದಲ್ಲಿರುವಂಥವರು ಎಲ್ಲರೂ ಬೆಂಗಳೂರಿನವರೇ ಇದ್ದಾರೆ. ಇಲ್ಲಿ ಬೆಂಗಳೂರಿನ ಸುತ್ತಮುತ್ತಲೂ ಇರುವಂತಹ ಜನರು ಇದ್ದಾರೆ. ಇಲ್ಲಿ ನಾಲ್ಕೂವರೆ ಸಾವಿರ ಎಂಪ್ಲಾಯೀಸ್ ಇದ್ದಾರೆ. ಇವರಲ್ಲಿ ಎಲ್ಲಾ ಇಲ್ಲಿನವರೇ ಇದ್ದಾರೆ. ಇದರಲ್ಲಿ 270–280 ಜನರು ತುಂಗಭದ್ರಾ ನದಿಗೆ ದಾಟಿದ ಮೇಲೆ ಇರುವವರು. ಇನ್ನು ಉಳಿದವರೂ ಎಲ್ಲರೂ ಇಲ್ಲಿಯವರೇ ಇದ್ದಾರೆ. ಆದ್ದರಿಂದ ನನ್ನದು ಒಂದು ವಿನಂತಿ ಏನೆಂದರೆ, ಇವರನ್ನು ಒಂದೊಂದು ಆರು ತಿಂಗಳುಗಳು ಭಾಲ್ಕಿಗೆ, ಬೀದರ್, ಗುಲ್ಬರ್ಗಾಕ್ಕೆ ಇಂಡಿ, ಸಿಂಧಗಿಗೆ, ಬಿಜಾಪುರಕ್ಕೆ ಕಳುಹಿಸಿ. ಇವರಿಗೆ ಆ ಜನರ ಕಷ್ಟ, ಸುಖ ಏನೆಂಬುದು ಗೊತ್ತಾಗಲಿ. ಅ ಜನರು ಯಾವ ರೀತಿ ಬದುಕುತ್ತಾರೆಂಬುದು ಇವರಿಗೂ ಗೊತ್ತಾಗಲಿ. ಆಗ ಮಾತ್ರ ಇದು ಆಗುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಕಡೆಯವರು ಒಂದಿಬ್ಬರು ನಮ್ಮ ಕಡೆಯ ಐ.ಎ.ಎಸ್. ಅಧಿಕಾರಿಗಳು ಬಂದಿದ್ದಾರೆ. ಅವರು ಸ್ವಲ್ಪ ಕಳಕಳಿಯಿಂದ ಕೆಲಸವನ್ನು ಮಾಡುತ್ತಾರೆ. ಅದು ಗ್ರಾಮೀಣ ಪ್ರದೇಶದ ಬಗ್ಗೆ ಆಗಿರಬಹುದು, ನಮ್ಮ ಜನರ ಬಗ್ಗೆ ಆಗಿರಬಹುದು. ಬಡವರು ಅಲ್ಲಿಂದ ಇಲ್ಲಿಯವರೆಗೂ ರೊಟ್ಟಿಯನ್ನು ಚೀಲದಲ್ಲಿಟ್ಟುಕೊಂಡು ಬರುತ್ತಾರೆ. ಅವರಿಗೆ ಇಲ್ಲಿರುವ ಖಾನಾವಳಿಯಲ್ಲಿ ಉಣ್ಣುವ ಶಕ್ತಿ ಇರುವುದಿಲ್ಲ. ಒಂದು ನಾಲ್ಕು ರೊಟ್ಟಿಯನ್ನು ಕಟ್ಟಿಕೊಂಡು ಬಗಲಲ್ಲಿ ಬಂದಿರುವವರನ್ನು ಕರೆದು ಮಾತನಾಡಿಸುವವರು, ಒಂದು ಮೂರು ನಾಲ್ಕು ಅಧಿಕಾರಿಗಳು ಇರಬಹುದು, ಅವರು ಐ.ಎ.ಎಸ್. ಆಫೀಸರ್‌ಗಳು ಸೆಕ್ರೆಟರಿ ಲೆವಲ್‌ನವರು ಇದ್ದಾರೆ. ಈ ರೀತಿ ಇನ್ನು ಉಳಿದಂಥವರು ಯಾರೂ ಮಾಡುವುದಿಲ್ಲ. ಶಾಸಕರು ಹೋದರೂ ಅವರ ಕಣ್ಣಿಗೆ ಕಾಣಿಸುವುದಿಲ್ಲ, ಅವರು ನೋಡುತ್ತೇನೆ, ಎನ್ನುವ ಪದವನ್ನು ಬಿಟ್ಟರೆ ಬೇರೆ ಪದವನ್ನು ಅವರು ಮಾತನಾಡುವುದಿಲ್ಲ. ಇವರಲ್ಲಿ ಮೂರು, ನಾಲ್ಕು ಜನರು ಇದ್ದಾರೆ. ಅವರು ಒಳ್ಳೆಯವರು, ಪ್ರಾಮಾಣಿಕರು, ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ನಾವು ಅವರನ್ನು ಮೆಚ್ಚಬೇಕಾಗುತ್ತದೆ. ಇನ್ನು ಉಳಿದವರಿಗೆ ಏನು ಆಗಿದೆ? ಇವರಿಗೆ ಸಂಬಳವನ್ನು ಕೊಡುವುದಿಲ್ಲವೇ? ಸರ್ಕಾರದ ಅಧೀನದಲ್ಲಿ ಇವರು ಕೆಲಸವನ್ನು ಮಾಡುವುದಿಲ್ಲವೇ? ಸಕಾರದ ಪಾಲಿಸಿ, ಪ್ರೋಗ್ರಾಂಗಳನ್ನು ಇಂಪ್ಲಿಮೆಂಟ್ ಮಾಡುವಂತಹ ಜವಾಬ್ದಾರಿ ಇವರಿಗೆ ಇಲ್ಲವೇ? ಏಕೆ ಈ ರೀತಿಯಾಗುತ್ತದೆ? ಅದಕ್ಕೆ ನನಗೆ ಏನು ಅನ್ನಿಸುತ್ತದೆಂದರೆ, ಇದರಲ್ಲಿ ಒಂದು ನ್ಯೂನ್ಯತೆ ಇದೆ. ನಿನ್ನೆ ದಿವಸ ಸರ್ವಜ್ಞನ ವಚನವನ್ನು ಪೇಪರ್‌ನಲ್ಲಿ ನೋಡಿದೆ. ಅದು ಏನೆಂದರೆ,

ಅರಸು ಇಲ್ಲದ ಊರು,
ಪರಸು ಇಲ್ಲದ ನಿದ್ರೆ,
ಪುರುಷನಿಲ್ಲದ ಬಾಳು,
ನೀರೊಳಗೆ ಸರ್ಪ ಒಯ್ದದಂತೆ ಸರ್ವಜ್ಞ,

ಅರಸ ಊರಿನೊಳಗಿಲ್ಲವೆಂದರೆ ಅಜಾರೂಕತೆಯುಂಟಾಗುತ್ತದೆ. ಪರಸ ಸರಿಯಾಗಿಲ್ಲವೆಂದರೆ ನಿದ್ರೆ ಸರಿಯಾಗುವುದಿಲ್ಲ, ಹೆಣ್ಣಿಗೆ ಒಂದು ಗಂಡು ಇರಲಿಲ್ಲವೆಂದರೆ, ಆ ಬಾಳು ನಿರರ್ಥಕವಾಗುತ್ತದೆ. ಆ ಕಾರಣಕ್ಕಾಗಿ ಬಹುಶಃ ಸರ್ವಜ್ಞ ಈ ಮಾತುಗಳನ್ನು ಹೇಳಿದ್ದಾರೆ. ನಾನು ಒಟ್ಟಾರೆ ಏನು ಹೇಳುತ್ತೇನೆಂದರೆ, ಇದು ಅರಸು ಇಲ್ಲದ ಊರು, ಆಗಿದೆ.

ಶ್ರೀ ವಾಟಾಳ್ ನಾಗರಾಜ್: ಗಂಡಿಗೆ ಹೆಣ್ಣು ಇಲ್ಲದಿದ್ದರೆ ಹೇಗೆ?

ಶ್ರೀ ಗೋವಿಂದ ಎಂ. ಕಾರಜೋಳ: ಅದು ನಿಮಗೂ, ನಮಗೂ ಇಬ್ಬರಿಗೂ ಅನುಭವವಾಗಿದೆ. ನಾನು ಹೆಣ್ಣಿನದಷ್ಟೇ ಹೇಳಬೇಕಲ್ಲಾ.

ಅಧ್ಯಕ್ಷರು: ಮಾನ್ಯ ಗೋವಿಂದ ಎಂ. ಕಾರಜೋಳರವರೇ, ಮಾತನಾಡಿ. ಮಾನ್ಯ ವಾಟಾಳ್ ನಾಗರಾಜ್‌ರವರು ನಿಮ್ಮನ್ನು ದಾರಿ ತಪ್ಪಿಸಿಬಿಡುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೇ, ಏನೂ ಇಲ್ಲ. ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ. ನಮ್ಮವರು ಬಹಳ ಜನರು ಒಂದೊಂದು ಇಲಾಖೆಯ ಮೇಲೆ ಮಾತನಾಡುತ್ತೇನೆಂದು ಹೇಳಿದ್ದಾರೆ. ಆದುದರಿಂದ ನಾನು ಸ್ವಲ್ಪ ಮಾತನಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಾನು ನನ್ನ ಸ್ನೇಹಿತರಾದ ಶ್ರೀ ಜಿ.ವಿ.ಶ್ರೀರಾಮರೆಡ್ಡಿಯವರ ವಿಚಾರ ಬಂದಾಗ, ನಾನು ನಿಮಗೆ ಹೇಳಿದೆ. ಅದನ್ನು ನೀವು ಸ್ವಾರಸ್ಯಕರವಾಗಿ ಹೇಳಬೇಕಾಗಿತ್ತು.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೇ, ನಾನು ಇವತ್ತು ಕಾನೂನು ಮತ್ತು ಸುವ್ಯವಸ್ಥೆ ಪ್ರತಿಯೊಂದು ಸರಿಯಾಗಿ ಆಗಬೇಕಾದರೆ, ಸರ್ಕಾರದ ಪ್ರತಿಯೊಂದು ಪ್ರೋಗ್ರಾಂ, ಯೋಜನೆಗಳ ಲಾಭ ದೊರೆಯಬೇಕಾದರೆ, ಪ್ರಾಮಾಣಿಕರ ಅವಶ್ಯಕತೆ ಬಹಳ ಇದೆ. ಮಾನ್ಯ ಅಧ್ಯಕ್ಷರೇ, ರಾಜಕೀಯ ಚಿಂತಕರಾದ ಡಿಸ್ಲೇರಿಯವರು ಹೇಳುತ್ತಾರೆ. ಆಳುವ ಜನ ಪರಿಶುದ್ಧರಾದರೆ, ಶಾಸನಗಳು ಅನಾವಶ್ಯಕ, ಆಳುವ ಜನ ಪ್ರಾಮಾಣಿಕರಾದರೆ, ನಿಷ್ಠಾವಂತರಾದರೆ, ದಕ್ಷತೆಯುಳ್ಳವರು ಆದರೆ, ಶಾಸನಗಳು ಅನಾವಶ್ಯಕವೆಂದು ಹೇಳುತ್ತಾರೆ. ಆಳುವ ಜನ ಭ್ರಷ್ಟರಾದರೆ, ಶಾಸನಗಳು ನಿಷ್ಪ್ರಯೋಜಕವೆಂದು ಹೇಳಿದ್ದಾರೆ. ಅದನ್ನು ಅರ್ಥಮಾಡಿಕೊಂಡು ಈ ಸರ್ಕಾರ ಕೆಲಸವನ್ನು ಮಾಡಬೇಕೆಂದು ಹೇಳಿ, ನಾನು ಈ ಸಂದರ್ಭದಲ್ಲಿ ಹೇಳಿ, ನನಗೆ ಇಷ್ಟು ಹೊತ್ತಿನವರೆಗೂ ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ನಾನು ತಮಗೆ ವಂದಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶಿವರಾಜ್ ಸಜ್ಜನವರ್ (ಹಾವೇರಿ): ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಮೊದಲನೆಯದಾಗಿ ಜಲಸಂಪನ್ಮೂಲ ವ್ಯಾಪ್ತಿಗೆ ಬರುವಂತಹ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟಂತಹ ಏತ ನೀರಾವರಿ ಯೋಜನೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಈ ರಾಜ್ಯದಲ್ಲಿ ಒಟ್ಟು 473 ಏತ ನೀರಾವರಿ ಯೋಜನೆಗಳು ಇದ್ದು, ಅವುಗಳಲ್ಲಿ ಇಲಾಖೆಯ ಅಧಿಕಾರಿಗಳ ಮಾಹಿತಿಯ ಪ್ರಕಾರ 123 ಏತ ನೀರಾವರಿ ಯೋಜನೆಗಳು ನಾನಾ ಕಾರಣಗಳಿಂದ ಸ್ಥಗಿತಗೊಂಡಿವೆ. ಇಲಾಖೆಯ ಅಧಿಕಾರಿಗಳು ಕೊಟ್ಟಿರುವಂತಹ ವರದಿಯೂ ಕೂಡ ಸಂಪೂರ್ಣ ತಪ್ಪು ವರದಿಯೆಂಬುದನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇಲ್ಲಿ ನೂರಕ್ಕೆ ಎಪ್ಪತ್ತೈದು ಏತ ನೀರಾವರಿ ಯೋಜನೆಗಳು ಸ್ಥಗಿತಗೊಂಡಿದ್ದು, ಈ ರಾಜ್ಯದ ಸಾವಿರಾರು ಕೋಟಿ ರೂಪಾಯಿಗಳು ಇವತ್ತು ವ್ಯರ್ಥವಾಗುತ್ತಿದ್ದು, ರೈತರಿಗೆ ನೀರನ್ನು ಒದಗಿಸಬೇಕಾದಂತಹ ಸರ್ಕಾರ, ಅವರನ್ನು ಹಾಳು ಕೊಂಪೆಗೆ ದೂಡಿದೆ, ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈ 473 ಏತ ನೀರಾವರಿ ಯೋಜನೆಗಳಲ್ಲಿ ಅನೇಕ ಯೋಜನೆಗಳು ನೀರಿನ ಮೂಲ ಇಲ್ಲದೇ ಸ್ಥಗಿತಗೊಂಡಿದೆ. ಇನ್ನು ಕೆಲವು ಯೋಜನೆಗಳು ದುರಸ್ಥಿ, ಇನ್ನು ಕೆಲವು ಕಾಮಗಾರಿ ಕೆಲಸಗಳಿಂದ ಸ್ಥಗಿತಗೊಂಡಿದೆ. ಇವುಗಳಲ್ಲಿ ಬಹುತೇಕವಾಗಿ ವಿದ್ಯುತ್ ಬಿಲ್ ಕಟ್ಟದೇ ಇರುವುದರಿಂದ, ಸ್ಥಗಿತಗೊಂಡಿರುವಂಥಾದ್ದು, ಬಹಳ ಖೇದವಾಗುವಂತಹ ಮತ್ತು ದುರ್ದೈವದ ಸಂಗತಿಯಾಗಿದೆ. ರಾಜ್ಯ ಸರ್ಕಾರ ತುಂಬಬೇಕಾಗಿರುವಂತಹ ಈ ವಿದ್ಯುತ್ ಬಾಕಿಯನ್ನು

ತಕ್ಷಣ ತುಂಬಿದರೆ ಅದರಲ್ಲಿ ಸ್ಥಗಿತಗೊಂಡಿರುವಂತಹ ನೂರಕ್ಕೆ ಐವತ್ತರಷ್ಟು ಯೋಜನೆಯನ್ನು ತಕ್ಷಣ ನಾವು ಪ್ರಾರಂಭ ಮಾಡಬಹುದು. ನನ್ನಲ್ಲಿ ಲಭ್ಯವಿರುವಂತಹ ಸಣ್ಣ ನೀರಾವರಿ ವಿಭಾಗ, ಧಾರವಾಡದ ಮಾಹಿತಿಯನ್ನು ತಮಗೆ ಕೊಡಲಿಚ್ಛಿಸುತ್ತೇನೆ. ಒಟ್ಟು ಧಾರವಾಡದ ವಲಯದಲ್ಲಿ 34 ಏತ ನಿರಾವರಿ ಯೋಜನೆಗಳಿಂದ 15,758.90 ಹೆಕ್ಟೇರ್ ಜಮೀನಿಗೆ ನಾವು ನೀರನ್ನುಒದಗಿಸುತ್ತಿದ್ದೇವೆ. ಈ 34 ಏತ ನಿರಾವರಿಗಳಲ್ಲಿ 13 ಏತ ನಿರಾವರಿ ಯೋಜನೆಗಳಿಂದ 12,766 ಹೆಕ್ಟೇರ್ ಜಮೀನಿಗೆ ಏತ ನಿರಾವರಿ ಯೋಜನೆ ಸ್ಥಗಿತಗೊಂಡಿರುವುದರಿಂದ, ಇವತ್ತು ನಾವು ನೀರನ್ನು ಕೊಡಲು ಸಾಧ್ಯವಾಗುತ್ತಿಲ್ಲ. ಕೇವಲ 11 ಏತ ನಿರಾವರಿ ಯೋಜನೆಗಳು ಚಾಲು ಇವೆ. ಈ 11 ಏತ ನಿರಾವರಿ ಯೋಜನೆಗಳಿಂದ 2,992 ಹೆಕ್ಟೇರ್‌ಗೆ ಮಾತ್ರ ನೀರನ್ನು ಕೊಡಲು ಸಾಧ್ಯವಾಗಿದೆ. ಈ 34 ಏತ ನಿರಾವರಿ ಯೋಜನೆಗಳಿಗೆ 16 ಕೋಟಿ ರೂಪಾಯಿಗಳಿಗೂ ಹೆಚ್ಚಿಗೆ ಹಣಕಾಸನ್ನು ತೊಡಗಿಸಿದ್ದೇವೆ. ಆದರೆ ಬಹುತೇಕವಾಗಿ 14 ಯೋಜನೆಗಳು ಸ್ಥಗಿತಗೊಂಡಿ–ರುವುದರಿಂದ, ಕೇವಲ 2,992 ಹೆಕ್ಟಾರ್ ಜಮೀನಿಗೆ ಮಾತ್ರ ನಾವು ನೀರನ್ನು ಒದಗಿಸುತ್ತಿದ್ದೇವೆ. ಇದು ರೈತರ ಹಿತದೃಷ್ಟಿಯಿಂದ, ರೈತರನ್ನು ಏಳಿಗೆ ಮಾಡಬೇಕು, ರೈತ ಸುಧಾರಣೆಯಾಗಬೇಕೆಂಬ ವಿಚಾರವನ್ನು ಸರ್ಕಾರ ಈಗಾಗಲೇ ವ್ಯಕ್ತಪಡಿಸಿದೆ. ನಾವು ರೈತರ ಉದ್ಧಾರವನ್ನು ಮಾಡುತ್ತೇವೆ. ರೈತನಿಗೆ ಎಲ್ಲಾ ಅನುಕೂಲತೆಯನ್ನು ಮಾಡಿಕೊಡುತ್ತೇವೆನ್ನುವಂತಹ ಸರ್ಕಾರ, ಆದರೆ ಈ ಏತ ನಿರಾವರಿಗೆ ಹೂಡಿರುವಂತಹ ಎಲ್ಲಾ ಹಣಕಾಸು ಇವತ್ತು ವ್ಯರ್ಥವಾಗಿ ಹೋಗುತ್ತಿರುವುದರಿಂದ ಸರ್ಕಾರ ಈ ಯೋಜನೆಯ ಬಗ್ಗೆ ಚಿಂತನೆಯನ್ನು ಮಾಡಿ, ಸ್ಥಗಿತಗೊಂಡಿರುವಂತಹ ಈ ಯೋಜನೆಗಳನ್ನು ಆದಷ್ಟು ಶೀಘ್ರದಲ್ಲಿ ಪ್ರಾರಂಭ ಮಾಡಿ, ರೈತರಿಗೆ ನೀರನ್ನು ಕೊಡುವಂತಹ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನವನ್ನು ಮಾಡಬೇಕೆಂದು, ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ನನ್ನ ಜಿಲ್ಲೆಯ ಹಾವೇರಿ ಜಿಲ್ಲೆಯಲ್ಲಿ 24 ಏತ ನೀರಾವರಿ ಯೋಜನೆಗಳು ಇವೆ. ಆ 24 ಯೋಜನೆಗಳಲ್ಲಿ, 14 ಏತ ನೀರಾವರಿ ಯೋಜನೆಗಳು ಸ್ಥಗಿತಗೊಂಡು, ಕೇವಲ 10 ಏತ ನೀರಾವರಿ ಯೋಜನೆಗಳು ಮಾತ್ರ ಚಾಲೂ ಇವೆ. ನನ್ನ ಹಾವೇರಿ ತಾಲ್ಲೂಕಿನಲ್ಲಿ 4 ಏತ ನೀರಾವರಿ ಯೋಜನೆಗಳಿವೆ. ಆ ನಾಲ್ಕು ಯೋಜನೆಗಳಲ್ಲಿ ಯಾವುದೂ ಕೂಡ ಪ್ರಾರಂಭವಾಗಿಲ್ಲ. ನಾಲ್ಕು ಯೋಜನೆಗಳೂ ಬಂದ್ ಅಗಿರುವುದರಿಂದ ಆ ಭಾಗದ ರೈತರು, ಕೇವಲ ಮೂಗಿಗೆ ತುಪ್ಪವನ್ನು ಒರೆಸುವಂಥ ಈ ಸರ್ಕಾರದ ನೀತಿಯಿಂದ ರೊಚ್ಚಿಗೆದ್ದು, ರಸ್ತೆ ರೋಕೋ ಹಾಗೂ ಇನ್ನಿತರ ಅನೇಕ ಧರಣಿಗಳನ್ನು ಕೂಡ ಮಾಡುತ್ತಿದ್ದಾರೆ. ಕಳೆದ ವರ್ಷ ನವೆಂಬರ್‌ನಲ್ಲಿ ನನ್ನ ಹಾವೇರಿ ತಾಲ್ಲೂಕಿನಲ್ಲಿ ನಾನು ಶಾಸಕನಾಗಿ ಆಯ್ಕೆಯಾದ ನಂತರ ಒಂದು ಏತ ನೀರಾವರಿ ಯೋಜನೆಯನ್ನು ಉದ್ಘಾಟನೆ ಮಾಡಿದೆ. ಅದು ಇವತ್ತಿಗೂ ಪ್ರಾರಂಭವಾಗಿಲ್ಲ. 6 ತಿಂಗಳ ಹಿಂದೆ ಪ್ರಾರಂಭವಾದಂಥ ಆ ಯೋಜನೆ ವಿದ್ಯುತ್ ಬಾಕಿಯಿಂದ ಸ್ಥಗಿತವಾಗಿರುವುದನ್ನು ನೋಡಿದರೆ, ಇವತ್ತು ಸರ್ಕಾರ ಏತ ನೀರಾವರಿ ಯೋಜನೆಗಳ ಬಗ್ಗೆ ಎಷ್ಟು ಕಾಳಜಿಯನ್ನು ವಹಿಸಿದೆ ಎನ್ನುವುದು ನಮಗೆ ಗೊತ್ತಾಗುತ್ತದೆ. ಅದಕ್ಕಾಗಿ, ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತಿದ್ದೇನೆ, ಈ ಏತ ನೀರಾವರಿ ಯೋಜನೆಗಳ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿ, ಇಲಾಖೆಯ ತಜ್ಞರನ್ನು ಇದರಲ್ಲಿ ಇನ್‌ವಾಲ್ವ್ ಮಾಡಿಕೊಂಡು ಏತ ನೀರಾವರಿ ಯೋಜನೆಗಳನ್ನು ಹೇಗೆ ಪ್ರಾರಂಭ ಮಾಡಬೇಕು, ಹೇಗೆ ದುರಸ್ತಿ ಮಾಡಬೇಕು, ವಿದ್ಯುತ್ ಬಾಕಿ ಎಷ್ಟಿದೆ, ಅದನ್ನು ಶೀಘ್ರವಾಗಿ ಕಟ್ಟುವುದಕ್ಕೆ ಸರ್ಕಾರ ನಿಗಾ ವಹಿಸಬೇಕು ಎಂದು ತಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇವತ್ತು ಸಣ್ಣ ನೀರಾವರಿ ಇಲಾಖೆಗೆ ಹಣ ಕೊಡದೇ ಇರುವುದರಿಂದ, ಆ ಇಲಾಖೆಗೆ ಸಂಬಂಧಪಟ್ಟ ಅನೇಕ

ಯೋಜನೆಗಳು ಸ್ಥಗಿತವಾಗಿವೆ. ವಿದ್ಯುತ್ ಬಿಲ್‌ಗಳು, ಫೋನ್ ಬಿಲ್‌ಗಳಿಗೆ ಸಹಾ ಈ ಇಲಾಖೆಯಲ್ಲಿ ಹಣ ಇಲ್ಲ. ಎಷ್ಟು ದುರ್ದೈವ ನೋಡಿ. ಆ ಇಲಾಖೆಗೆ ಫೋನ್ ಮಾಡಿ ನಾವು ಏನಾದರೂ ಮಾಹಿತಿಯನ್ನು ಪಡೆದುಕೊಳ್ಳಬೇಕೆಂದರೆ, ಬಿಲ್ ಕಟ್ಟದೇ ಆ ಫೋನ್‌ಗಳು ಸಹಾ ಕಟ್ ಆಗಿವೆ. ಇದು ದುರ್ದೈವ, ರೈತರಿಗೆ ನೀರನ್ನು ಒದಗಿಸುವಂಥ ಈ ಇಲಾಖೆಯ ದುಸ್ಥಿತಿಯನ್ನು ನೋಡಿದರೆ ರೈತರಿಗೆ ನೀರನ್ನು ಒದಗಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮ ಹಾವೇರಿ ಜಿಲ್ಲೆಯಲ್ಲಿ ವರದಾ ಕುಮುದ್ವತಿ ಹಾಗೂ ತುಂಗಭದ್ರಾ ನದಿಗಳು ಹರಿಯುತ್ತಿವೆ. ವರದಾ ನದಿಗೆ ಸುಮಾರು 13 ಬ್ಯಾರೇಜುಗಳನ್ನು ಕಟ್ಟಿದ್ದಾರೆ. ಆ 13 ಬ್ಯಾರೇಜುಗಳ ಪೈಕಿ 10 ಬ್ಯಾರೇಜುಗಳಲ್ಲಿ ಇವತ್ತು ನಾನಾ ಕಾರಣಗಳಿಂದ ಬೇಸಿಗೆಯಲ್ಲಿ ನೀರನ್ನು ನಿಲ್ಲಿಸಲು ಸಾಧ್ಯವಾಗುತ್ತಿಲ್ಲ. ನಾಲ್ಕು ವರ್ಷಗಳ ಭೀಕರ ಬರಗಾಲ ಒಂದು ಕಡೆಯಾದರೆ, ಇನ್ನೊಂದು ಕಡೆ ಇದ್ದ ಮೂಲಗಳಲ್ಲಿ ನೀರನ್ನು ಸಂಗ್ರಹಣೆ ಮಾಡದೇ, ಆ ಬ್ಯಾರೇಜುಗಳನ್ನು ದುರಸ್ತಿ ಮಾಡದೇ ಆ ಭಾಗದ ಜನರಿಗೆ ಕುಡಿಯುವ ನೀರನ್ನು ಮತ್ತು ಆ ಭಾಗದ ರೈತರಿಗೆ ನೀರನ್ನು ಒದಗಿಸುವಲ್ಲಿ ಈ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಈ ಬ್ಯಾರೇಜುಗಳ ದುರಸ್ತಿಗಾಗಿ ಸರ್ಕಾರ ಶೀಘ್ರವಾಗಿ ಗಮನವನ್ನು ಕೊಡಬೇಕು ಎಂದು ನಾನು ಸರ್ಕಾರಕ್ಕೆ ತಮ್ಮ ಮುಖಾಂತರ ಒತ್ತಾಯವನ್ನು ಮಾಡುತ್ತಿದ್ದೇನೆ. ಈ ಬ್ಯಾರೇಜುಗಳ ಮಧ್ಯ ಭಾಗದಲ್ಲಿ ನಾವು ಹೆಚ್ಚಿನ ನೀರನ್ನು ಸಂಗ್ರಹಣೆ ಮಾಡುವುದರ ಮುಖಾಂತರ ರೈತರಿಗೆ ಮತ್ತು ಆ ಭಾಗದ ಗ್ರಾಮಗಳ ಜನರಿಗೆ ಕುಡಿಯುವ ನೀರನ್ನು ಕೂಡ ಒದಗಿಸಬಹುದು. ಹಾನಗಲ್ ತಾಲ್ಲೂಕಿನಲ್ಲಿ ಒಂದು ಡ್ಯಾಂಅನ್ನು ಕಟ್ಟಬೇಕು ಎಂದು ಸರ್ಕಾರ ವಿಚಾರ ಮಾಡುತ್ತಿದೆ. ಆ ವಿಚಾರವಾಗಿ ಈಗಾಗಲೇ ಮೊನ್ನೆಯ ದಿವಸ ಸನ್ಮಾನ್ಯ ಉದಾಸಿಯವರು ಮಾತನಾಡಿದ್ದಾರೆ. 74 ಸಾವಿರ ಚಿಲ್ಲರೆ ಹೆಚ್ ಪಿ ಮೋಟಾರ್‌ಗಳನ್ನು ಕೂರಿಸಿ, ಅವೈಜ್ಞಾನಿಕವಾದಂಥ ವಿಚಾರವನ್ನು ಕಟ್ಟಿ ಹೆಚ್ಚು ನೀರನ್ನು ಸಂಗ್ರಹಣೆ ಮಾಡಬಹುದು. ಆ ಬ್ಯಾರೇಜುಗಳ ಮೂಲಕ ಸಣ್ಣಸಣ್ಣ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಮಾಡಿ ಆ ಭಾಗದ ರೈತರಿಗೆ ಮತ್ತು ಆ ಭಾಗದಲ್ಲಿರುವಂಥ ಗ್ರಾಮಗಳ ಜನರಿಗೆ, ದನಕರುಗಳಿಗೆ ಕುಡಿಯುವ ನೀರನ್ನು ಒದಗಿಸಲು ಸರ್ಕಾರ ಗಮನ ಹರಿಸಬೇಕು ಎಂದು ನಾನು ತಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈ ರಾಜ್ಯದಲ್ಲಿ ಅನೇಕ ನೀರಾವರಿ ಕೆರೆಗಳಲ್ಲಿ ಸಣ್ಣ ನೀರಾವರಿ ಇಲಾಖೆಯ ಒಂದು ಕೆಟ್ಟ ಕಾಮಗಾರಿಗಳಿಂದ ನೀರನ್ನು ನಿಲ್ಲಿಸಲು ಸಾಧ್ಯವಾಗಿಲ್ಲ. ಇವತ್ತು ಅನೇಕ ಜನ ರೈತರು ಆ ಕೆರೆಗಳನ್ನು ಹೊಲಗಳನ್ನಾಗಿ ಪರಿವರ್ತನೆ ಮಾಡಿಕೊಂಡಿದ್ದಾರೆ. ಅನೇಕ ಕೆರೆಗಳು ಕ್ರೀಡಾಂಗಣಗಳಾಗಿ ಪರಿವರ್ತನೆಯಾಗಿವೆ. ಇನ್ನೂ ಕೆಲವು ಕೆರೆಗಳಲ್ಲಿ ಬಡಜನರು ಮನೆಗಳನ್ನು ಕೂಡ ಕಟ್ಟಿಕೊಂಡಿದ್ದಾರೆ. ಎಲ್ಲಾ ಕೆರೆಗಳನ್ನು ದುರಸ್ತಿ ಮಾಡಿಸಬೇಕು, ಎಲ್ಲಾ ಕೆರೆಗಳ ಸರ್ವೆ ಆಗಬೇಕು, ಆ ಕೆರೆಗಳ ಮೂಲಗಳನ್ನು, ಕಾಲುವೆಗಳನ್ನು ದುರಸ್ತಿ ಮಾಡಿಸುವುದರ ಮುಖಾಂತರ ಮಳೆಗಾಲದಲ್ಲಿ ವ್ಯರ್ಥವಾಗಿ ಹರಿದು ಹೋಗುವಂಥ ನೀರನ್ನು ಕೆರೆಗಳಿಗೆ ತುಂಬಿಸಿ, ನೀರಿನ ಬವಣೆಯನ್ನು, ನೀರಿನ ಕ್ಷಾಮವನ್ನು ಅನುಭವಿಸುತ್ತಿರುವುದಕ್ಕೆ ಶಾಶ್ವತವಾದಂಥ ಪರಿಹಾರವನ್ನು ಸರ್ಕಾರ ಕಂಡುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಇನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಕೆಲವೇ ಕೆಲವು ವಿಚಾರಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಹಿಂದೆ ಇದ್ದಂಥ ಸನ್ಮಾನ್ಯ ಎಸ್.ಎಂ.ಕೃಷ್ಣಾರವರ ಸರ್ಕಾರ 93 ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಕಟ್ಟಡವನ್ನು ಕಟ್ಟಬೇಕು ಎಂದು ರಾಜ್ಯಮಟ್ಟದಲ್ಲಿ ಒಂದು ಪ್ಯಾಕೇಜನ್ನು ಮಾಡಿ ಅನೇಕ ತಾಲ್ಲೂಕುಗಳಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳ ಕಟ್ಟಡಕ್ಕೆ ಚಾಲನೆಯನ್ನು ಕೊಟ್ಟಿತ್ತು. ಅದರಲ್ಲಿ 100ಕ್ಕೆ 75ರಷ್ಟು ಕಟ್ಟಡಗಳು ಈಗಾಗಲೇ ಸಂಪೂರ್ಣವಾಗಿ ಮುಕ್ತಾಯವಾಗಿ 6 ತಿಂಗಳಿಗೂ ಮೇಲೆ ಗತಿಸಿದೆ. ನನ್ನ ತಾಲ್ಲೂಕಿನಲ್ಲಿ 2 ಆರೋಗ್ಯ ಘಟಕಗಳಿಗೆ ಸನ್ಮಾನ್ಯ ಆರೋಗ್ಯ ಮಂತ್ರಿಗಳೇ ಸ್ವತಃ ಬಂದು ಅವುಗಳನ್ನು ಉದ್ಘಾಟನೆ ಮಾಡಿ 4 ತಿಂಗಳಾಗಿದೆ. ಆದರೆ ಇವತ್ತಿಗೂ ಕೂಡ ಆ ಆರೋಗ್ಯ ಘಟಕಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮತ್ತು ವಿದ್ಯುತ್ ಸಂಪರ್ಕ ಕೊಡದೇ ಇರುವುದು ದುರ್ದೈವ ಎಂದು ಹೇಳಬಹುದು. ಇವತ್ತು ಆ ಆರೋಗ್ಯ ಘಟಕಗಳಲ್ಲಿ ನಾಯಿ, ಹಂದಿ, ಕತ್ತೆಗಳು ಮಲಗಿಕೊಳ್ಳುತ್ತಿವೆ. ಅನೇಕ ಅವ್ಯವಹಾರಗಳು ಆ ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ನಡಿಯುತ್ತಿರುವುದನ್ನು ನೋಡಿದರೆ ನಾಚಿಕೆ ಪಟ್ಟುಕೊಳ್ಳುವಂಥ ಪ್ರಸಂಗ ಉದ್ಭವವಾಗುತ್ತಿದೆ. ಆದಷ್ಟು ಬೇಗ ಆ ಆರೋಗ್ಯ ಘಟಕಗಳಿಗೆ ನೀರು ಹಾಗೂ ವಿದ್ಯುತ್ ಸಂಪರ್ಕಕ್ಕೆ ಹಣಕಾಸಿನ ನೆರವನ್ನು ಸನ್ಮಾನ್ಯ ಆರೋಗ್ಯ ಮಂತ್ರಿಗಳು ಒದಗಿಸಬೇಕು ಎಂದು ತಮ್ಮ ಮುಖಾಂತರ ನಾನು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಅನೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇವತ್ತಿಗೂ ಕೂಡ ಡಾಕ್ಟರ್‌ಗಳಿಲ್ಲ. ನಮ್ಮ ಜಿಲ್ಲೆಯಲ್ಲಿ ಸುಮಾರು 29 ಕೇಂದ್ರಗಳಲ್ಲಿ ಡಾಕ್ಟರ್‌ಗಳಿಲ್ಲ. ಸರ್ಕಾರ ಹಿಂದಿನ ಅಧಿವೇಶನದಲ್ಲಿಯೂ ಕೂಡ ಹೇಳಿತ್ತು, ಶೀಘ್ರದಲ್ಲಿ ನಾವು ಡಾಕ್ಟರ್‌ಗಳನ್ನು ನೇಮಕ ಮಾಡಿಕೊಳ್ಳುತ್ತೇವೆ, ಜಿಲ್ಲಾದಿಕಾರಿಗಳಿಗೆ ಆ ಅಧಿಕಾರವನ್ನು ಕೊಡುತ್ತೇವೆ ಎಂದು ಹೇಳಿತ್ತು. ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದರೂ ಕೂಡ ಯಾವುದೇ ಡಾಕ್ಟರ್‌ಗಳು ಆ ಆರೋಗ್ಯ ಕೇಂದ್ರಗಳಿಗೆ ಬರಲು ತಯಾರಿಲ್ಲ. ಒಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಓದಿದಂಥ ಎಂ ಬಿ ಬಿ ಎಸ್ ಡಾಕ್ಟರ್‌ಗಳಿಗೆ ಇವತ್ತು ನೀವು ಕೇವಲ 10 ಸಾವಿರ, 13 ಸಾವಿರ ರೂಪಾಯಿಗಳ ಪಗಾರವನ್ನು ಕೊಟ್ಟರೆ ಯಾರೂ ಕೂಡ ಬರಲು ಸಾಧ್ಯವಾಗುವುದಿಲ್ಲ. ಬೇರೆಬೇರೆ ರಾಜ್ಯಗಳಲ್ಲಿ, ಅದು ತಮಿಳುನಾಡು ಇರಬಹುದು, ಮಹಾರಾಷ್ಟ್ರ ಇರಬಹುದು, ಕೇರಳ ಇರಬಹುದು, ಈ ಎಲ್ಲಾ ರಾಜ್ಯಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೆಲಸ ಮಾಡುವಂಥ ಡಾಕ್ಟರುಗಳಿಗೆ 17 ಸಾವಿರ ರೂಪಾಯಿ, 20 ಸಾವಿರ ರೂಪಾಯಿ, 23 ಸಾವಿರ ರೂಪಾಯಿಗಳ ಪಗಾರವನ್ನು ಕೊಡುತ್ತಿದ್ದಾರೆ. ಆದರೆ ನಮ್ಮ ಸರ್ಕಾರ ಕೇವಲ 10 ಸಾವಿರ, 13 ಸಾವಿರ ರೂಪಾಯಿಗಳನ್ನು ಕೊಡುತ್ತಿರುವುದರಿಂದ ಯಾವ ವೈದ್ಯರೂ ಕೂಡ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೆಲಸ ಮಾಡಲು ಮುಂದೆ ಬರುತ್ತಿಲ್ಲ. ಅದಕ್ಕಾಗಿ, ನಾನು ತಮ್ಮ ಮುಖಾಂತರ ಸನ್ಮಾನ್ಯ ಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ, ಡಾಕ್ಟರುಗಳ ಪಗಾರವನ್ನು ಹೆಚ್ಚಿಗೆ ಮಾಡಿ, 17 ಸಾವಿ ರೂಪಾಯಿಗಳೋ, 19 ಸಾವಿರ ರೂಪಾಯಿಗಳನ್ನೋ ಮಾಡಿ, ಆದಷ್ಟು ಶೀಘ್ರದಲ್ಲಿ ವೈದ್ಯರನ್ನು ನೇಮಕ ಮಾಡಿ ಗ್ರಾಮೀಣ ಪ್ರದೇಶದಲ್ಲಿರುವ ವೈದ್ಯರ ಕೊರತೆಯನ್ನು ನೀಗಿಸಬೇಕೆಂದು ತಮ್ಮ ಮುಖಾಂತರ ಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಂಡು, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್): ಸನ್ಮಾನ್ಯ ಅಧ್ಯಕ್ಷರೇ 2005–06ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆಗೆ ಅವಕಾಶವನ್ನು ನೀಡಿದ್ದಕ್ಕೆ ಮೊದಲಿಗೆ ಧನ್ಯವಾದಗಾಳನ್ನು ಹೇಳುತ್ತೇನೆ. ಪ್ರಮುಖವಾಗಿ ಈ ದಿನ ಕಂದಾಯ ಇಲಾಖೆಯ ಬಗ್ಗೆ ಸನ್ಮಾನ್ಯ ಕಂದಾಯ ಮಂತ್ರಿಗಳ ಗಮನವನ್ನು ಸೆಳೆಯಲು ಇಚ್ಚೆಪಡುತ್ತೇನೆ. ಸನ್ಮಾನ್ಯ ಕಂದಾಯ ಸಚಿವರು ಬಹಳ ಉತ್ತಮ ಸಂಸದೀಯ ಪಟುಗಳು. ಅವರ ಮೇಲೆ ನನಗೆ ಅಪಾರವಾದ ಗೌರವವಿದೆ. ಅವರು ಕಂದಾಯ ಸಚಿವರಾದ ಮೇಲೆ, ಕಂದಾಯ ಇಲಾಖೆಯಲ್ಲಿ ಅನೇಕ ಸಾಮಾಜಿಕ ಕಂದಾಯ ಪರಿವರ್ತನೆಯನ್ನು, ರೈತರಿಗೆ ಸಹಾಯವಾಗುವಂತೆ ವಿಚಾರಗಳನ್ನು ಬದಲಾವಣೆ ಮಾಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಹಿಂದಿನ ಸರ್ಕಾರದ ಸನ್ಮಾನ್ಯ ಎಸ್.ಎಂ.ಕೃಷ್ಣಾರವರು ಭೂಮಿಯ ಯೋಜನೆಯನ್ನು ಇಡೀ ರಾಜ್ಯದಲ್ಲಿ ಜಾರಿಗೆ ತಂದರು. ಭೂಮಿ ಯೋಜನೆ ಜಾರಿಗೆ ಬಂದ ಮೇಲೆ, ಭೂತಾಯಿಯನ್ನು ನಂಬಿದಂಥ ಮಕ್ಕಳಿಗೆ, ಗಣಕ ಯಂತ್ರದ ಮೂಲಕ ಭಾರೀ ಬದಲಾವಣೆ ಯಾಗಿಬಿಡುತ್ತದೆ, ನನ್ನ ಎಲ್ಲಾ ದಾಖಲೆಗಳು ನನ್ನ ಮನೆಗೇ ತಲುಪುತ್ತವೆ ಎಂದು ರೈತ ಬಹಳ ಸಂತೋಷ ಪಟ್ಟಿದ್ದ. ಕಂದಾಯ ಇಲಾಖೆಯಲ್ಲಿ ಭೂಮಿಯ ಯೋಜನೆ ಜಾರಿಗೆ ಬಂದ ಮೇಲೆ, ಕಂಪ್ಯೂಟರ್‌ಗೆ ರೈತರ ಹೆಸರುಗಳನ್ನು ಸೇರಿಸಿದ ಮೇಲೆ ಪಹಣಿಗಳು ರೈತರ ಮನೆಗಳನ್ನು ತಲುಪಿತು. ಅದನ್ನು ನೋಡಿ ಅನೇಕ ರೈತರು, ನೂರಕ್ಕೆ ಶೇಕಡ 30–40 ರಷ್ಟು ರೈತರು ಗಾಬರಿಗೊಳಗಾದರು. ಏಕೆಂದರೆ, ರಾಮಪ್ಪ ಎಂದಿರುವ ಕಡೆ ತಿಮ್ಮಪ್ಪ ಎಂದು, ತಿಮ್ಮಪ್ಪ ಎಂದಿರುವ ಕಡೆ ತಿಮ್ಮರಾಯಪ್ಪ ಎಂದು ಇತ್ತು. ಈ ಬಗ್ಗೆ ಅನೇಕ ರೈತರಿಗೆ ಗಾಬರಿಯಾಯಿತು. ಈ ಬಗ್ಗೆ ವಿಭಾಗಾಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ, ಸರ್ಕಾರಕ್ಕೆ ಅನೇಕ ಬಾರಿ ಅರ್ಜಿಗಳನ್ನು ಕೊಟ್ಟರು. ತಹಶೀಲ್ದಾರ್‌ರವರು ರೈತರಿಗೆ ಒಂದು ಮಾತನ್ನು ಹೇಳಿದರು. ಅದು ಕಂಪ್ಯೂಟರ್‌ನಲ್ಲಿ ಬಂದು ಬಿಟ್ಟಿದೆ, ಅದು ಮತ್ತೆ ತಿದ್ದುಪಡಿಯಾಗಬೇಕು, ಮತ್ತೆ ಸೆಕ್ರೆಟರಿ ಬರಬೇಕು, ಮತ್ತೆ ರೆವಿನ್ಯೂ ಇನ್ಸ್‌ಪೆಕ್ಟರ್ ಬರಬೇಕು, ಮತ್ತೆ ಶಿರಸ್ತೇದಾರ್ ಬರಬೇಕು ಮತ್ತೆ ತಹಶೀಲ್ದಾರರ ಸೈನ್ ಆಗಬೇಕು, ಹೆಬ್ಬೆಟ್ಟು ಒತ್ತಬೇಕು, ಹೆಬ್ಬೆಟ್ಟು ಒತ್ತದಿದ್ದರೆ ನಿನ್ನ ಹೆಸರು ಬದಲಾವಣೆಯಾಗುವುದಿಲ್ಲ. ಅದನ್ನು ಪರಭಾರೆ ಮಾಡಲು ಆಗುವುದಿಲ್ಲ. ನಿನ್ನ ಪಹಣಿ ಬಗ್ಗೆ ಕಂಪ್ಯೂಟರ್‌ನಲ್ಲಿ ಏನಿದೆ, ಏನು ಫೀಡ್ ಮಾಡಿದ್ದೇವೆ, ಅದನ್ನು ಬದಲಾವಣೆ ಮಾಡುವುದಕ್ಕೆ ಆಗುವುದೇ ಇಲ್ಲ ಎಂದು ಒಂದು ಆದೇಶವನ್ನು ನೀಡಿದರು.

ರೈತ ಒಂದು ತಿಂಗಳು, ಆರು ತಿಂಗಳು, ವರ್ಷ ಇಡೀ ರಾಜ್ಯದಲ್ಲಿ ಅನೇಕ ತಹಶೀಲ್ದಾರ್ ಕಚೇರಿಗಳಲ್ಲಿ ಅಲೆಯಬೇಕಾದ ಈ ಒಂದು ಅವ್ಯವಸ್ಥೆಯನ್ನು ನೋಡುತ್ತಿದ್ದೇವೆ. ಈ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳಲ್ಲಿ ಕೇಳುತ್ತೇನೆ, ತಿದ್ದುಪಡಿ ಅವಶ್ಯಕತೆಯನ್ನು ಯಾರು ಮಾಡಿಸಿಕೊಡಬೇಕು? ರೈತ ಅರ್ಜಿಯನ್ನು ಯಾರಿಗೆ ಕೊಡಬೇಕು. ಯಾವ ಕಂದಾಯ ಅಧಿಕಾರಿ ತಪ್ಪು ಮಾಡಿದ್ದಾನೆ ಆ ಅಧಿಕಾರಿ suo-moto ದಲ್ಲಿ ಅವರೇ ಸ್ವತಃ ಅರ್ಜಿಯನ್ನು ಯಾವುದು ಬದಲಾವಣೆಗಳು ಆಗಿವೆ ತಪ್ಪು ತಿದ್ದುಪಡಿಗಳು ಆಗಿವೆ, ತಹಶೀಲ್ದಾರ್ himself ಅವರೇ ಅದಕ್ಕೆ suo-moto ತೆಗೆದುಕೊಂಡು ಬದಲಾವಣೆ ಮಾಡಿ ರೈತರ ಮನೆಗೆ ತಲುಪಿಸುವ ಜವಾಬ್ದಾರಿ ಈ ಸರ್ಕಾರದ ಮೇಲಿದೆ ಎಂದು ನಾನು ಅಂದುಕೊಂಡಿದೇನೆ. ಈ ಒಂದು ಜವಾಬ್ದಾರಿಯನ್ನು ಕಂದಾಯ ಇಲಾಖೆಯ ಮಂತ್ರಿಗಳು ಬಹಳ ಸೂಕ್ಷ್ಮವಾಗಿ ನೋಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಅದರ ಜೊತೆಗೆ ಇಡೀ ಗ್ರಾಮೀಣ ಪ್ರದೇಶದ ರೈತರುಗಳ ಜಮೀನಿಗೆ ಸಂಬಂದಿಸಿದಂತೆ 20–30

ನಂಬರ್‌ಗಳು ಇರುತ್ತವೆ. 20 ನಂಬರ್ ಇದ್ದರೆ 300 ರೂಪಾಯಿಗಳನ್ನು ಆ ನಂಬರ್‌ಗೆ ಕೊಡಬೇಕು. ಒಂದು ಗುಂಟೆ ಇರಲಿ, ಅರ್ಧ ಗುಂಟೆ ಇರಲಿ, ಮುಕ್ಕಾಲು ಗುಂಟೆ ಇರಲಿ, ಪ್ರತಿ ಗುಂಟೆ ಗುಂಟೆಗೂ 15 ರೂಪಾಯಿಗಳನ್ನು ರೈತ ಕೊಡುವುದಕ್ಕಾಗುವುದಿಲ್ಲ. ಒಂದು ಎಕರೆಗೆ ಎರಡು ಸಾವಿರ ರೂಪಾಯಿ, ಮೂರು ಸಾವಿರ ರೂಪಾಯಿಗಳನ್ನೇ ಸಂಪಾದನೆ ಮಾಡುವುದು ರೈತನಿಗೆ ಕಷ್ಟವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಒಂದು ಪಹಣಿಯನ್ನು ಪ್ರತಿ ವರ್ಷ ತೆಗೆದುಕೊಳ್ಳಬೇಕು, ಅದು ತನ್ನ ಹೆಸರಿನಲ್ಲಿ ಆ ದಾಖಲೆ ಇದೆಯೋ ಇಲ್ಲವೋ ಎಂದು ನೋಡಿಕೊಳ್ಳಬೇಕಾದರೆ ಪ್ರತೀ ಒಂದು ಗುಂಟೆಗೆ 15 ರೂಪಾಯಿ ಕೊಡಬೇಕೆಂದಾದರೆ ವರ್ಷಕ್ಕೆ 300–400 ರೂಪಾಯಿಗಳನ್ನು ರೈತನಿಂದ ವರ್ಷಕ್ಕೆ ಕೊಡುವುದಕ್ಕೆ ಆಗುವುದಿಲ್ಲ. ಇದನ್ನು ಕಡಿಮೆ ಮಾಡಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ. ಮೊನ್ನೆ ಒಂದು ಹಗರಣವಾಯಿತು. ಇತ್ತೀಚೆಗೆ 'ಭೂಮಿ ಯೋಜನೆ' ಎನ್ನುವ ಯೋಜನೆಯಲ್ಲಿ ಖಾಸಗಿಯವರಿಗೆ ಕಂಪ್ಯೂಟರುಗಳನ್ನು ಕೊಟ್ಟಿದ್ದಾರೆ. ಪ್ರತಿ ಹೋಬಳಿಗೆ ಕೊಡಬೇಕು, ಹೋಬಳಿಯಲ್ಲಿ ನಾಡ ಕಚೇರಿ ಇದೆ. Revenue Inspector ಕಚೇರಿ ಇದೆ. ನಾಡ ಕಚೇರಿಯಲ್ಲಿ ತಹಶೀಲ್ದಾರ್ ಇದ್ದಾರೆ. ಆದರೆ ಖಾಸಗಿಯವರಿಗೆ ಏಕೆ ಕಂಪ್ಯೂಟರ್ ಮುಖಾಂತರ ಪಹಣಿ ಕೊಡಬೇಕೆಂದು ಕೊಟ್ಟಿದ್ದೀರಿ? ಇದ್ದಕ್ಕಿದ್ದ ಹಾಗೆ 15 ದಿವಸಗಳಲ್ಲಿ CCB ಯವರು ಬೆಂಗಳೂರಿನಿಂದ ಪೊಲೀಸರು ತಾಲ್ಲೂಕು ಕಚೇರಿಗೆ ಧಾಳಿ ಮಾಡಿದರು. ಪೊಲೀಸು ಇಲಾಖೆಯವರು ತಾಲ್ಲೂಕು ಕಚೇರಿಗೆ ಏಕೆ ಬಂದಿದ್ದರು ಎಂದರೆ, ಡೂಪ್ಲಿಕೇಟ್ ಪಹಣಿ, ಡೂಪ್ಲಿಕೇಟ್ ಖಾತೆಗಳು ಒಂದು ಸಾವಿರ ರೂಪಾಯಿಗಳಿಗೆ, ಎರಡು ಸಾವಿರ ರೂಪಾಯಿಗಳಿಗೆ, ಐದು ಸಾವಿರ ರೂಪಾಯಿಗಳಿಗೆ ಚಲಾವಣೆ ಆಗುತ್ತಿದೆ, ಪಹಣಿ ಹೆಸರನ್ನು ಬದಲಾವಣೆ ಮಾಡುತ್ತಿದ್ದಾರೆ, ಖಾತೆ ಹೆಸರು ಬದಲಾವಣೆ ಮಾಡುತ್ತಿದ್ದಾರೆ. ಯಾರು 79(A)(B) ತಪ್ಪಿಸಿಕೊಳ್ಳುವುದಕ್ಕೋಸ್ಕರ ಅನೇಕ ಹೊರ ದೇಶಗಳಿಂದ ಬಂದಿರತಕ್ಕಂಥವರು ಇರಬಹುದು, ಹೊರ ರಾಜ್ಯಗಳಿಂದ ಬಂದಿರತಕ್ಕಂಥವರು ಯಾರು ರೈತರು ಅಲ್ಲ, ಆ ರೈತರಲ್ಲದವನು ಭೂಮಿ ಪಡೆಯುವುದಕ್ಕೆ ಈ ಒಂದು ದಾರಿಯನ್ನು ಹಿಡಿದುಕೊಂಡು ಐದು ಸಾವಿರ ರೂಪಾಯಿಗಳು, ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟು ಪಹಣಿಗಳನ್ನು ತೆಗೆದುಕೊಂಡು ನೋಂದಾವಣೆ ಮಾಡಿಕೊಂಡಿದ್ದಾರೆ. ನೋಂದಾವಣೆ ಮಾಡಿಕೊಳ್ಳಲಿ. ನೋಂದಾವಣೆ ಆದಮೇಲೆ ಏನಾಯಿತು? ಆ duplicate ಪಹಣಿ, ಖಾತೆ From No. 12 ಆ ಕಾಲಂನಲ್ಲಿ ಏನು ಹೆಸರು ಬಂದಿದೆ, ಅಥವಾ ಖಾತೆ ಕಾಲಂನಲ್ಲಿ ಏನು ಹೆಸರು ಬಂದಿದೆ ಅದನ್ನು ಉಪಯೋಗಿಸಿಕೊಂಡು ಕೋರ್ಟಿಗೆ ಹೋಗಿದ್ದಾರೆ. ನ್ಯಾಯಾಲಯದಿಂದ Stay ತಂದಿದ್ದಾರೆ. ಇದೆಲ್ಲಾ ಗೊತ್ತಿಲ್ಲದ ರೈತ ಏನಾಗಬೇಕು? ಆ ಒಂದು ವಿಚಾರದಲ್ಲಿ ಆನೇಕಲ್ ತಾಲ್ಲೂಕಿನ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಅರೆಸ್ಟ್ ಆಗಿದ್ದರು. ಎರಡೇ ದಿವಸದಲ್ಲಿ ಅವರಿಗೆ bail ಆಯಿತು. ಅದು ಸರ್ಕಾರದ ಜಿಲ್ಲಾಧಿಕಾರಿಗಳಿಗೆ, ಇಡೀ ಸರ್ಕಾರಕ್ಕೆ ಗೊತ್ತಾಗಿದೆ. ಅದನ್ನು ತನಿಖೆ ಮಾಡಬೇಕು. ಖಾಸಗಿ ವ್ಯಕ್ತಿಗಳಿಗೆ ಈ ಪಹಣಿ ಕೊಡಬೇಕೋ ಬೇಡವೋ ಈ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು, ವಿಚಾರ ಮಾಡಬೇಕಾಗಿತ್ತು. ಇದುವರೆಗೆ ಮಾನ್ಯ ಕಂದಾಯ ಮಂತ್ರಿಗಳು, ಕಂದಾಯ ಇಲಾಖೆಯವರು ವಿಚಾರ ಮಾಡಲಿಲ್ಲ. ಬಹುಶಃ ಇಂಥ ತೊಂದರೆಗಳಿಂದ ಅನೇಕ ರೈತರಿಗೆ ಅನಾನುಕೂಲವಾಗಿ ನ್ಯಾಯಾಲಯಗಳಿಗೆ ಹೋಗುತ್ತಾರೆ. ಅಲ್ಲಿಂದ Stay ತಂದ ಮೇಲೆ 10 ವರ್ಷ 20 ವರ್ಷ 30 ವರ್ಷ ಸುಪ್ರೀಂ ಕೋರ್ಟ್, ಇನ್ನಿತರ ನ್ಯಾಯಾಲಯಗಳಲ್ಲಿ ಬೇಗ

ತೀರ್ಮಾನವಾಗುವುದಿಲ್ಲ. ಯಾರೋ ಮಾಡಿದ ತಪ್ಪಿಗೆ ಆ ರೈತ ಕಂಗಾಲಾಗಬೇಕು. ಆ ರೈತನ ಇಡೀ ಕುಟುಂಬ ನೋವು ತಿನ್ನಬೇಕಾಗುತ್ತದೆ. ಈ ವಿಚಾರದಲ್ಲಿ ನಮ್ಮ ಮಾನ್ಯ ಕಂದಾಯ ಮಂತ್ರಿಗಳು ತಕ್ಷಣ ಖಾಸಗಿಯವರಿಗೆ ಪಹಣಿ ಕೊಡುವುದಕ್ಕೆ ಕೊಡಬೇಕೋ ಬೇಡವೋ? ಕೊಟ್ಟರೆ ಯಾವ್ಯಾವ ನಿರ್ಬಂಧಗಳು ಇರಬೇಕು? ನಾಡ ಕಚೇರಿ, Revenue Inspector ಕಚೇರಿ, ತಹಸೀಲ್ದಾರ್ ಕಚೇರಿ ಇರುವಾಗ, ಆ ಕಚೇರಿಗಳಲ್ಲೆ ಸರ್ಕಾರದ ನಿಯಂತ್ರಣಕ್ಕೆ ತೆಗೆದುಕೊಳ್ಳಬೇಕಾದರೆ ಯಾವ ರೀತಿ ಈ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕೆಂದು ಕಂದಾಯ ಇಲಾಖೆಯವರು ತೀರ್ಮಾನ ಮಾಡುತ್ತಾರೆಂದು ಅಂದುಕೊಂಡಿದ್ದೇನೆ. ಇದಾದಮೇಲೆ ಎರಡು ತಿಂಗಳಲ್ಲಿ ಮೇ 30ರಂದು ಯಾವುದೇ Sub-registrar ಕಚೇರಿಗಳಲ್ಲಿ ನೋಂದಾವಣೆ ಆಗಬಾರದು, conversion ನಿಲ್ಲಿಸಿಬಿಟ್ಟಿದ್ದೇವೆ ಎಂದು ಒಂದು ಆದೇಶ ಬಂತು. ಇದರಿಂದ ಅನೇಕರಿಗೆ ಗಾಬರಿ ಉಂಟಾಯಿತು. ಅವನ ಮನೆಯಲ್ಲಿ ಏನೋ ಕಷ್ಟ ಇರುತ್ತದೆ, ಮದುವೆ ಮಾಡಬೇಕೋ, ತಿಥಿ ಮಾಡಬೇಕೋ, ಮತ್ತೊಂದು ಮಾಡಬೇಕೋ, ಸೈಟು ತೆಗೆದುಕೊಳ್ಳಬೇಕೋ, ಮನೆ ಕಟ್ಟಬೇಕೋ, ಹೀಗೆ ಅನೇಕ ವಿಚಾರಗಳಿಗೆ ಆ ಭೂಮಿಯನ್ನು ಪರಭಾರೆ ಮಾಡಿರುತ್ತಾನೆ. ದಾಖಲೆಗಳನ್ನು ಎತ್ತಿಕೊಂಡು ನೋಂದಣಿ ಕಚೇರಿಗೆ ಹೋಗಿದ್ದಾನೆ. ನಿನ್ನದು register ಮಾಡುವುದಿಲ್ಲಪ್ಪ ಎಂದು ಹೇಳುತ್ತಾರೆ. ಅರೆ! ನನ್ನ ಭೂಮಿ, ನನ್ನ ಸ್ವಯಾರ್ಜಿತ ಭೂಮಿ, ನನ್ನ ತಾತ, ನನ್ನ ತಂದೆತಾಯಿ ಸಂಪಾದನೆ ಮಾಡಿ ಗಳಿಸಿದ ಭೂಮಿ, ನಾನು purchase ಮಾಡಿರುವ ಭೂಮಿ, ನಾನು register ಮಾಡಿಸಬೇಕೆಂದು ಹೋದರೆ, ಅಲ್ಲಿ ಅವರು ಮಾಡುವುದಿಲ್ಲ. ಅನೇಕರು, 100ಕ್ಕೆ 90 ಪರ್ಸೆಂಟ್ ಯಾರು ರೈತ ತನ್ನ ಸ್ವಂತ ಕುಟುಂಬದ ಸಂಕಷ್ಟಗಳಿಗೆ ಮಾರಾಟ ಮಾಡಿದ್ದಾನೆ, ಆ ವ್ಯಕ್ತಿ ಮಾರಾಟ ಮಾಡಬೇಕಾದರೆ Sub-register ಆಫೀಸ್‌ನಲ್ಲಿ ರಿಜಿಸ್ಟರ್ ಮಾಡುವುದನ್ನು ಇಡೀ ರಾಜ್ಯದಲ್ಲಿ ನಿಲ್ಲಿಸಿದ್ದಾರೆ. ಕಂದಾಯ ಇಲಾಖೆ ಅಥವಾ ಸರ್ಕಾರ ಯಾವುದೇ ಆದೇಶ ಮಾಡುವಾಗ ಆಗುಹೋಗುಗಳ ಬಗ್ಗೆ ವಿಚಾರ ಮಾಡಬೇಕು. ನನ್ನ ಆದೇಶ ಯಾವ ರೀತಿ ಇರಬೇಕು? ಗ್ರಾಮಠಾಣ ಆಸ್ತಿಗಳು ನೋಂದಾವಣೆ ಆಗಬೇಕೋ ಬೇಡವೋ, ಪುರಸಭೆಯ ಹಳೇ plan ಗಳಲ್ಲಿ 30–40 ವರ್ಷಗಳ ಹಿಂದೆ ಯಾವುದೇ BMRDA ಇರಲಿಲ್ಲ, BDA ಇರಲಿಲ್ಲ, conversion ಇರಲಿಲ್ಲ. ಆದರೆ ಯಾವ ಗ್ರಾಮದ ವ್ಯಕ್ತಿ ಆಸ್ತಿಯನ್ನು ಪಡಿದಿದ್ದಾನೆ ಅವನು ಇವತ್ತು ಪುರಸಭೆಯ approval ಇಲ್ಲ, ಪ್ಲಾನ್ ಇಲ್ಲ, BDA ಇಲ್ಲ ಎಂದು ನೋಂದಾವಣೆ ಮಾಡುವುದಕ್ಕೆ ಹೋದರೆ ಯಾವುದೂ ನೋಂದಾವಣೆ ಆಗುತ್ತಿಲ್ಲ. ಗ್ರಾಮಠಾಣಾಗಳನ್ನು ನೋಂದಾವಣೆ ಮಾಡಬೇಕೇ ಬೇಡವೇ? ಪುರಸಭೆಯಲ್ಲಿ ಹಳೆಯ ಬಡಾವಣೆಗಳನ್ನು ನೋಂದಾವಣೆ ಮಾಡುವುದಕ್ಕೆ ಅವಕಾಶ ಕೊಡಬೇಕೇ ಬೇಡವೇ? Corporation ಗಳು, ಮಾನ್ಯ ಕಂದಾಯ ಮಂತ್ರಿಗಳಾದ ತಮಗೆ ಗೊತ್ತಿದೆ. ಅನೇಕ ಬಡಾವಣೆಗಳು Corporation limits ನಲ್ಲಿ ಇರುವಂಥವು ಎಂದು ಖಾತೆಯಲ್ಲಿ declare ಮಾಡಿಕೊಂಡವು. Corporation ಸ್ವತಃ declare ಮಾಡಿತು. ಇದು Corporation ಭೂಮಿ ಎಂದು declare ಮಾಡುತ್ತೇವೆ, ಇದರ ಎಲ್ಲಾ ಅಭಿವೃದ್ಧಿಗಳನ್ನು ನಾವು ಮಾಡುತ್ತೇವೆಂದು ಬೆಂಗಳೂರು ಮಹಾನಗರ ಪಾಲಿಕೆ ತೀರ್ಮಾನ ಮಾಡಿತು. ಆದರೆ ಆ declare ಮಾಡಿದ ಮೇಲೆ declaration ಪತ್ರದ ಮೇಲೆ registration ಮಾಡುವುದಕ್ಕೆ ಅವಕಾಡ ಮಾಡಿಕೊಡಬೇಕಲ್ಲವೇ? ಈ ಎಲ್ಲಾ ವಿಚಾರಗಳನ್ನು ಒಬ್ಬ ಐಎಎಸ್ ಅಧಿಕಾರಿ ಯಾವುದೇ ಆದೇಶ ಮಾಡುವಾಗ ಎಲ್ಲಾ ವಿಮರ್ಶೆ ಮಾಡಬೇಕಾಗಿರುತ್ತದೆ. ಏಕಾಏಕಿ registration ಮಾಡುವುದನ್ನು

ನಿಲ್ಲಿಸಿರುವುದರಿಂದ ರಾಜ್ಯಸರ್ಕಾರಕ್ಕೆ ಎಷ್ಟು ಆರ್ಥಿಕ ನಷ್ಟವಾಯಿತು ಎನ್ನುವುದನ್ನು ರಾಜ್ಯ ಸರ್ಕಾರ ಯೋಚನೆ ಮಾಡಬೇಕು. ಆರ್ಥಿಕ ಇಲಾಖೆ ಯೋಚನೆ ಮಾಡಬೇಕು. ಯಾವುದೇ ಒಬ್ಬ ಐಎಎಸ್ ಅಧಿಕಾರಿ ಯೋಚನೆ ಮಾಡಬೇಕಾಗಿತ್ತು. ಇದರ ಬಗ್ಗೆ ಇದುವರೆವಿಗೂ ಯಾವುದೇ ಆದೇಶವನ್ನು ಹೊರಡಿಸಿಲ್ಲ. ಇದು ಸರ್ಕಾರದ ಗಮನಕ್ಕೆ ಬಂತು. ಅನೇಕ ಬಾರಿ ಚರ್ಚೆಯಾಯಿತು. ಇದು Secretariat ನಲ್ಲಿ ಚರ್ಚೆ ಆಯಿತು. ಮಂತ್ರಿಗಳ ಮುಂದೆ ಚರ್ಚೆಯಾಯಿತು. ಈ ಬಗ್ಗೆ ಒಂದು ತೀರ್ಮಾನ ಮಾಡಬೇಕಲ್ಲವೇ? ಒಂದು ಕಡೆ ಸರ್ಕಾರಕ್ಕೆ ನಷ್ಟ ಇನ್ನೊಂದು ಕಡೆ ಸಾರ್ವಜನಿಕರಿಗೆ ತೊಂದರೆ. ನಾವು ಸರ್ಕಾರದ ಆರ್ಥಿಕ ವಿಚಾರಕ್ಕಿಂತ ಸಾಮಾಜಿಕ ವಿಚಾರಗಳನ್ನು ಯೋಚನೆ ಮಾಡಬೇಕಾಗುತ್ತದೆ. ನಾಗರೀಕರಿಗೆ ಯಾವ ರೀತಿಯಾಗಿ ತೊಂದರೆಯಾಗುತ್ತಿದೆ ಎನ್ನುವುದನ್ನು ಗಮನಿಸಿ ಆ ತೊಂದರೆಯನ್ನು ಪರಿಹಾರ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ನಮಗೆ ಹಣ ಬರುತ್ತದೋ ಹೋಗುತ್ತದೋ ಎನ್ನುವುದನ್ನು ಮೊದಲು ಚಿಂತನೆ ಮಾಡುವುದಲ್ಲ. ಸಮಾಜದಲ್ಲಿ ಯಾವ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ಅದಕ್ಕೆ ಪರಿಹಾರವನ್ನು ಹುಡುಕುವಂಥ ಜವಾಬ್ದಾರಿಯನ್ನು ಸರ್ಕಾರ ನಿರ್ವಹಿಸಿದೆಯೇ? ಇದುವರೆವಿಗೂ ಮಾಡಲಿಲ್ಲ.

ಶ್ರೀ ಆರ್. ಅಶೋಕ್ (ಉತ್ತರ ಹಳ್ಳಿ) : ಮಾನ್ಯ ಅಧ್ಯಕ್ಷರೆ, ಈ registration ನಿಲ್ಲಿಸುವ ಒಂದು ಆದೇಶ ಬಂದಮೇಲೆ ನಿಜವಾಗಿಯೂ ಗ್ರಾಮೀಣ ಪ್ರದೇಶದಲ್ಲಿ ಸುಮಾರು 100 ವರ್ಷಗಳಿಂದ ಇದ್ದಂಥ ಹಳ್ಳಿಗಳಲ್ಲಿ ಸಹ ಇವತ್ತು registration ಮಾಡುವುದನ್ನು ನಿಲ್ಲಿಸಿದ್ದಾರೆ. ಅದೆಲ್ಲಾ ಗ್ರಾಮಾಠಾಣಾ ಅದನ್ನೆಲ್ಲಾ ನಾವು ಮಾಡುವುದಕ್ಕೆ ಬರುವುದಿಲ್ಲವೆಂದು ಒಂದು ಆದೇಶವನ್ನು ಅಧಿಕಾರಿಗಳು ಹೊರಡಿಸಿಬಿಟ್ಟರು. ಈ ಆದೇಶದಿಂದ ಜನಗಳಿಗೆ ಏನೇನು ಒಳ್ಳೆಯದಾಗುತ್ತದೆ, ಏನೇನು ಕೆಟ್ಟದಾಗುತ್ತದೆ ಎಂದು ಅಧಿಕಾರಿಗಳಿಗೆ ಯೋಚನೆ ಮಾಡುವಂಥ ಶಕ್ತಿ ಇರಬೇಕಾಗಿತ್ತು. ಈ ಆದೇಶ ಹೊರಡಿಸಿರುವುರಿಂದ, ನೀವು BMRDA ಯಿಂದ approval ತೆಗೆದುಕೊಂಡು ಬನ್ನಿ, BDA approval ತನ್ನಿ, Town Planning approval ತನ್ನಿ ಎಂದು ಹೇಳಿದ್ದಾರೆ. ಈಗ 50 ವರ್ಷದ ಹಿಂದೆ ಅಥವಾ ನಮಗೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆಯೇ ಮನೆಯನ್ನು ಕಟ್ಟಿದ್ದಾರೆಂದು ಇಟ್ಟುಕೊಳ್ಳೋಣ. ನೀವು ಯಾವುದಾದರೂ Town Planning Authority ಯಿಂದ ಹಿಂದೆ ಯಾವುದು ಇತ್ತು ಅದರಿಂದ approval ತರಬೇಕೆಂದು ಇತ್ತೀಚೆಗೆ ಅವರಿಗೆ ಆದೇಶ ಕೊಟ್ಟಿದ್ದಾರೆ. ಅಂದರೆ ನಾವು ಎಲ್ಲಿ ಹೋಗಬೇಕು? ಬ್ರಿಟಿಷರ ವೈಸ್‌ರಾಯ್‌ರವರನ್ನು ಹುಡುಕಿಕೊಂಡು ಹೋಗಬೇಕು! ಏನಪ್ಪಾ ನಮಗೆ approval ಸಿಗುತ್ತಿಲ್ಲ, ನೀವು ದೇಶ ಬಿಟ್ಟು ಓಡಿಹೋದ್ರಿ, ಈಗ ನಮಗೆ ಈ ಜಾಗವನ್ನು register ಮಾಡಿಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ ಎಂದು ಹೇಳಬೇಕೇ? ಎಲ್ಲಿಂದ ಅಪ್ರೂವಲ್ ತರಬೇಕೆನ್ನುವುದನ್ನು ಅಧಿಕಾರಿಗಳು ಯೋಚನೆ ಮಾಡಬಹುದಾಗಿತ್ತಲ್ಲವೇ? ಅಧಿಕಾರಿಗಳು ಗ್ರಾಮಠಾಣಾ registration ಅನ್ನು ನೀವು ಯಾವುದೋ revenue site ಗಳಿಗೆ ನಿಲ್ಲಿಸಿದ್ದೀರೆಂದರೆ ಅದನ್ನು ರೆವಿನ್ಯೂ ಸೈಟುಗಳಿಗೋಸ್ಕರ ಎಂದು ಬರೆಯಬೇಕಾಗಿತ್ತು. ಹಿಂದೆ ಗ್ರಾಮಠಾಣಾಗಳಿತ್ತು, ಹಳೆಯ ಹಳ್ಳಿಗಳು ಇದ್ದವು, ವಿಲೇಜ್‌ಗಳು ಇದ್ದವು, ಜೋಡಿ ಗ್ರಾಮಗಳು ಇದ್ದವು. ಇವತ್ತು ಅವರು ಅವರ ಮನೆ ಮಾರುವುದಕ್ಕೂ ಆಗುವುದಿಲ್ಲ. ಅಕಸ್ಮಾತ್ ಮನೆಯಲ್ಲಿ

ಏನೋ ಕಷ್ಟ ಇದೆ, ಮನೆ ಕಟ್ಟಿಸಿಕೊಳ್ಳೋಣವೆಂದು ಬ್ಯಾಂಕ್‌ನಿಂದಲೋನ್ ತೆಗೆದುಕೊಳ್ಳೋಣವೆಂದರೆ ಆಗುವುದಿಲ್ಲ. Loan ಗೂ ಕೊಡಬಾರದೆನ್ನುವ ಒಂದು ಆದೇಶ ಸಹ ಆಗಿದೆ. ಇದರಿಂದ ನಿಜವಾಗಿ ಯಾರು ಪ್ರಾಮಾಣಿಕವಾಗಿ 50–60 ವರ್ಷಗಳಿಂದ ವಾಸ ಮಾಡುತ್ತಿದ್ದಾರೆ ಅವರಿಗೂ ಇವತ್ತು ತೊಂದರೆಯಾಗಿದೆ. ಇದರಿಂದ ಏನು ತಪ್ಪಾಗಿದೆ ಎಂದು ಆದೇಶ ಮಾಡುವುದಕ್ಕೆ ಮುಂಚೆ ಇದನ್ನು ಅಧಿಕಾರಿಗಳು ಯೋಚನೆ ಮಾಡಬೇಕಾಗಿತ್ತು. ಕಳೆದ ನಾಲ್ಕೈದು ತಿಂಗಳಿಂದ registration ಮಾಡುವುದನ್ನು ತಡೆ ಮಾಡಿದ್ದೀರಿ. ಈ ತಡೆಯನ್ನು ಕೂಡಲೇ ತೆಗೆದರೆ ಆ ಜನರಿಗೆ ಒಳ್ಳೆಯದಾಗುತ್ತದೆ.

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ಇದು ತಮ್ಮ ಗಮನಕ್ಕೂ ಬಂದಿರಬಹುದು. ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲರೂ ಇದನ್ನು ಅನುಭವಿಸುತ್ತಿದ್ದಾರೆ. ಇದಕ್ಕೆ ಪರಿಹಾರ ಮಾಡಲಿಕ್ಕೆ ತುರ್ತಾಗಿ ನೀವು ಗಮನಕೊಡಲಿಲ್ಲವೆಂದರೆ ಪೂರ್ಣ ಶಾಪ ಹಾಕುತ್ತಿದ್ದಾರೆ. ನಿಮಗೇ ಗೊತ್ತಿದೆ. ಅವರು ಸಂಪಾದನೆ ಮಾಡಿರುವಂಥ ಭೂಮಿಯನ್ನು ಅವನ ಮನೆಗಳನ್ನು ಅವನು ಮಾರಾಟ ಮಾಡುವುದಕ್ಕೆ ಅವಕಾಶ ಕೊಡದಿದ್ದರೆ ಸಂವಿಧಾನಕ್ಕೆ ಒಂದು ರೀತಿಯಲ್ಲಿ ನೀವು ಚ್ಯುತಿ ತಂದ ಹಾಗೆ ಆಯಿತು. ಅವನ ಆಸ್ತಿಯನ್ನು ಅವನು ಮಾರಾಟ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳುವುದಕ್ಕೆ ಈ ಸರ್ಕಾರ ಯಾರು? ನನ್ನ ಆಸ್ತಿಯನ್ನು ಮಾರುವ ವಿಷಯದಲ್ಲಿ ಇವರು ಯಾರು ಅಡ್ಡ ಬರುವುದಕ್ಕೆ ಎಂದು ಎಲ್ಲರೂ ಕೇಳುತ್ತಿದ್ದಾರೆ. ಹಾಗಾಗಿ ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಇರುವಂಥ ಈ ಸಮಸ್ಯೆಯನ್ನು ತುರ್ತಾಗಿ ತಾವು ಪರಿಹಾರ ಮಾಡಲಿಲ್ಲವೆಂದರೆ ಬಹಳ ದೊಡ್ಡ ಸಮಸ್ಯೆಯಾಗುತ್ತದೆ. ದಯವಿಟ್ಟು ತಾವು ಅದಕ್ಕೆ ತುರ್ತು ಗಮನಕೊಡಬೇಕೆಂದು ಒತ್ತಾಯವನ್ನು ಈ ಸದನದಲ್ಲಿ ಮಾಡುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಮ್ಮ ತೀರ್ಥಹಳ್ಳಿ, ಹೊಸನಗರದಲ್ಲಿ ಭೂಮಿಗೆ ಏನು ಬೆಲೆ ಇರುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಆದರೆ ನೀವು ಎಲ್ಲದರಲ್ಲೂ ಕೂಡ ಬೆಂಗಳೂರು ಕೇಂದ್ರೀಕೃತವಾಗಿ ಆಲೋಚನೆ ಮಾಡಿಬಿಟ್ಟಿದ್ದೀರಿ. ಇಲ್ಲಿ ಏನೋ land mafia ಹೆಚ್ಚಾಗುತ್ತದೆ ಎಂದು ಅದನ್ನು ಏನೋ ಸರಿ ಮಾಡುವುದಕ್ಕೆ ಹೋಗುತ್ತೇವೆಂದು ಹೇಳಿ 'ನೆಗಡಿ ಆಗಿದೆಯೆಂದು ಮೂಗು ಕಟ್ಮಾಡಿ ಹಾಕಿದ ಹಾಗೆ' ಆಗುತ್ತದೆ. ಹೀಗೇಕೆ ಮಾಡಿದ್ದಾರೆ?, ಹೇಗಾದರೂ ಮಾಡಿ ನೀವು ಸರ್ಕಾರದ ಗಮನಕ್ಕೆ ತನ್ನಿ, ನಾವು ತೊಂದರೆಗೆ ಒಳಗಾಗಿದ್ದೇವೆಂದು ನಮಗೆ ದಿನಕ್ಕೆ ಹತ್ತಾರು ಫೋನ್‌ಗಳು ಬರುತ್ತವೆ. ದಯವಿಟ್ಟು ಇದಕ್ಕೆ ಕೂಡಲೇ ಗಮನ ಕೊಟ್ಟು ಒಂದೆರಡು ದಿವಸದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ತೊಂದರೆಯಾಗದ ಹಾಗೆ ಅದನ್ನು clear ಮಾಡಿ. ಇಲ್ಲದಿದ್ದರೆ ತುಂಬಾ ತೊಂದರೆಯಾಗುತ್ತದೆ. ಇಲ್ಲಿ ಜಮೀನಿನ ಬೆಲೆ ಏನೂ ಇಲ್ಲ. ತಂದೆ ಮಕ್ಕಳು ಪಾಲಾಗಿರುತ್ತಾರೆ, ಅವರದು registration ಆಗಬೇಕಾಗಿರುತ್ತದೆ. ಅಣ್ಣತಮ್ಮಂದಿರದು ಯಾವುದೋ ಒಂದು registration ಆಗಬೇಕಾಗಿದೆ.

ಇದಕ್ಕೆಲ್ಲಾ ಹಳ್ಳಿಗಳಲ್ಲಿ ತೊಡಕಾಗಿಬಿಟ್ಟಿದೆ. ನೀವು ಯವುದನ್ನೋ ಮಾಡುವುದಕ್ಕೆ ಹೋಗಿ ಇನ್ನು ಯಾರಿಗೋ ಹಿಂಸೆ ಕೊಟ್ಟ ಹಾಗಾಗುತ್ತದೆ. ಅದಕ್ಕಾಗಿ, ಏನಾದರೂ ಒಂದು ಕುಳಿತುಕೊಂಡು ಸಮಜಾಯಿಷಿ ಕೊಡಿ.

ಶ್ರಿ ವಾಟಾಳ್ ನಾಗರಾಜ್:- ನೀವು ಪಟ್ಟಣ ಪ್ರದೇಶದಲ್ಲೇನು ಉದ್ದೇಶ ಇಟ್ಟುಕೊಂಡು ಮಾಡಿದಿರಿ.

ಶ್ರೀ ಕೆ. ಎಸ್. ಈಶ್ವರಪ್ಪ:- ಪಟ್ಟಣದಲ್ಲೂ ಸಮಸ್ಯೆಗಳಿವೆ.

ಶ್ರೀ ವಾಟಾಳ್ ನಾಗರಾಜ್:- ಪಟ್ಟಣದಲ್ಲೂ ಬಡವರಿದ್ದಾರೆ. ಸಾಮಾನ್ಯರಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಒಂದು ಗುಂಟೆ ಜಾಗವನ್ನು ಬೇರೆಯವರಿಗೆ ಕೊಡಬೇಕಾದರೆ 5 ಗುಂಟೆ ಮಾಡುವುದೇ ಇಲ್ಲ. ಮೊನ್ನೆ ನಾನು ಯಾವುದೋ ಹಳ್ಳಿಗೆ ಹೋದೆ. ಆಗುವುದೇ ಇಲ್ಲ. ನೋಂದಾವಣೆ ಸಾಧ್ಯವೇ ಇಲ್ಲ ಇದು. ಬರುವುದಿಲ್ಲ ಎಂದರೆ ಮತ್ತೆ ಯಾವ ರೀತಿ? ಇನ್ನೊಬ್ಬರು ಅದನ್ನು ಯಾವ ರೀತಿ ಬರೆಸಿಕೊಳ್ಳಬೇಕು? ಅದಕ್ಕೆ ಆಧಾರಗಳೇನು? ಈ ತರಹ ಅನೇಕ, ಲಕ್ಷಾಂತರ ಜನ ಇಡೀ ಕರ್ನಾಟಕದಲ್ಲಿ ತೊಂದರೆಯಲ್ಲಿದ್ದಾರೆ. ಈ ತೊಂದರೆಯನ್ನು ನಿವಾರಿಸುವುದಕ್ಕೆ ನೀವು ಪರಿಣಾಮಕಾರಿಯಾದ ಕ್ರಮ ಕೈಗೊಳ್ಳಬೇಕಾಗುತ್ತದೆ.

ಶ್ರೀ ಸಿ. ಎಂ. ಉದಾಸಿ:- ಈ ನೋಂದಣಿಯಿಂದ ತೊಂದರೆ ಯಾಗಿರುವುದೆಂದರೆ, ವಿದ್ಯಾರ್ಥಿ ಬ್ಯಾಂಕಿಗೆ ಹೋಗಿ ಸಾಲ ತೆಗೆದುಕೊಳ್ಳಬೇಕೆಂದರೆ, ಶೈಕ್ಷಣಿಕ ಸಾಲ ತೆಗೆದುಕೊಳ್ಳಬೇಕಾದರೆ 4 ಗುಂಟೆ ಜಮೀನನ್ನು ಒತ್ತೆ ಹಾಕುವುದು, ಅಡ ಇಡಬೇಕು. ಅದಕ್ಕೆ ಅಕ್ಷೇಪಗಳನ್ನು ವ್ಯಕ್ತ ಪಡಿಸಿದರು. ಆ ಆಕ್ಷೇಪ ವ್ಯಕ್ತಪಡಿಸಿದ್ದಕ್ಕೆ ಶಿಕ್ಷಣ ಮುಂದುವರಿಸಬೇಕೋ, ಬೇಡವೋ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಅವನಿಗೆ 1 ಲಕ್ಷದ 60 ಸಾವಿರ ರೂಪಾಯಿ ಸಾಲ ಬೇಕಾಗಿದೆ. ಇದು ತುರ್ತಾಗಿ ತೀರ್ಮಾನ ತೆಗೆದುಕೊಳ್ಳಬೇಕಾಗಿರುವಂಥ ವಿಚಾರ ಎಂಬುದನ್ನು ತಮ್ಮ ಗಮನಕ್ಕೆ ತರಲಿಕ್ಕೆ ನಾನು ಇಚ್ಛೆಪಡುತ್ತೇನೆ.

ಶ್ರೀ ನೆ. ಲ. ನರೇಂದ್ರ ಬಾಬು (ರಾಜಾಜಿನಗರ) :- ಅಧ್ಯಕ್ಷರೆ, ಸರ್ಕಾರ ನೆಲಗಳ್ಳರು, ಭೂಗಳ್ಳರಿಂದ ರಕ್ಷಿಸುವ ದೃಷ್ಟಿಯಿಂದ ಅವರಿಗೆ ಈ ಕಾನೂನು ಮಾಡಿದ್ದರೂ ಸಹ ಮಧ್ಯಮ ವರ್ಗದವರು, ವಿಶೇಷವಾಗಿ ನಿನ್ನೆ ಒಬ್ಬ ತಾಯಿ ಬಂದು ಹೇಳುತ್ತಿದ್ದಳು. ನನ್ನ ಮಗನನ್ನು ಇಂಜಿನಿಯರಿಂಗ್‌ಗೆ ಸೇರಿಸಬೇಕು, ನಕ್ಸಲೈಟ್ ಗುಂಡಿಗೆ ಬಲಿಯಾದಂಥ ಜಯರಾಂ, ರಾಜಾಜಿನಗರ ಕ್ಷೇತ್ರದಿಂದ ದಾಸರಹಳ್ಳಿಯ ನಿವಾಸಿ, ತಾಯಿ, ಅವರ ಹೆಂಡತಿ ಬಂದು ಹೇಳುತ್ತಿದ್ದರು. ಇವತ್ತು ರಿಜಿಸ್ಟ್ರೇಷನ್, ನನ್ನ ಮನೆಯನ್ನು ಮಾರಿಬಿಟ್ಟು ಕೊಡಲಿಕ್ಕೂ ಆಗುತ್ತಿಲ್ಲ. ಅಂಥ ಸ್ಥಿತಿ ಬಂದಿದೆ ಎಂದು ಹೇಳಿದರು. ಇವತ್ತು ಇಲ್ಲಿ ಮಾಡಿರತಕ್ಕಂಥದ್ದು ಸಬ್-ರಿಜಿಸ್ಟ್ರಾರ್ ಆಫೀಸ್‌ಗಳಲ್ಲಿ ಒಂದೇ ರೀತಿ ವ್ಯಾಪಾರವಾಗಿದೆ. ದಂಧೆಯಾಗಿದೆ. ರಿಜಿಸ್ಟ್ರೇಷನ್‌ಗೆ ಬೆಲೆಗಳು, ಕಾಸ್ಟ್ ಜಾಸ್ತಿಯಾಗುತ್ತಿದೆ. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿ. ಮತ್ತೆ, ಜೊತೆಗೆ, ಇವತ್ತು ಏನಾಗಿದೆ, ಈ ಕಾನೂನು ಮಾಡಿರುವುದು ಒಳ್ಳೆಯ ದೃಷ್ಟಿ ಇಟ್ಟುಕೊಂಡಿದ್ದರೂ ಒಂದು ತರಹ ಎತ್ತಿಗೆ ಚಳಿ ಜ್ವರ ಬಂದರೆ, ಎಮ್ಮೆಗೆ ಬರೆ ಎಳೆದರು ಎಂದು ಗಾದೆ ಇದೆಯಲ್ಲಾ ಹಾಗಾಗಿದೆ ಸ್ವಾಮಿ. ದಯವಿಟ್ಟು, ಆದಷ್ಟು ಬೇಗ ಇದನ್ನು ಸರಿಪಡಿಸಬೇಕು. ಇಲ್ಲ ಅಂದರೆ, ನಗರ ಪ್ರದೇಶಗಳಲ್ಲಿರತಕ್ಕಂಥ ಮಧ್ಯಮ ವರ್ಗದ ಜನರಿಗೆ ಬದುಕೂ ಬಹಳ ಕಷ್ಟವಾಗುತ್ತದೆ ಎಂದು ಹೇಳಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :- ಈ ವಿಚಾರಕ್ಕಾಗಿಯೇ ನಾನು 69ರ ನಿಯಮಾವಳಿಯಡಿಯಲ್ಲಿ ತಾವು ಪರಿವರ್ತನೆ ಮಾಡಿ ಕೊಟ್ಟಿದ್ದೀರಿ. ಅದು ಬೇರೆ ಬೇರೆ ಕಾರಣಗಳಿಗಾಗಿ, ಸಮಯದ ಅಭಾವಕ್ಕಾಗಿ ಚರ್ಚೆಗೆ ಬರಲಿಲ್ಲ. ಈಗ ಕೆಲವು ವಿಚಾರಗಳಲ್ಲಿ ನಾನು ಮಾನ್ಯ ನಾರಾಯಣಸ್ವಾಮಿಗಳು ಎತ್ತಿರತಕ್ಕಂಥದ್ದು, ಅಶೋಕರವರು ಎತ್ತಿರುವುದು, ವಾಟಾಳ್

ನಾಗರಾಜ್‌ರವರು, ಅರಗ ಜ್ಞಾನೇಂದ್ರರವರು, ಎಲ್ಲಾ ಎತ್ತಿರತಕ್ಕಂಥ ವಿಷಯಕ್ಕೆ ಉತ್ತರ ಕೊಡತಕ್ಕಂಥ ಸನ್ನಿವೇಶದಲ್ಲಿ ಉತ್ತರ ಕೊಡುತ್ತೇನೆ. ಆದರೆ, ಅವರು ತಾತ್ಕಾಲಿಕವಾಗಿ ನಾನು ರಿಯಾಕ್ಟ್ ಮಾಡದಿದ್ದರೆ, ನಾಳೆ ಅದು ಹೋಗಿ ಬಿಡುತ್ತದೆ. 200 ಕೋಟಿ ರೂಪಾಯಿ ಡೀಲ್ ಆಗಿದೆ ಎಂದು ಬಿಟ್ಟರು ಇವರ ನಾಯಕರು. ಅದು ಯಾರು ಯಾರಿಗೆ ಕೊಟ್ಟರು? ಯಾರ್ಯಾರು ತೆಗೆದುಕೊಂಡರು ಅನ್ನತಕ್ಕಂಥದನ್ನೂ ಕೂಡ ಹೇಳಬೇಕಾಗುತ್ತದೆ. ಉತ್ತರ ಹೇಳಬೇಕಾಗುತ್ತದೆ. ರಾಜೀನಾಮೆ ಕೊಡಿ ಅಂದರು. ರಾಜೀನಾಮೆಯೂ ಬಹಳ ಸುಲಭ ಕೇಳತಕ್ಕಂಥದ್ದು. ಗೆದ್ದು ಬಂದಿರುವುದು ರಾಜೀನಾಮೆ ಕೊಡುವುದಕ್ಕಾಗಿ ಅಲ್ಲ. ಸರ್ಕಾರ ರಚನೆ ಮಾಡಿರುವುದು ರಾಜೀನಾಮೆ ಕೊಡುವುದಕ್ಕಲ್ಲ. ನಿಮ್ಮ ನಿಮ್ಮ ಪದವಿಗಳಿಗೇ ರಾಜೀನಾಮೆ ಕೊಡುವುದಕ್ಕಾಗದಂತೆ ಭಿನ್ನಾಭಿಪ್ರಾಯಗಳು ಎಲ್ಲಾ ಪಕ್ಷಗಳಲ್ಲಿರುವಾಗ....

ಶ್ರೀ ಕೆ. ಎಸ್. ಈಶ್ವರಪ್ಪ :- ಕೇವಲ ನಮ್ಮ ನಾಯಕರು ಹೇಳಿರುವುದಲ್ಲ. ನಿಮ್ಮ ನಾಯಕರೂ ಹೇಳಿದ್ದಾರೆ. ದೇವೇಗೌಡರು ಹೇಳುತ್ತಿರುವ ಮಾತನ್ನು ಈಗ ನಮ್ಮ ನಾಯಕರ ಕಡೆಗೇಕೆ ತಿರುಗಿಸುತ್ತೀರಾ? ಪ್ರಾರಂಭ ಮಾಡಿದ್ದು ನಿಮ್ಮ ನಾಯಕರು.

ಶ್ರೀ ಎಂ. ಪಿ. ಪ್ರಕಾಶ್ :- ಈಗ ನೋಡಿ.....

ಶ್ರೀ ಕೆ. ಎಸ್. ಈಶ್ವರಪ್ಪ :- ಅದಕ್ಕೆ ಅಂತ್ಯ ಹಾಡುತ್ತಿರುವುದು ನಮ್ಮ ನಾಯಕರು.

ಶ್ರೀ ಎಂ. ಪಿ. ಪ್ರಕಾಶ್ :- ಅದಕ್ಕಾಗಿಯೇ ಹೇಳುತ್ತಿದ್ದೆ. ಮಾನ್ಯ ದೇವೇಗೌಡರು ಕೊಟ್ಟಿರತಕ್ಕಂಥ ಅಂಕಿ-ಸಂಖ್ಯೆಗಳು, ನಾನು ಕೊಡತಕ್ಕಂಥ ಅಂಕಿ-ಸಂಖ್ಯೆಗಳು ಇದರಲ್ಲಿ ಬಹುತೇಕವಾಗಿರತಕ್ಕಂಥ ವ್ಯತ್ಯಾಸಗಳಿಲ್ಲ. ನೀವೇನು ಅಂದುಕೊಂಡಿದ್ದೀರಿ, ಅದಕ್ಕೆಲ್ಲಾ ಉತ್ತರ ಕೊಡಲಿಕ್ಕೆ 69ರ ಕೆಳಗೆ ನಾನು ಉತ್ತರ ಕೊಡಲಿಕ್ಕೆ ತಯಾರಾಗಿದ್ದೆ. ಈಗಾದರೂ ಕೂಡ, ಕಂದಾಯ ಇಲಾಖೆಯ ವಿಚಾರಗಳು ಪ್ರಸ್ತಾಪಕ್ಕೆ ಬಂದಿರುವುದರಿಂದ ಎಲ್ಲಾ ವಿವರಗಳನ್ನೂ ನಾನು ಕೊಡಲಿಕ್ಕೆ ತಯಾರಿದ್ದೇನೆ. ಅದರಲ್ಲಿ ತಾವು ಖಂಡಿತವಾಗಿಯೂ ಕನ್‌ವಿನ್ಸ್ ಆಗುತ್ತೀರಿ. ಆದರೆ ಪ್ರಶ್ನೆ ಏನು ಬಂತು ಇಲ್ಲಿ ಅಂದರೆ, ಈ ಮಧ್ಯಮ ತರಗತಿಯ ಜನ ಈ ರೀತಿಯಾಗಿ ಅಮಾಯಕರಾಗಿ ಮೋಸ ಹೋಗಿರತಕ್ಕಂಥ ಜನ 20-30ರ ಅಡಿ ಜಾಗ ತೆಗೆದುಕೊಂಡು ಅದರಲ್ಲಿ ಮನೆ ಕಟ್ಟಿಸಿರತಕ್ಕಂಥ ಜನ ಈಗ 100 ವರ್ಷದ ಹಳೆ ಮನೆಗಳನ್ನು ರಿಜಿಸ್ಟ್ರೇಷನ್ ಮಾಡಬೇಕು ಎಂಬ ಸಂದರ್ಭದಲ್ಲಿ ಇರತಕ್ಕಂಥ ತೊಂದರೆಗಳನ್ನು ಸರಿಪಡಿಸಬೇಕೆಂದು ಹೇಳಿ ಜಂಟಿ ಕಮಿಟಿಯನ್ನು ಮಾಡಿ 3 ಸಭೆಗಳಾಗಿವೆ. ನಗರಾಭಿವೃದ್ಧಿ ಇಲಾಖೆ ಮತ್ತು ಕಂದಾಯ ಇಲಾಖೆಯವರು ಕಲೆತು 3 ಸಭೆಗಳನ್ನು ಮಾಡಿದ್ದಾರೆ. ಬೇರೆ ಬೇರೆ ವಿಷಯಗಳ ಬಗ್ಗೆ ಕೂಡ ಚರ್ಚೆಯನ್ನು ಮಾಡಿದ್ದೇವೆ. ನನ್ನ ಅಧ್ಯಕ್ಷತೆಯಲ್ಲಿ ಕೂಡ ಒಂದು ಚರ್ಚೆ ಆಗಿ ಹೋಗಿದೆ. ಇದಕ್ಕೆ ನಿಯಮಾವಳಿಗಳನ್ನು ಸಡಿಲ ಮಾಡುತ್ತೇವೆ ಎನ್ನತಕ್ಕಂಥದ್ದು ಪತ್ರಿಕೆಯಲ್ಲಿ ಹೇಳಿಕೆ ಬಂದ ಕೂಡಲೇ 200 ಕೋಟಿ ರೂಪಾಯಿ ಡೀಲ್ ಆಯಿತು ಅಂತನೂ ಶುರು ಮಾಡಿದರು. ಯಾರ ಬಗ್ಗೆ ಇದನ್ನು ಮಾಡುತ್ತೇವೆ, ಯಾರ ಪರವಾಗಿ ನಿಂತುಕೊಂಡು ಇದನ್ನು ಸಡಿಲ ಮಾಡಿಸಬೇಕು? ಈಗ ನಿಯಮಾವಳಿಗಳು ಇಲ್ಲದಂತೆ ನಡೆಸೋದ್ದಾಗಿದ್ದರೆ, ಎಲ್ಲಾ ಸ್ವತಂತ್ರ ಬಿಟ್ಟು, ಹೋಗಿರತಕ್ಕಂಥ ವೈಸ್‌ರಾಯ್ ಹತ್ತಿರ ಹೋಗಬೇಕಾಗಿತ್ತೇನೋ ಅಂದರೆ, ವೈಸ್‌ರಾಯ್‌ರ ಪದವಿ 1947ರಲ್ಲೇ ಹೋಯಿತು. ಇನ್ನು ಏನಾದರೂ ಪ್ರೀವಿಕೌನ್ಸಿಲ್‌ಗೆ ಅಪೀಲ್ ಮಾಡಿಕೊಳ್ಳುವುದಿದ್ದರೆ, ಮಾನ್ಯ ಅಶೋಕ್‌ರವರು ಹೇಳಿದಂತೆ, ಪ್ರೀವಿ ಕೌನ್ಸಿಲ್‌ಗೆ ಅಪೀಲ್ ಮಾಡಿಕೊಳ್ಳುವಂಥ ಅಗತ್ಯತೆ ಇದ್ದರೆ, ಮತ್ತೊಂದು ಸಲ ಗುಲಾಮಗಿರಿಗೆ ನಮ್ಮ ದೇಶವನ್ನು ತಳ್ಳೋಣ.

ಆಗ ಇವೆಲ್ಲಾ ಆಗುತ್ತದೆ. ಇಲ್ಲಿ ಮಾಫಿಯಾಗಳು ಬಂದು ಬರೇ ಬೆಂಗಳೂರು ನಗರ ಒಂದೇ ಅಲ್ಲ, ದೊಡ್ಡ ದೊಡ್ಡ ನಗರಗಳಲ್ಲಿ ಅವರು ಮಾಡಿರತಕ್ಕಂಥ ಅವ್ಯವಹಾರಗಳು, ದೊಡ್ಡ ದೊಡ್ಡ ರಾಜಕಾರಣಿಗಳಾಗಿರತಕ್ಕಂಥವರು, ಪ್ರಭಾವಿಗಳು, ಬೇನಾಮಿ ಹೆಸರಿನಲ್ಲಿ ಏನೇನು ಮಾಡಿದ್ದಾರೆ ಎನ್ನತಕ್ಕಂಥದ್ದೇ ಒಂದು ದೊಡ್ಡದಾಗಿರತಕ್ಕಂಥ ದಸ್ತಾವೇಜು ಇದೆ. ಎಲ್ಲಾ ಒಂದೇ ಒಂದು ವಿಚಾರದಲ್ಲಿ ಆಗಿರತಕ್ಕಂಥ ಪ್ರಶ್ನೆ ಅಲ್ಲ ಇದು. ನಾನು ಯಾರನ್ನೂ ಕುರಿತಾಗಿ ಮಾತನಾಡುವುದಿಲ್ಲ. ನನ್ನನ್ನೇ ಕುರಿತಾಗಿ ತಿಳಿದುಕೊಳ್ಳಬಹುದು. ನನ್ನನ್ನೂ ಕೂಡ ತಾವು ಸಂಶಯದಲ್ಲಿ ನೋಡಬೇಕಾಗುತ್ತದೆ. ಇಡೀ ಬೆ ಂಗಳೂರು ನಗರವನ್ನು ಒಂದು ಕೊಂಪೆಯನ್ನಾಗಿ ಪರಿವರ್ತನೆ ಮಾಡುವಂಥ ರೀತಿಯಲ್ಲಿ ಅನೇಕ ಅವ್ಯವಹಾರಗಳು ನಡೆದಿರತಕ್ಕಂಥ ಕಾರಣಕ್ಕಾಗಿ ಇದನ್ನು ಮಾಡಿದ್ದೇವೆ. ಇದನ್ನು ಮಾಡಲಿಕ್ಕೆ ಪ್ರೇರೇಪಣೆಯಾಗಿರುವುದು ಅರ್ಕಾವತಿ ಲೇಔಟ್‌ನ ಬಗ್ಗೆ ಹೈಕೋರ್ಟ್‌ನಲ್ಲಿ ಕೊಟ್ಟಿರತಕ್ಕಂಥ ಜಡ್ಜ್‌ಮೆಂಟ್. ಅಲ್ಲಿ 108 ಲೇಔಟ್‌ಗಳು ಬಿಡಿಎ ಪ್ರಕಾರವಾಗಿ ಅನಧಿಕೃತವಾದ ಲೇಔಟ್‌ಗಳಿವೆ. ಬಿಡಿಎದವರ ಹೇಳಿಕೆಯಂತೆ, 108 ಅನಧಿಕೃತವಾಗಿರತಕ್ಕಂಥ ಬಡಾವಣೆಗಳಿವೆ. ಈ ಬಡಾವಣೆಗಳಲ್ಲಿ ದೊಡ್ಡ ದೊಡ್ಡವರ ಹೆಸರುಗಳೂ ಕೂಡ ಅದರಲ್ಲಿ ಇದ್ದಾವೆ. ಅವರ ಮಕ್ಕಳು, ಮರಿಗಳು, ಅವರ ಹಿಂಬಾಲಕರು, ಅವರು ಮಾಡಿರತಕ್ಕಂಥ ಬಡಾವಣೆಗಳೂ ಕೂಡ ಸೇರಿದ್ದಾವೆ. ಅನಧಿಕೃತವಾಗಿ ಈ ಪ್ರಮಾಣದಲ್ಲಿ ಬೆಳೆಯಲಿಕ್ಕೆ ಬಿಟ್ಟರೆ, it will be a last staw in the camel's back, ಎನ್ನುವ ರೀತಿಯಲ್ಲಾಗುತ್ತದೆ. ಇನ್ನು, ಬೆಂಗಳೂರು ನಗರ....

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಒಂದೇ ನಿಮಿಷ. ದಸ್ತಾವೇಜಿನಲ್ಲಿ ಯಾರ್‍ಯಾರದು ಇದೆ ಎಂದು ಒಂದು ಸಲ ಹೆಸರು ತಂದು ಬಿಟ್ಟರೆ, ಉಳಿದವರಿಗೆ ಸ್ವಲ್ಪ ಸಮಾಧಾನವಾಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್ :- ಹೇಳುತ್ತೇನೆ. ಅದು ವೆಬ್‌ಸೈಟ್‌ನಲ್ಲಿದೆ. ಈಗ ನಾವೇನು ಮಾಡುತ್ತಿದ್ದೇವೆ, ಏನೋ ಮಹಾ ತನಿಖೆ ಮಾಡಿದ್ದೇವೆ ಅನ್ನತಕ್ಕಂಥ ಪ್ರಶ್ನೆ ಇಲ್ಲ. ವೆಬ್‌ಸೈಟ್‌ನಲ್ಲಿದೆ. ಈಗ ಅದೆಲ್ಲವನ್ನೂ ತಾವು ಅನ್‌ಲೋಡ್ ಮಾಡಿಕೊಂಡು ನೋಡಬಹುದು. ಯಾವ್ಯಾವ ಲೇಔಟ್‌ಗಳನ್ನು ಅವರು ಹೀಗೆ ಮಾಡಿದ್ದಾರೆಂದು. ಇದು ಅಧಿಕೃತವಾಗಿ ಬಿಡಿಎ ಹೇಳಿರುವ ಮಾತು ಇನ್ನೂ, ಅನಧಿಕೃತವಾಗಿರತಕ್ಕಂಥದ್ದು ಒಂದು ಕೆರೆ ಅಂಗಳ ಉಳಿದಿಲ್ಲ, ಕೆರೆ ಏರಿ ಉಳಿದಿಲ್ಲ, ಇಲ್ಲಿ ಭೂಮಿಗಳು ಉಳಿದಿಲ್ಲ. ಎಲ್ಲಾ ಇಲ್ಲಿ ಆಗಿರತಕ್ಕಂಥದ್ದು. ಆದರೆ, ಮಾನ್ಯ ಜ್ಞಾನೇಂದ್ರರವರು ಹೇಳಿದಂತೆ, ಬೆಂಗಳೂರು ನಗರವನ್ನೇ ನಾವು ಕೇಂದ್ರೀಕೃತವಾಗಿ ಯೋಚನೆ ಮಾಡಿ ಮಾಡತಕ್ಕಂಥದ್ದು ಸರಿಯಾದುದ್ದಲ್ಲ. ಆದ್ದರಿಂದ, ಈ ಬಡ ಮಧ್ಯಮ ತರಗತಿಯ ಜನಗಳಿಗೆ ಆಗತಕ್ಕಂಥ ತೊಂದರೆಯನ್ನು ಮಾನ್ಯ ಅಶೋಕ್‌ರವರು ಏನು ಪ್ರಸ್ತಾಪ ಮಾಡಿದರು, ಅದು ನಿಜವಾಗಲು ಕೂಡ ನಾನು ಸ್ವಾಗತ ಮಾಡುತ್ತೇನೆ. ಆ ಕಾರಣಕ್ಕಾಗಿಯೇ, ಈಗಾಗಲೇ ಮೀಟಿಂಗ್ ಮಾಡಿದ್ದೇವೆ. ಇನ್ನೂ ಎರಡು ಮೀಟಿಂಗ್ ಮಾಡುತ್ತಿದ್ದೇನೆ. ಏಕೆ ಅದಕ್ಕೆ ತಡೆ ಆಗಿದೆ ಎನ್ನತಕ್ಕಂಥದ್ದು ಹೇಳುತ್ತೇನೆ. ಈಗ ಸ್ಟ್ರಕ್ಚರ್ ಎನ್ನತಕ್ಕಂಥದ್ದು ಒಂದು ಬರುತ್ತದೆ. ಕಟ್ಟಡ ಇರಬೇಕು ಅಂದರೆ ಬೆಂಗಳೂರಿನಲ್ಲಿ ಎಲ್ಲೇ ಹೋಗಿ ನೋಡಿ ಕೋಳಿ ಗೂಡುಗಳ ತರಹ ಇವೆ. ಆ ಕೋಳಿ ಗೂಡುಗಳಿಗೆಲ್ಲಾ ಡೋರ್ ನಂಬರ್‌ಗಳನ್ನು ಕೊಟ್ಟಿದ್ದಾರೆ. ಆ ಕೋಳಿ ಗೂಡುಗಳನ್ನು ವಾಸದ ಮನೆಗಳೆಂದು ಕರೆಯುತ್ತಾರೆ. ಯಾರನ್ನೋ ಒಬ್ಬರನ್ನು ತರುತ್ತಾರೆ, ಅಲ್ಲಿ ಕೂಡಿಸುತ್ತಾರೆ ಅಂತಲ್ಲ ಬೀಗ ಹಾಕುತ್ತಾರೆ. ಒಂದು ಡೋರ್ ನಂಬರ್ ತೆಗೆದುಕೊಳ್ಳುತ್ತಾರೆ. ನೋಟಿಫೈಡ್ ಏರಿಯಾದಲ್ಲಿ ಹಾಗಾಗಿದೆ. ಪ್ರಾಧಿಕಾರಗಳಲ್ಲಿ ಹಾಗಾಗಿದೆ. ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ವಿಚಾರದಲ್ಲಿ ಬಂದಿರತಕ್ಕಂಥದ್ದರಲ್ಲಿ ಆಗಿದೆ. ಇಂಥ

ಪ್ರಕರಣಗಳಿರುವುದರಿಂದ, ನಾವು ಮಾಡತಕ್ಕಂಥ ಕಾನೂನು ಆದಷ್ಟು ಮಟ್ಟಿಗೆ ಅದನ್ನು ದುರುಪಯೋಗ ಆಗಲಾರದಂತೆ ಅದನ್ನು ಬೇರೆ ರೀತಿಯಲ್ಲಿ ಉಪಯೋಗಿಸಿಕೊಳ್ಳಲಾರದಂಥ ರೀತಿಯಲ್ಲಿ ಮಾಡುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಖಂಡಿತವಾಗಿ, ತಮ್ಮ ಸಲಹೆಯನ್ನು ನಾನು ಕೇಳುತ್ತೇನೆ. ಸಾಧ್ಯವಾದರೆ, ಇದರ ಬಗ್ಗೆ ತಾವುಗಳು ಏನು ಸಲಹೆಗಳನ್ನು ಕೊಡುತ್ತೀರಿ, ಆ ಹಿನ್ನೆಲೆಯಲ್ಲಿ ಇನ್ನು ಸ್ವಲ್ಪೇ ದಿವಸಗಳಲ್ಲಿ ಅದರ ನಿಯಮಾವಳಿಗಳನ್ನು ಯಾವುದೇ ಡೀಲ್ ಇಲ್ಲದಂಥ ಬಹಳ ಪಾರದರ್ಶಕವಾಗಿ ಮಾಡಿ ತೋರಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ಈಗ.....

ಅಧ್ಯಕ್ಷರು :– ಚರ್ಚೆ ಬೇಡ.

ಶ್ರೀ ವಾಟಾಳ್ ನಾಗರಾಜ್ :– ಈ ತರಹ ಭೂಗಳ್ಳರು, ಲೂಟಿಕೋರರು, ಇದನ್ನು ಮಾತ್ರ ನೀವು ಕಡ್ಡಾಯವಾಗಿ ಯಾರು ಏನೇ ಹೇಳಲಿ, ಡೀಲಿಂಗ್, ಗೀಲಿಂಗ್ ಆಮೇಲೆ ನೋಡಿಕೊಳ್ಳೋಣ. ಯಾರು ಏನೇ ಹೇಳಲಿ, ನೀವು ಈ ವಿಚಾರದಲ್ಲಿ ಮಾತ್ರ ಸ್ಪಷ್ಟತೆಯಿಂದ ಬದಲಾವಣೆ ಆಗಲೇಬೇಡಿ. ಆದರೆ, ಹಳ್ಳಿಗಾಡಿನಲ್ಲಿ ಇರುತ್ತಲ್ಲಾ, ಸಣ್ಣ ಒಂದು ಗುಂಟೆ, 2 ಗುಂಟೆ ಇದರೆ ಬಗ್ಗೆ ಏನಾದರೂ ಬದಲಾವಣೆ ಮಾಡುವುದಕ್ಕೆ ತಾವು ಯೋಚನೆ ಮಾಡಿ.

ಶ್ರೀ ಕೆ. ಎಸ್. ಈಶ್ವರಪ್ಪ :– ಇದರಲ್ಲಿ ಹಳ್ಳಿ, ಪಟ್ಟಣ ಅಂತ ಪ್ರಶ್ನೆಯನ್ನು ತರಬೇಡಿ ಸಾರ್. ಇವತ್ತು ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಕಡೆಯೂ ಈ ಸಮಸ್ಯೆ ಇದೆ. ಹಾಗೆ, ಬೆಂಗಳೂರಿಗೆ ಸೀಮಿತವಾಗಿ ಏನೋ ಆಗಿದೆ ಎನ್ನುವುದನ್ನು ಇಡೀ ರಾಜ್ಯದಲ್ಲಿ ಜನ ಅನುಭವಿಸುವುದಕ್ಕೆ ಅವಕಾಶ ಮಾಡಿಕೊಡಬೇಡಿ. ತುರ್ತಾಗಿ, ಎಷ್ಟು ಬೇಗ ಅಷ್ಟು ದಯವಿಟ್ಟು ಅದನ್ನು ಪರಿಹಾರ ಮಾಡಿ.

ಶ್ರೀ ಅರಗ ಜ್ಞಾನೇಂದ್ರ :– ಸಾರ್, ಬಿಡಿಎ ಬಗ್ಗೆ ತಾವು ಹೇಳಿದಿರಿ. ಇಷ್ಟು ಅನಧಿಕೃತ ಬಡಾವಣೆಗಳಿವೆ ಎಂದಿರಿ. ಎಷ್ಟು ಕೋಟಿ ರೂಪಾಯಿಗಳ ವ್ಯತ್ಯಾಸವಾಗಿದೆ, ಇಲ್ಲೇನು ವ್ಯವಹಾರ ಆಗಿದೆ, ಅದು ಎಷ್ಟು ವರ್ಷದ್ದು ವ್ಯವಹಾರ? ಅವಾಗಲೆಲ್ಲಾ ಅಧಿಕಾರಿಗಳು, ಮಂತ್ರಿಗಳು ಏನು ಮಾಡಿದರು ಹಾಗಾದರೆ? ಇವರಮೇಲೆ ನೀವು ಏಕೆ ಕ್ರಮ ತೆಗೆದುಕೊಳ್ಳಬಾರದು? ಅದನ್ನು ಮಾಡಿ. ನೀವು ಯಾರನ್ನು ಹದ ಹಾಕಬೇಕೋ ಅದನ್ನು ಮಾಡಿ. ಅದರಲ್ಲಿ ಏನೂ ಹಿಂದೆ ಮುಂದೆ ನೋಡುವಂಥ ಅವಶ್ಯಕತೆ ಇಲ್ಲ. ಏಕೆಂದರೆ, ಇದನ್ನು ಸ್ಟೇಟ್‌ಮೆಂಟ್‌ಗಳ ಆಧಾರ ಕೊಟ್ಟುಕೊಂಡು ಹೋಗಿಬಿಟ್ಟರೆ ಇದಕ್ಕೊಂದು ಎಂಡ್ ಎಂದು ಏನೂ ಇಲ್ಲ. ನೀವು ಹೇಳಿದ್ದು ಕೇಳಿ ನನಗೆ ಆಶ್ಚರ್ಯವಾಗುತ್ತಿದೆ. ಹಾಗಾದರೆ, ಕಾನೂನು ಇರಲಿಲ್ಲವೇ? ಅದಕ್ಕೆ ಶಿಕ್ಷೆ ಇಲ್ಲವೇ? ಅವರೆಲ್ಲಾ ಏನು ಮಾಡುತ್ತಿದ್ದರು? ಈಗ ಡೀಲ್ ಮಾಡಿದ್ದಾರೆಂದು ನಮ್ಮ ನಾಯಕರು ಹೇಳಿದ್ದು, ಹೇಳಿದ್ದರಲ್ಲಿ ತಪ್ಪೇನಿದೆ ಎಂದು ನಾನು ಕೇಳುವುದು. ಇಷ್ಟೊಂದು ಅನಧಿಕೃತ ಬಡಾವಣೆಗಳಾಗಲಿಕ್ಕೆ ಅವಕಾಶ ಕೊಟ್ಟಂಥವರಾರು? ಅವತ್ತು ಸರ್ಕಾರ ಬದುಕಿರಲಿಲ್ಲವೇ ಅಥವಾ ಅಧಿಕಾರಿಗಳಿಗೆ ಅಧಿಕಾರ ಇರಲಿಲ್ಲವೆ ಇದನ್ನು ತಾವು ತನಿಖೆಗೆ ಒಳಪಡಿಸಬೇಕು. ಅಂಥವರಿಗೆ ಶಿಕ್ಷೆ ಕೊಡಿಸಿ. ಅದರಲ್ಲೇನೂ ತೊಂದರೆ ಇಲ್ಲ.

ಶ್ರೀ ಎಂ. ಪಿ. ಪ್ರಕಾಶ್ :– ನಾವು ಈ ತಪ್ಪುಗಳಾಗಿತರಕ್ಕಂಥದ್ದರ ಬಗ್ಗೆ ನಾವು ಸರಿಪಡಿಸುತ್ತೇವೆ ಅಂತ ಹೋದರೆ ಇಡೀ ಜೀವಮಾನವೆಲ್ಲವನ್ನೂ ಕೂಡ ಕುದುರೆ ಲಾಯ ತೊಳೆಯುವಂಥ ಕೆಲಸವೇ ಆಗುತ್ತದೆ. ಹಿಂದೆ ಒಂದು ಜೋಕ್ ಇತ್ತು. 'ದೇವರ ಹತ್ತಿರ ರಷ್ಯಾದ ಪ್ರಧಾನಿ ಮತ್ತು ಅಮೆರಿಕಾದ ಅಧ್ಯಕ್ಷ, ಭಾರತದ ಪ್ರಧಾನಿ ಹೋಗಿ ನಾವು ಈ ದೇಶವನ್ನು ಸುಧಾರಿಸುವುದು ಹೇಗೆ,ನಮಗೊಂದು

ಅವಕಾಶ ಕಲ್ಪಿಸಿಕೊಡಿ ಅಂತ ಅಮೆರಿಕಾದವರು ಕೇಳಿದಾಗ, ನಿನ್ನ ಅವಧಿಯಲ್ಲಿ ಮಾತ್ರ ಆಗುವುದಿಲ್ಲ, ಆದಾದಮೇಲೆ ಆಗಬಹುದು ಎಂದು ದೇವರು ಹೇಳಿದನಂತೆ. ಅದಾದಮೇಲೆ, ರಷ್ಯಾದ ಎಲ್ಸಿನ್ ಹೋಗಿ ಕೇಳಿದಂಥ ಸಂದರ್ಭದಲ್ಲಿ ನೋಡಬಹುದು, ನಿನ್ನ ಜೀವಿತಾವಧಿಯಲ್ಲಿ ಆಗಲಿಕ್ಕೆ ಸಾಧ್ಯವಾಗಬಹುದು ಅಂತ ಹೇಳಿ ಅಂದರಂತೆ. ಏಕೆಂದರೆ, ಅವನು ಹೇಗೂ ಡಿಕ್ಟೇಟರ್ ಆಗಿದ್ದ. ನಮ್ಮ ಭಾರತದ ಪ್ರಧಾನಿಗಳು ಕೇಳಿದಂಥ ಸಂದರ್ಭದಲ್ಲಿ ನನ್ನ ಜೀವಮಾನದಲ್ಲೂ ಕೂಡ ನಿಮ್ಮ ದೇಶ ರಿಪೇರಿಯಾಗುವುದಿಲ್ಲ ಎಂದು ದೇವರು ಹೇಳಿ ಎದ್ದು ಹೋಗಿಬಿಟ್ಟನ್ನಂತೆ.

ಶ್ರೀ ಅರಗ ಜ್ಞಾನೇಂದ್ರ :– ನೀವು ಈ ರೀತಿ ಅಸಹಾಯಕರಾಗಬೇಡಿ.

ಶ್ರಿ ಎಂ. ಪಿ. ಪ್ರಕಾಶ್ :– ಇದು ಸಣ್ಣ ಜೋಕು. ಆದುದರಿಂದ, ಜೋಕು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ :– ದೇವರಿಗೆ ಆಗದೇ ಇದ್ದದ್ದು ಪ್ರಕಾಶ್‌ರವರಿಗೆ ಮಾಡುವುದಕ್ಕೆ ಸಾಧ್ಯ.

ಶ್ರೀ ಕೆ. ಎಸ್. ಈಶ್ವರಪ್ಪ :– ಈ ರೀತಿ ತುಂಬಾ ಸ್ಪಷ್ಟವಾಗಿ ನೀವು ಆಗುವುದಿಲ್ಲ ಎಂದು ಹೇಳಿದರೆ ಯಾರ‍್ಯಾರು ಈ ರೀತಿ ಲೂಟಿಕಾರರು ಇದ್ದಾರಲ್ಲಾ, ಅವರೆಲ್ಲರಿಗೂ ಕೂಡ ಒಂದು ರೀತಿಯ ನೆಮ್ಮದಿ ಜೀವನ ಸಿಗುತ್ತದೆ. ಈ ಸರ್ಕಾರ ನಮಗೆ ಆಶೀರ್ವಾದ ಮಾಡಿದೆ ನಮಗೇನು ಭಯವಿಲ್ಲ ಅಂದು ಕೊಳ್ಳುತ್ತಾರೆ.

ಶ್ರಿ ಎಂ. ಪಿ. ಪ್ರಕಾಶ್ :– ತಾವು ಅಪಾರ್ಥ ಮಾಡಿಕೊಂಡಿರಿ, ನಾನು ಹೇಳಿದ್ದು ಸಣ್ಣ ಜೋಕು. ಅಂದರೆ, ನಮ್ಮ ಮಾನ್ಯ ಜ್ಞಾನೇಂದ್ರರವರು ಏನು ಹೇಳಿದರು, ಎಷ್ಟು ದೊಡ್ಡದಾಗಿರತಕ್ಕಂಥ ದುರಂತಗಳಿವೆ, ಇಡೀ ಜೀವಮಾನದಲ್ಲಿ ರಿಪೇರಿ ಮಾಡಲಾರದಷ್ಟು ಕಾನೂನುಗಳು ಉಲ್ಲಂಘನೆಗಳು ಆಗಿವೆ. ಇದರಲ್ಲಿ ನೀವು ಹೇಳಿದಂತೆ ನಾವೆಲ್ಲರೂ ಬಾಧ್ಯರೇ ಅದರಲ್ಲಿ ಏನೂ ಆಶ್ಚರ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಈ ಭೂಕಳ್ಳರ ಬಗ್ಗೆ ಜಿವಿಕೆ ರಾವ್‌ರವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದನ್ನು ತಾವು ತರಿಸಿ ಅಸೆಂಬ್ಲಿಯಲ್ಲಿ ಮಂಡಿಸಿ. ಯಾರ‍್ಯಾರು ಲೂಟಿಕೋರರು ಇದ್ದಾರೆ ಎಂಬುದು ಗೊತ್ತಾಗುತ್ತದೆ. ನಾನು ನಿಮಗೆ ಹೇಳುವುದು ಏನೆಂದರೆ, ಅದರಲ್ಲಿರುವ ಹೆಸರುಗಳನ್ನು ಬಹಿರಂಗಪಡಿಸಿ. ಅದು ಯಾರದ್ದು ಏನೇ ಇರಲಿ ಅದು ಎಲ್ಲವೂ ಆಚೆ ಬರಲಿ, ಇದರ ಗತಿ ಏನೇ ಆದರೂ ಚಿಂತೆಯಿಲ್ಲ, ಒಂದು ಕ್ರಾಂತಿಕಾರಕವಾದ ತೀರ್ಮಾನ ಆಗಲಿ.

ಶ್ರೀ ಆರ್. ರೋಷನ್ ಬೇಗ್ :– ಮಾನ್ಯ ಪ್ರಕಾಶ್ ರವರು ಬಹಳ ಡೀಟೈಲ್ ಆಗಿ ನಗರದಲ್ಲಿ ಏನೇನು ಗೋಲ್‌ಮಾಲ್ ನಡೆಯಿತು, ಬೆಂಗಳೂರು ನಗರ ಹಾಗು ಬೆಂಗಳೂರು ಸುತ್ತಾಮುತ್ತ ಲ್ಯಾಂಡ್ ಏನ್‌ಕ್ರೋಚ್‌ಮೆಂಟ್ಸ್, ಲ್ಯಾಂಡ್ ಡಿ–ನೋಟಿಫೈ, ಯಾರ‍್ಯಾರು ಪ್ರಮುಖ ರಾಜಕಾರಣಿಗಳು, ಇಂಪಾರ್ಟೆಂಟ್ ಲೀಡರ್ಸ್ ಎಂದು ಹೇಳಿದ್ದಾರೆ. ಹೀಗಾಗಿ ಆ ಲೀಡರ್ಸ್ ಯಾರ‍್ಯಾರು? ಆಗ ಯಾರ‍್ಯಾರು ಮಂತ್ರಿಗಳು ಆಗಿದ್ದರು? ಯಾರ‍್ಯಾರು ಅಧಿಕಾರಿಗಳು ಆಗಿದ್ದರು? ಆ ಅಧಿಕಾರಿಗಳು ಈಗ ಎಲ್ಲಿ ಓಡಿ ಹೋಗಿದ್ದಾರೆ? ಕೆಲವು ಜನ ನಾಳೆ ಏನಾದರು ತನಿಖೆ ಯಾಗಬಹುದೆಂದು ವರ್ಲ್ಡ್ ಬ್ಯಾಂಕ್ ಪೋಸ್ಟಿಂಗ್ ಎಂದು ಅಮೇರಿಕಾದಲ್ಲಿ, ವಾಷಿಂಗ್‌ಟನ್‌ನಲ್ಲಿ ಅರಾಮವಾಗಿ ಮಜವಾಗಿ ಕುಳಿತಿದ್ದಾರೆ. ಅವರು ಯಾರು? ಅವರು ಇದ್ದಾಗ ಅಲ್ಲಿ ಏನೇನು ಗೋಲ್‌ಮಾಲ್ ನಡೆಯಿತು? ಪೊಲಿಟಿಕಲ್ ಲೀಡರ್ಸ್ ಇದ್ದಾರೆ, ರಾಜಕಾರಣಿಗಳು ಅಂದರೆ ಯಾರು? ಆಗ ಯಾರ‍್ಯಾರು ಮಂತ್ರಿಯಾಗಿದ್ದರು? ಯಾರು ಮುಖ್ಯ ಮಂತ್ರಿಯಾಗಿದ್ದರು? ಅದರಲ್ಲಿ ವಿರೋಧ ಪಕ್ಷದ ನಾಯಕರುಗಳು ಯಾರ‍್ಯಾರು ಶಾಮೀಲಾಗಿದ್ದಾರೆ? ಬರೀ ಇವರೇ ಅಲ್ಲ. ಅವರ ಬಂಧುಗಳು ಯಾರು? ಬೇನಾಮಿ ಹೆಸರಿನಲ್ಲಿರುವವರು ಯಾರು?

ಶ್ರೀ ವಾಟಾಳ್ ನಾಗರಾಜ್ :– ಅಳಿಯಂದಿರು ಯಾರು?

ಅಧ್ಯಕ್ಷರು :– ಅವರು ಹೇಳಲಿ ಸ್ವಲ್ಪ ತಾಳಿ.

ಶ್ರೀ ಆರ್. ರೋಷನ್ ಬೇಗ್ :– ಅವರ ರಿಲಿಟೀವ್ಸ್ ಯಾರು? ಯಾರ್‍ಯಾರ ಹೆಸರಿನಲ್ಲಿ ಎಷ್ಟೆಷ್ಟು ಜಾಗ ಇವೆ? ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಇದು ಸಿಬಿಐ ಗೆ ಖಂಡಿತವಾಗಿ ರೆಫರ್ ಮಾಡಬೇಕು.

ಶ್ರೀ ಅರಗ ಜ್ಞಾನೇಂದ್ರ :– ಆಡಳಿತ ಪಕ್ಷದಲ್ಲಿರುವವರು ನೀವು ಈ ರೀತಿ ಮುಗಂ ಆಗಿ ಮಾತನಾಡಬೇಡಿ, ತಾವು ಓಪನ್ ಆಗಿ ಮಾತನಾಡಿ ಸಾರ್, ಅಧೈರ್ಯ ನಿಮಗ್ಯಾಕೆ ಸಾರ್? ಓಪನ್ನಾಗಿ ಹೇಳಿ.

ಅಧ್ಯಕ್ಷರು :– ಈಗ ಅಶೋಕ್‌ರವರೇ, ನಾರಾಯಣ ಸ್ವಾಮಿಯವರು ಮಾತನಾಡಲಿ, ಇದು ಚರ್ಚೆ ಮುಗಿಯುತ್ತಿಲ್ಲ. ಇದು ಎಲ್ಲೆಲ್ಲಿಗೋ ಹೊರಟು ಹೋಯಿತು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :– ಇದಕ್ಕಿಂತ ಓಪನ್ನಾಗಿ ನಿಮಗೆ ಮಾತನಾಡಲಿಕ್ಕೆ ಆಗುತ್ತದಾ? ಆಗುವುದಿಲ್ಲ ಆದರೂ ಅಷ್ಟು ಒತ್ತಡದಲ್ಲಿ ಅವರು ಮಾತನಾಡಿದ್ದಾರೆ ಅಷ್ಟು ಸಾಕು.

ಅಧ್ಯಕ್ಷರು :– ಅವರು ಉತ್ತರ ಕೊಡುವ ಕಾಲದಲ್ಲಿ ಇದರ ಬಗ್ಗೆ ಸಮಗ್ರವಾಗಿ ಉತ್ತರ ಕೊಡುತ್ತೇನೆಂದು ಹೇಳಿದ್ದಾರೆ. ಆದುದರಿಂದ, ನಾರಾಯಣ ಸ್ವಾಮಿಯವರು ಮಾತನಾಡಲಿ.

ಶ್ರೀ ಆರ್. ಅಶೋಕ್ : ಇಲ್ಲಿ ಬಿಡಿಎ ದವರು ಏನು ಹೇಳುತ್ತಾರೆ, ಅವರೇ ಸಾವಿರಾರು ಎಕರೆ ಒಂದೊಂದು ಬಡಾವಣೆಯಲ್ಲಿ ಎರಡೆರಡು ಮೂರು ಸಾವಿರ ಎಕರೆಯನ್ನು ಅವರೇ ಡೀನೋಟಿಫೈ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು : ಇದನ್ನೆಲ್ಲಾ ಅವರು ಹೇಳಿದ್ದಾರಲ್ಲವೇ?

ಶ್ರೀ ಆರ್. ಅಶೋಕ್ : ಅವರು ಹೇಳಲಿಲ್ಲ. ಇವತ್ತೇನು ರೆವಿನ್ಯೂ ಸೈಟ್‌ಗಳು ಬಂದಿವೆ, ಸರ್ಕಾರವೇ ಅವುಗಳನ್ನು ಡೀನೋಟಿಫೈ ಮಾಡಿಕೊಟ್ಟಿದೆ. ಯಾವ್ಯಾವ ಸರ್ಕಾರದಲ್ಲಿ ಎಷ್ಟೆಷ್ಟು ಮಾಡಿದ್ದಾರೆಂಬುದನ್ನೇ ಮಾನ್ಯ ರೋಷನ್ ಬೇಗ್‌ರವರು ಹೇಳಿದ್ದು. ಡಿನೋಟಿಫಿಕೇಷನ್ ಮಾಡಿಕೊಟ್ಟಿದ್ದಾರೆ. ಅದರಿಂದಾಗಿ ಇವತ್ತು, ಬಿಡಿಎ ಕೂಡ ಅಷ್ಟೆ. ಮೊನ್ನೆ ಪತ್ರಿಕೆಗಳಲ್ಲಿ ಬಂದಿದೆ, ಬೇಕಾದರೆ ತಾವು ಅದನ್ನು ನೋಡಿ, ಬೆಂಗಳೂರಿನಲ್ಲಿ ಕೆರೆ ಯಾರು ನುಂಗಿದ್ದಾರೆಂದರೆ ಗೌರ್ನಮೆಂಟ್‌ನವರೇ ಹೈಯೆಸ್ಟ್ ನುಂಗಿರುವವರು ಬಿಡಿಎ. ಕೋರಮಂಗಲದಲ್ಲಿರುವ ಕೆರೆಗಳನ್ನು ನುಂಗಿ ಇವತ್ತು ಅಲ್ಲಿ ಬಿಡಿಎ ಲೇಔಟ್‌ಗಳನ್ನಾಗಿ ಮಾಡಿದ್ದಾರೆ. ಕೆಂಪೇಗೌಡ ಬಸ್ ನಿಲ್ದಾಣ ಇದೆ ಅದು ಕೆರೆ, ಕಂಠೀರವ ಸ್ಟೇಡಿಯಂ ಇದೆ. ಅದು ಕೆರೆ, ಕೆಂಪಾಬುದಿ ಕೆರೆ, ಎಲ್ಲಾ ಇವತ್ತು ಲೂಟಿಯಾಗಿರುವುದು, ಯಾರು ಸರ್ಕಾರ ಇವತ್ತು ಕೆರೆಗಳನ್ನು ರಕ್ಷಣೆ ಮಾಡಬೇಕಾಗಿತ್ತೋ, ಅವತ್ತು ಆಡಳಿತ ನಡೆಸಿದಂಥವರು, ಆವತ್ತು ನೀವೇ ದಾರಿದೀಪ. ಜನಗಳಿಗೆ ದಾರಿದೀಪ ಯಾರು ಅಂದರೆ ಸರ್ಕಾರವೇ. ಬೆಂಗಳೂರು ಹಾಗೂ ಸುತ್ತ ಮುತ್ತ ನನಗೆ ತಿಳಿದ ಹಾಗೆ 2000 ಕೆರೆಗಳು ಇದ್ದವಂತೆ. ಇದು ಒಂದು ರೀತಿ ಎಸಿ ಸಿಟಿ; ಕೆರೆಗಳೇ ಎಸಿ ಯಾಗಿ ಈ ಬೆಂಗಳೂರನ್ನು ಕಾಪಾಡುತ್ತಿತ್ತು. ಏರ್‌ಕಂಡೀಷನ್ ಸಿಟಿ ಎನ್ನುವುದಕ್ಕೆ ಇದೇ ಕಾರಣ. ಈ ಎರಡು ಸಾವಿರ ಕೆರೆಗಳಲ್ಲಿ ಬೆಂಗಳೂರಿನಲ್ಲಿ ಏನಾದರೂ ಜಾಸ್ತಿ ಅವ್ಯವಹಾರ ಆಗಿದ್ದರೆ ಅದು ಸರ್ಕಾರದಿಂದಲೇ. ಸರ್ಕಾರವೇ ಈ ಕೆರೆಗಳನ್ನು ಮುಚ್ಚಿದೆ, ಬಿಡಿಎ ದವರು ಕೋರಮಂಗಲದಲ್ಲಿ ಲೇಔಟ್ ಮಾಡಿದ್ದಾರೆ. ಬಿಟಿಎಂ ಲೇಔಟ್‌ನಲ್ಲಿ ಕೆರೆ ಮುಚ್ಚಿ ಲೇಔಟ್ ಮಾಡಿದ್ದಾರೆ, ಜಯನಗರದಲ್ಲಿ ಕೆರೆ ಮುಚ್ಚಿ ಲೇಔಟ್ ಮಾಡಿದ್ದಾರೆ. ಕಟ್ಟಡ ಕಟ್ಟಿದ್ದೀರಿ,

ಕಾಂಪ್ಲೆಕ್ಸ್ ಕಟ್ಟಿದ್ದೀರಿ, ಕ್ರೀಡಾಂಗಣ ಕಟ್ಟಿದ್ದೀರಿ, ಬಸ್ ಸ್ಟ್ಯಾಂಡ್‌ಗಳನ್ನು ಕಟ್ಟಿದ್ದೀರಿ, ಇವತ್ತು ಬೆಂಗಳೂರಿನಲ್ಲಿ ಒಂದೇ ಒಂದು ಗಂಟೆ ಸಣ್ಣ ಮಳೆ ಬಿದ್ದರೆ ಎಲ್ಲಾ ಕಡೆ ಫ್ಲಡ್ ಆಗುತ್ತದೆ. ಏಕೆಂದರೆ, ಮೊದಲೆಲ್ಲಾ ಆ ಮಳೆಯ ನೀರು ಕೆರೆಗಳಿಗೆ ಹೋಗುತ್ತಿತ್ತು, ಆ ಕೆರೆ ತುಂಬಿ ಈ ರೀತಿಯ ನೂರು ಇನ್ನೂರು ಕೆರೆಗಳಿಗೆ ಆ ನೀರು ಹೋಗುತ್ತಿತ್ತು. ನನಗೆ ಅನ್ನಿಸುತ್ತದೆ 3 ಟಿಎಂಸಿ 5 ಟಿಎಂಸಿ ನೀರು ಇಲ್ಲಿಯೇ ಸಂಗ್ರಹವಾಗುತ್ತಿತ್ತು. ಈಗ ಎಲ್ಲೂ ಸಂಗ್ರಹವಾಗುವುದಕ್ಕೆ ಅವಕಾಶವೇ ಇಲ್ಲ. ಈ ರೀತಿಯಾಗಿ ನೀರು ಸಂಗ್ರಹವಾಗುವುದಕ್ಕೆ ಅವಕಾಶ ಮಾಡದೇ ಇರುವುದಕ್ಕೆ ದಾರಿದೀಪ ಎಂದರೆ ಸರ್ಕಾರವೇ. ಹಿಂದೆ ಯಾರು ಆಡಳಿತ ನಡೆಸುತ್ತಿದ್ದರು, ಇವರೆಲ್ಲಾ ಏನು ಯೋಜನೆ ಇಲ್ಲದೆ ಎಲ್ಲಾ ಕೆರೆಗಳನ್ನು ಮುಚ್ಚಿ, ಸಂಕೀರ್ಣಗಳನ್ನು ಮಾಡಿದ್ದಾರೆ, ಕ್ರೀಡಾಂಗಣ ಮಾಡಿದ್ದಾರೆ, ಆ ಕೆರೆಗಳನ್ನು ಮುಚ್ಚುವುದಕ್ಕೆ ಸರ್ಕಾರವೇ ಕಾರಣ, ಅವರೇ ಇದಕ್ಕೆಲ್ಲಾ ದಾರಿದೀಪವಾಗಿರುವುದು. ಈ ಬೆಂಗಳೂರು ಎಸಿ ಸಿಟಿ ಎನು ಇದೆ ಅದು ಇವತ್ತು ಹೋಗಿರುವುದಕ್ಕೆ ಅದೇ ಕಾರಣ.

ಶ್ರೀ ಎಸ್. ಎಸ್. ಪಾಟೀಲ್ : ಬಹುಶಃ ನಾನು ಇದನ್ನು 15 ವರ್ಷಗಳಿಂದಲೂ ಕೇಳುತ್ತಿದ್ದೇನೆ ಈ ಬೆಂಗಳೂರು ವಿಷಯ ಚರ್ಚೆಗೆ ಬಂದರೆ, ಅದಕ್ಕೆ ಎಲ್ಲಾ ವೇಳೆ ಹೋಗುತ್ತಿದೆ, ಆ ಕಾರಣದಿಂದ ನಾನು ಏನು ಹೆಳುತ್ತೇನೆಂದರೆ, ಈ ಬೆಂಗಳೂರು ವಿಷಯಕ್ಕೆ ಸಂಬಂಧಪಟ್ಟಂತೆ ಮುಗಿಸುವವರೆವಿಗೂ, 15 ದಿವಸ ಬೆಂಗಳೂರು ಬಿಟ್ಟು ಬೇರ ವಿಷಯವೆ ಬೇಡ. ಅದೇ ವಿಷಯ ತೆಗೆದುಕೊಂಡರೆ ಆಗ ಏನಾದರೂ ಇದು ಮುಗಿಯುತ್ತದೋ ಇಲ್ಲವೋ ನೋಡೋಣ. ಪ್ರತಿ ಅಧಿವೇಶನದಲ್ಲಿ ನಮ್ಮ ಹಳ್ಳಿಗಳ ಬಗ್ಗೆ ಚರ್ಚೆ ಮಾಡುವುದೇ ಹೋಗಿಬಿಡುತ್ತದೆ...

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಕಡತಗಳನ್ನು ತರಿಸಿ ನೋಡಿ ಎಷ್ಟು ಚರ್ಚೆ ಮಾಡಿದ್ದೇವೆ ಎಂಬುದು ಗೊತ್ತಾಗುತ್ತದೆ..

(ಗೊಂದಲ)

ಶ್ರೀ ಎಸ್. ಎಸ್. ಪಾಟೀಲ್ : ತರಿಸಿ ನೋಡಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಇದಕ್ಕೆ ಎಷ್ಟು ಸಮಯ ಕೊಡುತ್ತಾರೆ..

ಶ್ರೀ ಎಸ್. ಎಸ್. ಪಾಟೀಲ್ : ಸುಮ್ಮನೆ ಮಾತನಾಡುವುದು ಬೇಡ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಬೆಂಗಳೂರಿನಲ್ಲಿ ಟ್ಯಾಕ್ಸ್ ಕಲೆಕ್ಟ್ ಮಾಡಿ ರಾಜ್ಯದ ಬೊಕ್ಕಸಕ್ಕೆ ಸುರೀತಿದ್ದೇವೆ.

ಶ್ರೀ ಎಸ್. ಎಸ್. ಪಾಟೀಲ್ : ಒಂದು ವಾರ ಕಾಲ ಬೆಂಗಳೂರಿನ ಬಗ್ಗೆ ಅಸೆಂಬ್ಲಿಯಲ್ಲಿ ಚರ್ಚೆ ಮಾಡಿಬಿಡಿ. ನಂತರ ಬೇರೆ ತೆಗೆದುಕೊಳ್ಳಿ. ಯಾವಾಗ ಚರ್ಚೆಗೆ ಬಂತು ಎಂದರೆ ಅದು ಯಾವುದಾದರೊಂದು ತೆಗೆದುಕೊಂಡು ಕುಳಿತುಬಿಡುವುದು. ಮೂರು ಮೂರು ದಿವಸ ಅಸೆಂಬ್ಲಿ ನಿಲ್ಲಿಸುವುದು. ಈ ರೀತಿ ಇಲ್ಲಿ ನಡೆಯುತ್ತಿದೆ. ರಾಜ್ಯದ ಸಮಸ್ಯೆ ಬಗ್ಗೆ ಸಮಗ್ರವಾಗಿ ಚರ್ಚೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಏನ್ರೀ ಇದು ಪಾಟೀಲ್‌ರೆ ದಯಮಾಡಿ ಕುಳಿತುಕೊಳ್ಳಿ. ನಾಯ್ಡು ರವರೇ, ಕುಳಿತುಕೊಳ್ಳಿ. ಇದೇನು ಅತಿ ಆಯಿತು ನಿಮ್ಮದು, ಎಷ್ಟು ಸಾರಿ ಹೇಳಿದರು ನಿಮ್ಮದು ಇಷ್ಟೇ. ಅವರು ಏನು ಹೆಳಿದರು ಅದಕ್ಕೆ ಅವರು ಉತ್ತರ ಹೇಳುತ್ತಾರೆ, ಪದೇ ಪದೇ ಈ ರೀತಿ ಜಗಳವಾಡಿದರೆ ಹೇಗೆ? ನನ್ನ ಅನುಮತಿ ತೆಗೆದುಕೊಳ್ಳದೆ ಯಾರೂ ನಿಂತುಕೊಳ್ಳಕೂಡದು,ಮಾತನಾಡ ಕೂಡದು, ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎ. ನಾರಾಯಣ ಸ್ವಾಮಿ : ರೈತರ ಭೂಮಿಯ ನೋಂದಾವಣೆ ವಿಚಾರದ ಬಗ್ಗೆ ನಾನು ಚರ್ಚೆಯನ್ನು ಮುಂದುವರಿಸುತ್ತಿದ್ದೇನೆ. ರಾಜ್ಯದ ಈ ಭೂಹಗರಣದ ಬಗ್ಗೆ ಚರ್ಚೆಯಾಗುತ್ತಿದೆ, ಆ ಭಾಗದ ಆಡಳಿತ ಪಕ್ಷದ ಒಬ್ಬ ಸದಸ್ಯರು ಸಿಬಿಐ ಗೆ ರೆಫರ್ ಮಾಡುತ್ತಿದ್ದಾರೆ. ಅದನ್ನು ಸ್ವಾಗತಿಸಬೇಕು. ಇಡೀ ರಾಜ್ಯದ ಭೂಹಗರಣದ ವಿಚಾರವನ್ನು ಸಿಬಿಐ ಗೆ ರೆಫರ್ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ ಇದು ಸ್ವಾಗತಾರ್ಹವಾದ ಸಂಗತಿ. ಬಹುಶಃ ನಾಲ್ಕು ವರ್ಷಗಳ ಹಿಂದೆ ರಾಜ್ಯ ಸರ್ಕಾರ ಒಂದು ಆದೇಶ ಮಾಡಿತು. ಈವತ್ತೇನು ಇಲ್ಲೀಗಲ್ ಬಡಾವಣೆಗಳು ಆಗಿವೆ, ಅನುಮತಿ ಇಲ್ಲ, ಬಿಡಿಎ ದವರು ಮಾಡಿದ್ದಾರೆಂದು ಹೇಳಿದ್ದಾರೆ. ರಾಜ್ಯ ಸರ್ಕಾರ ಹಿಂದೆ ಒಂದು ಆದೇಶ ಮಾಡಿತ್ತು. ಎಲ್ಲೆಲ್ಲಿ ಕಂದಾಯ ಬಡಾವಣೆಗಳು ಇವೆ, ಅದನ್ನು ಸಿಎಂಸಿ ಗಳು ರೆಗ್ಯುಲೇಟ್ ಮಾಡಿ ಹಣ ಕಟ್ಟಿಸಿಕೊಳ್ಳಬಹುದು, ರಾಜ್ಯ ಸರ್ಕಾರದ ಆದೇಶದ ಮೇಲೆ ಅನೇಕ ಸಿಎಂಸಿ ಗಳು ಆ ರೆವಿನ್ಯೂ ಬಡಾವಣೆಗಳು ಏನು ಇವೆ ಅವುಗಳನ್ನು ರೆಗ್ಯುಲರೈಸ್ ಮಾಡಿ ಹಣ ಪಡೆದು ಡೆವಲಪ್‌ಮೆಂಟ್ ಮಾಡಿತ್ತು. ಸನ್ಮಾನ್ಯ ನರೇಂದ್ರಬಾಬುರವರು ಈಗ ಮಾತನಾಡಿದರು. ಬಹುಶಃ ಬೆಂಗಳೂರು ಸುತ್ತುಮುತ್ತಲೂ ತಿಗಳ ಜನಾಂಗದವರು ಇದ್ದಾರೆ. ಆ ಜನಾಂಗದವರು ನೂರಕ್ಕೆ ತೊಂಬತ್ತೊಂಭತ್ತು ಪರ್ಸೆಂಟ್ ಕೃಷಿಕರು, ಯಾವುದೇ ಬಡಾವಣೆಗೆ ಹೋಗಿ, ಗ್ರಾಮಕ್ಕೆ ಹೋಗಿ, ಅವರು ಕೈ ತೋಟ ಮಾಡುವುದು ಒಂದು ಗುಂಟೆ, ಎರಡು ಗುಂಟೆ, ಮೂರು ಗುಂಟೆ, ಎಲ್ಲೆಲ್ಲಿ ವೆಟ್ ಲ್ಯಾಂಡ್ಸ್ ಇದೆ, ನೂರಕ್ಕೆ ತೊಂಭತ್ತು ಭಾಗ ಅವರ ಹತ್ತಿರ ಇರುವುದು ವೆಟ್ ಲ್ಯಾಂಡ್ಸೇ. ಎರಡು ಗುಂಟೆ, ನಾಲ್ಕು ಗುಂಟೆ, ಐದು ಗುಂಟೆ, ಹತ್ತು ಗುಂಟೆ, ಬೆಂಗಳೂರು ಮತ್ತು ಹೊರಗಡೆ ಇರುವ ಉತ್ತರ ಕರ್ನಾಟಕದಲ್ಲಿರತಕ್ಕಂಥ 50 ಎಕರೆ, ನೂರು ಎಕರೆ ಸಾವಿರ ಎಕರೆ ಇಲ್ಲ. ಅನೇಕ ಕಡು ಬಡವರು 5 ಗುಂಟೆ 10 ಗುಂಟೆ ಇರುವವರೇ, ಅವರ ಬಗ್ಗೆ ಚಿಂತನೆ ಮಾಡಬೇಕಲ್ಲಾ. ಪುರಸಭೆಯ ವ್ಯಾಪ್ತಿಯಲ್ಲಿರುವ ನಾಗರೀಕರು, ಗ್ರಾಮೀಣ ಪ್ರದೇಶದಲ್ಲಿ ಗ್ರಾಮಠಾಣದ ಮ್ಯಾಪ್ ಇದೆ, ಪ್ರತಿಯೊಂದು ಭೂಮಿಗೂ ಪ್ರಿಲಿಮಿನರಿ ರೆಕಾರ್ಡ್ ಇದೆ. ಆ ಪ್ರಿಲಿಮಿನರಿ ರೆಕಾರ್ಡ್‌ನ್ನು ಸ್ಟಡಿ ಮಾಡಿ, ಅದನ್ನು ತೆಗೆದುಕೊಂಡು ಆ ಬಗ್ಗೆ ಆದೇಶ ಮಾಡುವುದಕ್ಕೆ ಮೂರು ತಿಂಗಳ ಅವಶ್ಯಕತೆ ಇರಲಿಲ್ಲ. ಕಾರ್ಪೋರೇಷನ್ ಲಿಮಿಟ್ಸ್‌ಗೆ ಯಾವ್ಯಾವ ಬಡಾವಣೆಗಳು ಬರುತ್ತವೆಂದು ಕಾರ್ಪೋರೇಷನ್ ಡಿಕ್ಲೇರ್ ಮಾಡಿದ ಮೇಲೆ, ಅದಕ್ಕೆ ಕಡತ ನಿರ್ಮಾಣ ಮಾಡಿರತಕ್ಕಂಥ ಒಂದು ವರದಿಯನ್ನು ತರಿಸಿಕೊಂಡು ಆ ಜಿಲ್ಲೆಗೆ ಸಂಬಂಧಪಟ್ಟಂಥ ಆದೇಶವನ್ನು ತಾವು ಮಾಡಬಹುದಾಗಿತ್ತು. ಆದರೆ, ಇದುವರೆಗೂ ಮಾಡಲಿಲ್ಲ. ಈ ಬಗ್ಗೆ ಸನ್ಮಾನ್ಯ ಕಂದಾಯ ಮಂತ್ರಿಗಳನ್ನು ಕೇಳುವುದೇನೆಂದರೆ, ಇಡೀ ರಾಜ್ಯದಲ್ಲಿರತಕ್ಕಂಥ ಗ್ರಾಮಠಾಣ, ಪುರಸಭೆ ಅಥವಾ ನಗರಸಭೆ ಇರಬಹುದು. ಇವುಗಳಿಗೆ ಸಂಬಂಧಪಟ್ಟಂಥ ಏರಿಯಾಗಳ ಪ್ರಿಲಿಮಿನರಿ ರೆಕಾರ್ಡ್‌ಗಳನ್ನು ರಾಜ್ಯಸರ್ಕಾರ ಬಹಳ ಎಚ್ಚರಿಕೆಯಿಂದ ಈ ಒಂದು ಆಸ್ತಿಯನ್ನು ಪ್ರಿಸರ್ವ್ ಮಾಡತಕ್ಕಂಥ ಜವಾಬ್ದಾರಿ ಇದೆ. ಅದನ್ನು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಡೀ ರಾಜ್ಯದಲ್ಲಿ ಭೂ ಪರಿವರ್ತನೆ ನಿಲ್ಲಿಸಲಾಗಿದೆ ಎಂದು ಮತ್ತೊಂದು ಆದೇಶ ಬಂತು. ಬಿ.ಡಿ.ಎ.ರವರು ಅರ್ಕಾವತಿ ಲೇಔಟ್‌ನಲ್ಲಿ ಒಂದು ನಿವೇಶನ ಕೊಡುವುದಕ್ಕೆ ಆಗಲಿಲ್ಲ. ನಾಲ್ಕೈದು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಬಿ.ಡಿ.ಎ. ಸಂಸ್ಥೆ ಇದೆಯೇ ಎಂಬುದು ಯಾರಿಗೂ ಸಹ ಗೊತ್ತಿರಲಿಲ್ಲ. ಅವತ್ತಿನ ದಿವಸ ಬಿ.ಡಿ.ಎ. ಮುಳುಗಿ ಹೋಗುತ್ತಿತ್ತು. ಆದರೆ, ಈ ಭಾಗದ ಜನತೆಗೆ ನಿವೇಶನ ಮತ್ತು ಸೂರು ಕೊಡಬೇಕೆಂದು ಅನೇಕರು ನಿವೇಶನಗಳನ್ನು ರಚನೆ ಮಾಡಿದರು. ಇದರಲ್ಲಿ 20–30 ಪರ್ಸೆಂಟ್‌ನಷ್ಟು ಇಲ್ಲೀಗಲ್ ಆಗಿ ಬಡಾವಣೆಗಳನ್ನು ಮಾಡಿದ್ದಾರೆ, ಪ್ರತಿಯೊಂದು

ಗ್ರಾಮಪಂಚಾಯತ್‌ಗೆ ಸುಮಾರು 10–15 ಹಳ್ಳಿಗಳು ಬರುತ್ತವೆ. ಇದಕ್ಕೆ ವಿಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್ ಇರುತ್ತಾರೆ. ಮತ್ತೆ ಇವರ ಮೇಲೆ ಸೂಪರ್‌ವೈಜ್ ಮಾಡುವುದಕ್ಕೋಸ್ಕರ ಶಿರಸ್ತೇದಾರ್ ಮತ್ತು ತಹಸೀಲ್ದಾರ್ ಇರುತ್ತಾರೆ. ಯಾವುದೇ ಒಂದು ಸರ್ಕಾರಿ ಭೂಮಿ ಅಥವಾ ಕಂದಾಯ ಭೂಮಿಯಲ್ಲಿ ಅಕ್ರಮ ಬಡಾವಣೆಗಳು ನಿರ್ಮಾಣ ಆಗುತ್ತಿದೆ ಎಂದರೆ, ಅಲ್ಲಿರತಕ್ಕಂಥ ರೆವಿನ್ಯೂ ಇನ್ಸ್‌ಪೆಕ್ಟರ್‌ರವರು ಏನು ಕೆಲಸ ಮಾಡುತ್ತಿರುತ್ತಾರೆ? ಅವರೇನು ಗ್ರಾಮಪಂಚಾಯತ್‌ಗೆ ಹೋಗುವುದಿಲ್ಲವೆ? ಆ ಗ್ರಾಮದ ಜನತೆ ಅಥವಾ ರೈತರ ಮನೆ ಬಾಗಿಲಿಗೆ ಹೋಗುವುದಿಲ್ಲವೇ? ಇವರು ಅಲ್ಲಿಗೆ ಹೋಗಿದ್ದಾಗ ಅವರಿಗೆ ಈ ರೀತಿ ಆಗುತ್ತಿರುವುದು ಗೊತ್ತಾಗಲಿಲ್ಲವೇ ಅಥವಾ ಇದನ್ನು ಏಕೆ ರಿಪೋರ್ಟ್ ಮಾಡಲಿಲ್ಲ? ಇಂಥ ಅಧಿಕಾರಿಗಳ ಮೇಲೆ ತಾವೇಕೆ ಕ್ರಮ ತೆಗೆದುಕೊಂಡಿಲ್ಲ ಎಂದು ನಾನು ರಾಜ್ಯ ಸರ್ಕಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಎರಡು–ಮೂರು ವರ್ಷಗಳಿಂದ ಎಲ್ಲಾ ಕಡೆ ಕಂಪ್ಯೂಟರ್ ವ್ಯವಸ್ಥೆ ಮಾಡಲಾಗಿದೆ. ಇದರಿಂದ ಇವತ್ತಿನ ದಿವಸ ಗ್ರಾಮಪಂಚಾಯತ್‌ನಲ್ಲಿ ಕುಳಿತುಕೊಂಡು ಇಡೀ ರಾಜ್ಯದ ಮತ್ತು ಇಡೀ ರಾಷ್ಟ್ರದ ಅಭಿವೃದ್ಧಿಯನ್ನು ನೋಡಬಹುದಾಗಿದೆ. ಇಷ್ಟಿದ್ದರೂ ಕೂಡ ನಾಲ್ಕೈದು ತಿಂಗಳಿಂದ ಚರ್ಚೆ ನಡೆಯುತ್ತಿದೆ. ಕಂದಾಯ ಭೂಮಿ ಮತ್ತು ಗ್ರಾಮಠಾಣ ಭೂಮಿಗಳಿಗೆ ನೋಂದಣಿ ಮಾಡಿಕೊಳ್ಳುವುದಕ್ಕೆ ಆದಷ್ಟು ಜರೂರಾಗಿ ಅವಕಾಶ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ. ಈಗ ಭೂ ಪರಿವರ್ತನೆ ಕೆಲಸ ನಿಲ್ಲಿಸಿದ್ದಾರೆ. ಕಳೆದ ಮೂರು ತಿಂಗಳಿಂದ ಭೂ ಪರಿವರ್ತನೆ ಕೆಲಸ ಆಗುತ್ತಿಲ್ಲ. ಭೂ ಪರಿವರ್ತನೆ ಮಾಡಿಕೊಳ್ಳಬೇಕಾದರೆ ಏನು ಮಾಡಬೇಕೆಂದು ಸರ್ಕಾರ ಒಂದು ಆದೇಶವನ್ನು ಪ್ರಿಂಟ್ ಮಾಡಿಸಿದೆ. ಇವತ್ತಿನ ದಿವಸ ಭೂ ಪರಿವರ್ತನೆ ಮಾಡಿಕೊಳ್ಳಬೇಕಾದರೆ 12 ಇಲಾಖೆಗೆ ಹೋಗಬೇಕಾಗಿದೆ. ಒಂದು ಎಕರೆ ಭೂಮಿಯನ್ನು ಭೂ ಪರಿವರ್ತನೆ ಮಾಡಬೇಕಾದರೆ ಎರಡು ಲಕ್ಷ ರೂಪಾಯಿ ಲಂಚ ಕೊಡಬೇಕಾಗಿದೆ. ಯಾವ ರೈತ ತನ್ನ ಭೂಮಿಯಲ್ಲಿ ಸ್ವಂತ ಮನೆ ಕಟ್ಟಿಕೊಳ್ಳುವುದಕ್ಕೆ ಅಥವಾ ಸಂಕಷ್ಟದಲ್ಲಿದ್ದಾಗ ಮಾರಬೇಕಾದರೆ ಇವತ್ತಿನ ದಿವಸ ಆತ ಭೂ ಪರಿವರ್ತನೆ ಮಾಡಿಸಬೇಕಾದರೆ ಎರಡು ಲಕ್ಷ ರೂಪಾಯಿಗಳಷ್ಟು ಲಂಚ ಕೊಡಬೇಕಾಗಿದೆ. ಎರಡು ಲಕ್ಷ ರೂಪಾಯಿ ಕೊಡದಿದ್ದರೆ ಭೂ ಪರಿವರ್ತನೆ ಕೆಲಸ ಆಗುವುದಿಲ್ಲ. ಇವತ್ತಿನ ದಿವಸ ಯಾರೊಬ್ಬ ಮಧ್ಯವರ್ತಿಗೆ ಅರ್ಧ ಭಾಗ ಭೂಮಿ ಕೊಟ್ಟು ಭೂ ಪರಿವರ್ತನೆ ಮಾಡಿಸಿಕೊಳ್ಳತಕ್ಕಂಥ ಪರಿಸ್ಥಿತಿ ಈ ರಾಜ್ಯದಲ್ಲಿದೆ. ಇವತ್ತಿನ ದಿವಸ ಭೂ ಪರಿವರ್ತನೆ ಆಗಬೇಕಾದರೆ ಒಂದು ಅರ್ಜಿ ಬಿ.ಡಿ.ಎ.ಗೆ ಹೋಗಬೇಕು. ಮತ್ತೆ ಬಿಡಿಎ ರವರ ಅನುಮತಿ ಪಡೆಯಬೇಕು. ಮತ್ತೆ ಬಿ.ಎಂ.ಆರ್.ಡಿ. ಅನುಮತಿ ಪಡೆಯಬೇಕು. ಹಾಗೆಯೇ ಏರ್‌ಪೋರ್ಟ್ ಅಥಾರಿಟಿಯ ಅನುಮತಿ ಪಡೆಯಬೇಕು. ಮತ್ತೆ ಡಿಸ್ಟ್ರಿಕ್ಟ್ ರಿಜಿಸ್ಟಾರ್‌ರವರ ಅನುಮತಿ ಪಡೆಯಬೇಕು. ಮತ್ತೆ ಹೆಲ್ತ್ ಆಫೀಸರ್‌ರವರ ಅನುಮತಿ ಪಡೆಯಬೇಕು. ಮತ್ತೆ ಪಲ್ಯೂಷನ್ ಕಂಟ್ರೋಲ್ ಇಲಾಖೆಯವರ ಅನುಮತಿ ಪಡೆಯಬೇಕು. ಮತ್ತೆ ವಾಟರ್ ಸಪ್ಲೈ ಹಾಗೂ ಕೆ.ಪಿ.ಟಿ.ಸಿ.ಎಲ್. ರವರ ಅನುಮತಿ ಪಡೆಯಬೇಕು. ಮತ್ತೆ ಫೈರ್ ಸ್ಟೇಷನ್‌ರವರಿಂದ ಅನುಮತಿ ಪಡೆಯಬೇಕು. ಮತ್ತೆ ಪಂಚಾಯತಿ, ಸಿ.ಎಂ.ಸಿ.ಯಿಂದ ಅನುಮತಿ ಪಡೆಯಬೇಕು. ಅಂದರೆ, ಭೂ ಪರಿವರ್ತನೆ ಮಾಡಿಕೊಳ್ಳುವುದಕ್ಕೆ ಒಟ್ಟು 12 ಅರ್ಜಿಗಳನ್ನು ಕೊಡಬೇಕು. ಬೆಂಗಳೂರು ಜಿಲ್ಲೆಯಲ್ಲಿ ನಾಲ್ಕೈದು ವರ್ಷಗಳಿಂದ ಬಿ.ಎಂ.ಆರ್.ಡಿ. ಇದೆ. ಒಂದು ಎಕರೆ ಭೂಮಿಗೆ ಭೂ ಪರಿವರ್ತನೆ ಮಾಡುವುದಕ್ಕೆ ಇದಕ್ಕೆ ಸಂಬಂಧಪಟ್ಟಂಥ ಪ್ಲಾನ್ ಅಪ್ರೊವಲ್ ಮಾಡುವುದಕ್ಕೆ ಬಿಎಂಆರ್.ಡಿರವರು 40 ಸಾವಿರ ರೂಪಾಯಿ ತೆಗೆದುಕೊಂಡಿದ್ದಾರೆ. ಸಾವಿರಾರು ಎಕರೆ ಭೂ ಪರಿವರ್ತನೆ ಆಗಿದೆ. ಇವತ್ತಿನದಿವಸ ಬಿಎಂಆರ್‌ಡಿ ಯಲ್ಲಿ ಹಣ ಇದೆ. ಆದರೆ,

ನಾಲ್ಕೈದು ವರ್ಷಗಳಿಂದ ಬಿಎಂಆರ್‌ಡಿ ರವರ ಹತ್ತಿರ ಬ್ಲೂ ಪ್ರಿಂಟ್ ಇಲ್ಲ. ಬೆಂಗಳೂರು ಅಭಿವೃದ್ಧಿ ಆಗಬೇಕಾದರೆ ರಿಂಗ್ ರೋಡ್‌ನ ಅವಶ್ಯಕತೆ ಇದೆ. ಇವತ್ತಿನದಿವಸ ಬೆಂಗಳೂರು ಇಲ್ಲೀಗಲ್ ಆಗಿ ಯಾವ ರೀತಿಯಾಗಿ ಅಭಿವೃದ್ಧಿಯಾಗುತ್ತಿದೆ ಎಂಬುದರ ಬಗ್ಗೆ ಎಲ್ಲರೂ ಕೂಡ ಚರ್ಚೆ ಮಾಡುತ್ತಿದ್ದಾರೆ. ಇವತ್ತಿನದಿವಸ ಬಿ.ಎಂ.ಆರ್.ಡಿ.ಯಲ್ಲಿ ಹಣ ಇದೆ, ಮೂಲಭೂತ ಸೌಕರ್ಯಗಳಿವೆ ಮತ್ತು ಸಿಬ್ಬಂದಿಯೆಲ್ಲಾ ಕೊಟ್ಟಿದ್ದೇವೆ. ಆದರೆ, ಇವತ್ತಿನವರೆಗೆ ಬಿ.ಎಂ.ಆರ್.ಡಿ.ಗೆ ಒಂದು ಬ್ಲೂ ಪ್ರಿಂಟ್ ಇಲ್ಲ. ಇದಕ್ಕೆ ಸಂಬಂಧಪಟ್ಟಂತೆ ಒಬ್ಬ ಐ.ಎ.ಎಸ್. ಅಧಿಕಾರಿಗೆ ಜವಾಬ್ದಾರಿ ಕೊಟ್ಟಿದ್ದೇವೆ. ಮತ್ತೆ ಇದಕ್ಕೊಬ್ಬರು ಮಂತ್ರಿಗಳಿದ್ದಾರೆ ಮತ್ತು ಒಂದು ಸರ್ಕಾರ ಕೂಡ ಇದೆ. ಯಾವತ್ತಾದರೂ ಇವರು ಬೆಂಗಳೂರಿನ ಬಗ್ಗೆ ಚಿಂತನೆ ಮಾಡಿದ್ದಾರೆಯೇ? ಮತ್ತೆ ಬಿ.ಎಂ.ಆರ್.ಡಿ.ಯ ಅವಶ್ಯಕತೆ ಏನಿತ್ತು? ಮತ್ತೆ ಬಿ.ಡಿ.ಎ.ರವರ ಅಪ್ರೋವಲ್ ಏತಕ್ಕೆ ತೆಗೆದುಕೊಳ್ಳಬೇಕು? ಇವತ್ತಿನದಿವಸ ಆನೇಕಲ್ ತಾಲ್ಲೂಕಿನ ಮೂಲೆಯ ಭಾಗಕ್ಕೆ ಬಿ.ಎಂ.ಆರ್.ಡಿ. ಏನು ಸಂಬಂಧ? ಬಿ.ಡಿ.ಎ. ಲಿಮಿಟ್ಸ್‌ನಲ್ಲಿರತಕ್ಕಂಥ ಜಾಗಕ್ಕೂ ಕೂಡ ಬಿ.ಎಂ.ಆರ್.ಡಿ.ಗೆ ಅರ್ಜಿ ಹಾಕಬೇಕೇ? 40 ಕಿ.ಮೀ.ದೂರದಲ್ಲಿರತಕ್ಕಂಥ ಗ್ರಾಮಠಾಣಕ್ಕೆ ಸೇರಿರತಕ್ಕಂಥ ರೈತ ಭೂ ಪರಿವರ್ತನೆಗೋಸ್ಕರ ಬಿ.ಎಂ.ಆರ್.ಡಿ.ಗೆ ಏಕೆ ಅರ್ಜಿ ಕೊಡಬೇಕಾಗಿದೆ? ಇವತ್ತಿನದಿವಸ 50 ಅಥವಾ 100 ಎಕರೆ ಜಮೀನಿಗೆ ಭೂ ಪರಿವರ್ತನೆ ಮಾಡಿಕೊಳ್ಳುವುದಕ್ಕೋಸ್ಕರ ಬಿ.ಎಂ.ಆರ್.ಡಿ.ಗೆ ಅರ್ಜಿ ಹಾಕಿಕೊಳ್ಳಲಿ. ಆದರೆ, ಎರಡು ಅಥವಾ 5 ಗುಂಟೆ ಅಥವಾ 1, 2 ಎಕರೆ ಜಮೀನಿಗೆ ಬಿ.ಎಂ.ಆರ್.ಡಿ.ಯಿಂದ ಎನ್.ಓ.ಸಿ. ತೆಗೆದುಕೊಳ್ಳತಕ್ಕಂಥ ಅವಶ್ಯಕತೆ ಇದೆಯೇ? ಇವತ್ತಿನದಿವಸ ಯಾವುದೇ ಸರ್ಕಾರವಾಗಲಿ ಅಥವಾ ಅಧಿಕಾರಿ ಆದೇಶ ಮಾಡಬೇಕಾದರೆ ಅವಶ್ಯಕತೆ ಇದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಚಿಂತನೆ ಮಾಡಬೇಕಲ್ಲವೇ? ಇವತ್ತಿನದಿವಸ ಹೆಲ್ತ್ ಆಫೀಸರ್‌ನ ಅವಶ್ಯಕತೆ ಇದರಲ್ಲಿ ಏನಿದೆ. ಆದರೆ, ಕೆ.ಪಿ.ಟಿ.ಸಿ.ಎಲ್.ನ ಅವಶ್ಯಕತೆ ಇದೆ. 1, 2 ಎಕರೆ ಭೂ ಪರಿವರ್ತನೆ ಮಾಡಿಸಬೇಕಾದರೆ ಬೆಂಗಳೂರು ವಾಟರ್ ಸಪ್ಲೈನ ಪರ್ಮಿಷನ್ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇವತ್ತಿನ ದಿವಸ ಬೆಂಗಳೂರು ವಾಟರ್ ಸಪ್ಲೈನವರು ಸಿ.ಎಂ.ಸಿ. ವ್ಯಾಪ್ತಿಯ ಪ್ರದೇಶಗಳಿಗೆ ನೀರು ಕೊಡುವುದಕ್ಕೆ ಆಗುತ್ತಿಲ್ಲ. ಕೆಡಬ್ಲೂಎಸ್‌ಎಸ್‌ಬಿ ಯವರು ನಗರಕ್ಕೆ ನೀರು ಕೊಡುವುದಕ್ಕೆ ಆಗುತ್ತಿಲ್ಲ. ಈ ರೀತಿಯಿರುವಾಗ ಒಂದೆರಡು ಎಕರೆಗೆ ಇವರು ಹೋಗಿ ನೀರು ಕೊಡುವುದಕ್ಕೆ ಆಗುತ್ತದೆಯೆ? ಆದ್ದರಿಂದ, ನಾನು ಕೇಳಿಕೊಳ್ಳುವುದೇನೆಂದರೆ, ಭೂ ಪರಿವರ್ತನೆಗೆ 12 ಇಲಾಖೆಗಳಿಂದ ಎನ್.ಓ.ಸಿ. ಪಡೆದುಕೊಳ್ಳಬೇಕೆಂದು ಏನು ಆದೇಶ ಮಾಡಿದ್ದೀರಿ ಅದನ್ನು ಸರಳೀಕರಣ ಮಾಡುವುದಕ್ಕೋಸ್ಕರ ಪುನರ್ ಪರಿಶೀಲನೆ ಮಾಡಬೇಕೆಂದು ನಾನು ಮಾನ್ಯ ಮಂತ್ರಿಯವರಲ್ಲಿ ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಸರ್ಕಾರದವರು ಇನ್ನೊಂದು ಆದೇಶವನ್ನು ಮಾಡಿದ್ದಾರೆ. ಅದೇನೆಂದರೆ, ಬೆಂಗಳೂರು ನಗರ ಜಿಲ್ಲೆಯಲ್ಲಿ ನಾಲ್ಕು ಸಾವಿರ ಎಕರೆಯಷ್ಟು ಭೂ ಪರಿವರ್ತನೆಯಾಗಿದೆ. ಮತ್ತೆ ನಿಮ್ಮ ಭೂಮಿಗೆ ಭೂ ಪರಿವರ್ತನೆ ಮಾಡಲಾಗಿದೆ. ಆದ್ದರಿಂದ ನೀವು ಹಣ ಕಟ್ಟಬಹುದೆಂದು ಆದೇಶ ಕೊಟ್ಟರು. ಅವರು ಹಣ ಕಟ್ಟುವುದಕ್ಕೆ ತಾಲ್ಲೂಕು ಕಛೇರಿಯಿಂದ ಚಲನ್ ತೆಗೆದುಕೊಂಡರು. ಮತ್ತೆ ಇದಕ್ಕೆ ಸಬ್ ರಿಜಿಸ್ಟ್ರಾರ್ ಹತ್ತಿರ ಸಹಿ ತೆಗೆದುಕೊಂಡರು. ಅನಂತರ ಬ್ಯಾಂಕ್‌ಗೆ ಹೋಗಿ ಹಣ ಕಟ್ಟಿದರು. ಹಣ ಕಟ್ಟಿ 60 ದಿವಸಗಳಾಗಿವೆ. ಭೂ ಪರಿವರ್ತನೆಯಾಗಿದೆ ಎಂದು ಸರ್ಕಾರ ಆದೇಶ ಮಾಡಿದಮೇಲೆ ಬ್ಯಾಂಕ್‌ಗೆ ಹೋಗಿ ಹಣ ಕಟ್ಟಿದ್ದಾರೆ. ಹಣ ಕಟ್ಟಿರತಕ್ಕಂಥ ಚಲನ್ ತೆಗೆದುಕೊಂಡು ಡಿಸಿಮತ್ತು ಎಸಿ ಗಳಿಗೆ ಕೊಟ್ಟರೆ ಇದಕ್ಕೆ ಸರ್ಕಾರದ ಆದೇಶ ಇದೆ. ನೀವು ಹಣ ಕಟ್ಟಿರಬಹುದು ಮತ್ತೆ ನಿಮ್ಮ ಎಲ್ಲಾ ಅರ್ಜಿಗಳು ಸರಿಯಾಗಿವೆ ಹಾಗೆಯೇ ಭೂಪರಿವರ್ತನೆ

ಕೂಡ ಮಾಡಿದ್ದೇವೆ ಇದಕ್ಕೆ ನೀವು ಹಣ ಕೂಡ ಕಟ್ಟಿದ್ದೀರಿ. ಆದರೆ, ನಾವು ಓ.ಎಂ. ಕೊಡುವುದಿಲ್ಲ. ಏಕೆಂದರೆ ಇದಕ್ಕೆ ಸರ್ಕಾರದಿಂದ ಆದೇಶ ಬರಬೇಕೆಂದು ಹೇಳುತ್ತಿದ್ದಾರೆ. ಆದರೆ, ಇವತ್ತಿನ ದಿವಸ ಯಾರೊಬ್ಬ ಡೆವಲಪರ್ಸ್‌ದ್ದು 50–100 ಎಕರೆ ಜಮೀನು ಯಾವರೀತಿಯಾಗಿ ಭೂ ಪರಿವರ್ತನೆ ಆಗುತ್ತದೆ ಎಂಬುದು ಗೊತ್ತಿದೆ. ಆದರೆ, ಇವತ್ತಿನ ದಿವಸ 1–2 ಎಕರೆ ಅಥವಾ ನಾಲ್ಕು ಗುಂಟೆ ಜಮೀನು ಹೊಂದಿರತಕ್ಕಂಥ ರೈತ ಭೂ ಪರಿವರ್ತನೆಗೆ ಅರ್ಜಿ ಹಾಕಿ ಎರಡು ತಿಂಗಳು ಅಲೆದು ಇದಕ್ಕೆ ಎರಡು ಲಕ್ಷ ರೂಪಾಯಿ ಲಂಚ ಕೊಟ್ಟು ಡಿಸಿ ಮತ್ತು ಎ.ಸಿ. ಆಫೀಸ್‌ಗೆ ತಿರುಗುತ್ತಿದ್ದರೂ ಕೂಡ ಸರ್ಕಾರ ಆದೇಶ ಮಾಡಿಲ್ಲ ಆದ್ದರಿಂದ ನಾವು ಓ.ಎಂ. ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಸನ್ಮಾನ್ಯ ಕಂದಾಯ ಮಂತ್ರಿಗಳು ಯೋಚನೆ ಮಾಡಬೇಕು. ಭೂ ಪರಿವರ್ತನೆಗೆ ಯಾವ್ಯಾವ ಮಾಹಿತಿಗಳನ್ನು ಪರಿಶೀಲನೆ ಮಾಡಬೇಕಾಗಿದೆಯೋ ಮತ್ತು ಯಾವ್ಯಾವ ಅರ್ಜಿಗಳನ್ನು ಇದಕ್ಕಾಗಿ ಕೊಡಬೇಕಾಗಿದೆಯೋ ಆ ಎಲ್ಲ ಅರ್ಜಿಗಳ ಆಧಾರ ಮೇಲೆ ಈಗಾಗಲೇ ಭೂ ಪರಿವರ್ತನೆ ಕೆಲಸ ಆಗಿದೆ. ಇದಕ್ಕೆ ಅವರು ಹಣ ಕೂಡ ಕಟ್ಟಿದ್ದಾರೆ. ಇದಕ್ಕಾಗಿ ಹಣ ಕಟ್ಟಿರತಕ್ಕಂಥ ರೈತನಿಗೆ ಆ ಒಂದು ಆದೇಶವನ್ನು ಕೊಡುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಸನ್ಮಾನ್ಯ ಕಂದಾಯ ಮಂತ್ರಿಗಳನ್ನು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ. ಮತ್ತೆ ಈ ರಾಜ್ಯದಲ್ಲಿ ಆಗಿರತಕ್ಕಂಥ ಭೂ ಹಗರಣದ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಿದೆ. ನನ್ನ ಕ್ಷೇತ್ರದಲ್ಲಿರತಕ್ಕಂಥ ವಿಚಾರದ ಬಗ್ಗೆ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಚೆಪಡುತ್ತೇನೆ. ಇಲ್ಲಿಂದ ಕೇವಲ 18 ಕಿ.ಮೀ. ದೂರದಲ್ಲಿರತಕ್ಕಂಥ ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್ ಪಕ್ಕದಲ್ಲಿರುವ ಒಂದು ಜಾಗವನ್ನು ಕೆ.ಕೆ.ಶರೀಫ್ ವ್ಯಕ್ತಿ ಒಂದು ಎಕರೆ ಜಮೀನನ್ನು ಆಗ 25 ಪೈಸೆಗೆ ಹರಾಜಿನಲ್ಲಿ ತೆಗೆದುಕೊಂಡಿದ್ದರು. ಇವತ್ತು ಆ ಜಮೀನಿಗೆ ಒಂದು ಕೋಟಿ ರೂಪಾಯಿ ಬೆಲೆ ಆಗುತ್ತದೆ. 40 ವರ್ಷಗಳ ಹಿಂದೆ ತೆಗೆದುಕೊಂಡಿರತಕ್ಕಂಥ ಈ ಎರಡು ಸಾವಿರ ಎಕರೆ ಭೂಮಿಯಲ್ಲಿ ಸರ್ಕಾರದ ಭೂಮಿ 500 ಎಕರೆ ಇದೆ. ಈ ಸ್ಥಳಕ್ಕೆ ಜಿಲ್ಲಾಧಿಕಾರಿಗಳನ್ನು ಕರೆದುಕೊಂಡು ಹೋಗಿದ್ದೇನೆ. ಮತ್ತೆ ಎ.ಸಿ.ಯವರಿಗೆ ರಿಪೋರ್ಟ್ ಮಾಡಿದ್ದೇವೆ. ನನಗೆ ನೋವಾಗಿರತಕ್ಕಂಥ ವಿಚಾರ ಏನೆಂದರೆ, ಆನೇಕಲ್ ತಾಲ್ಲೂಕಿನಲ್ಲಿ ಎರಡು ಸಾವಿರ ಎಕರೆ ಸರ್ಕಾರಿ ಭೂಮಿಯನ್ನು ಕಬಳಿಸಿದ್ದಾರೆ. ಮತ್ತೆ ಇದಕ್ಕೆ ಅಕ್ರಮ ಖಾತೆಗಳಾಗಿವೆ. ಇದಕ್ಕೆ ಸಂಬಂಧಪಟ್ಟಂತೆ ಕೋರ್ಟ್‌ನಲ್ಲಿ 27 ಕೇಸ್‌ಗಳಿವೆ. ನಾನು ಒಂದು ಸಾರಿ ಪ್ರಧಾನ ಕಾರ್ಯದರ್ಶಿಯವರ ಹತ್ತಿರ ಹೋಗಿ, ಇದು ನಮ್ಮ ಆಸ್ತಿ, ಈ ಆಸ್ತಿಯನ್ನು ಉಳಿಸತಕ್ಕಂಥ ಜವಾಬ್ದಾರಿ ನಮ್ಮ ಮೇಲಿದೆ. ಆದ್ದರಿಂದ, ಇದರ ಬಗ್ಗೆ ದಯವಿಟ್ಟು ತನಿಖೆ ಆಗಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಂಡೆ. ಇದ್ಯಾವುದು ಎರಡು ಸಾವಿರ ಎಕರೆ, ಇವತ್ತಿನ ದಿವಸ ಎರಡು ಲಕ್ಷ ಎಕರೆಯಷ್ಟು ಈ ರೀತಿ ಆಗಿದೆ, ಆದ್ದರಿಂದ ನಾನೇನು ಮಾಡುವುದಕ್ಕೆ ಆಗುತ್ತದೆ ಎಂದು ಹೇಳಿದರು. ಒಬ್ಬ ಪ್ರಧಾನ ಕಾರ್ಯದರ್ಶಿ, ಐ.ಎ.ಎಸ್. ಅಧಿಕಾರಿ ಈ ರಾಜ್ಯದ ಆಡಳಿತವನ್ನು ಸಮರ್ಥವಾಗಿ ನಡೆಸುತ್ತಾರೆಂದುಯಾವ ರಾಜಕೀಯ ಪಕ್ಷ ಆಡಳಿತವನ್ನು ಸಮರ್ಥವಾಗಿ ನಡೆಸುತ್ತಾರೆಂದು ಯಾವ ರಾಜಕೀಯ ಪಕ್ಷ ಆಡಳಿತ ಚುಕ್ಕಾಣಿಯನ್ನು ಹಿಡಿದು ಸರ್ಕಾರ ನಡೆಸುತ್ತಿದ್ದಾರೆ ಅವರಿಗೆ ಗೌರವ ತರುವುದಕ್ಕೋಸ್ಕರ ಒಬ್ಬ ಅಧಿಕಾರಿ ಹೇಳತಕ್ಕಂಥ ಮಾತು ಇದೆಯೆ? ಇದರಿಂದ ನನಗೆ ಬಹಳ ನೋವಾಯಿತು. ಮತ್ತೊಬ್ಬ ಜಿಲ್ಲಾಧಿಕಾರಿಯನ್ನು ನಾನು ಸ್ಥಳಕ್ಕೆ ಕರೆದುಕೊಂಡು ಹೋಗಿದ್ದೇನೆ. ಈ ಭೂಮಿ ಬಗ್ಗೆ ಒಂದು ಸರ್ವೆ ಮಾಡಿಸಿ, ಇದರಲ್ಲಿ ಯಾವುದು ಫಾರೆಸ್ಟ್ ಲ್ಯಾಂಡ್, ಮತ್ತು ಆತನ ಲ್ಯಾಂಡ್ ಯಾವುದು, ಮತ್ತೆ ಇದರಲ್ಲಿ ಸರ್ಕಾರಿ ಭೂಮಿ ಎಲ್ಲಿದೆ? ಕೆರೆ ಎಲ್ಲಿದೆ, ಗುಂಡುತೋಪು ಎಲ್ಲಿದೆ, ಸ್ಮಶಾನ ಎಲ್ಲಿದೆ ಎಂಬುದನ್ನು ಸರ್ವೆ

ಮಾಡಿ ನಮ್ಮ ಜಾಗವನ್ನು ನಾವು ತೆಗೆದುಕೊಳ್ಳೋಣ ಎಂದು ಹೇಳಿದ್ದಕ್ಕೆ ಅವರು ಏನು ಹೇಳಿದರೆಂದರೆ, ನೀವು ಅಳತೆ ಮಾಡಿಸುವಷ್ಟು ಹೊತ್ತಿಗೆ ನಾನು ಕುರ್ಚಿಯಲ್ಲಿ ಇರುತ್ತೇನೆಯೋ ಅಥವಾ ಇಲ್ಲವೋ ಎಂದು ಜಿಲ್ಲಾಧಿಕಾರಿಗಳು ಹೇಳುತ್ತಾರೆ. ಆ ಭಾಗದ ರೈತರು ಅಲ್ಲಿಗೆ ಬಂದು ನಮಗೆ ಸ್ಮಶಾನ ಇಲ್ಲ ಆದ್ದರಿಂದ ಸರ್ವೆ ಮಾಡಿ ಇದಕ್ಕಾಗಿ ಜಾಗ ಕೊಡಿ ಎಂದು ಕೇಳಿದ್ದಕ್ಕೆ ಅವರು ಏನು ಹೇಳುತ್ತಾರೆಂದರೆ, ನಾಳೆದಿವಸ ಇಲ್ಲಿಗೆ ಇನ್ಸ್‌ಪೆಕ್ಷನ್ ಬರುವ ಹೊತ್ತಿಗೆ ನಾನು ಇಲ್ಲಿ ಇರುತ್ತೇನೆಯೋ ಅಥವಾ ಇಲ್ಲವೋ ಎಂದು ಹೇಳಿದರು. ಅವರು ಹೇಳಿದ ರೀತಿಯಲ್ಲಿಯೇ ಆಯಿತು. 15 ದಿನಗಳಲ್ಲಿ ಆ ಜಿಲ್ಲಾಧಿಕಾರಿಗಳು ವರ್ಗಾವಣೆ ಆದರು. ನನ್ನ ಕ್ಷೇತ್ರದಲ್ಲಿ ಸರ್ವೆ ನಂಬರ್ 97ರಲ್ಲಿ ಕಲ್‌ಬಾಳು ಎಂದು ಇದೆ. ನಾನು ಕಳೆದ ಒಂದು ವರ್ಷದಿಂದ ತಹಶೀಲ್ದಾರ್‌ಗೆ ಕಂಪ್ಲೇಂಟ್ ಮಾಡಿದೆ, ಭೂ ಮಂಜೂರಾತಿ ಕಡತಗಳು ತಾಲ್ಲೂಕು ಕಛೇರಿಯಲ್ಲಿ ಇಲ್ಲ, ಇದಕ್ಕೆ ಇಮ್ಮೀಡಿಯೇಟ್ ತನಿಖೆಯಾಗಬೇಕು. ಇಲ್ಲದಿದ್ದರೆ ಅಕ್ರಮ ದಾಖಲೆಗಳು ಆಗಿ ಹೋಗಿ ಬಿಡುತ್ತದೆ. ಸರ್ಕಾರಿ ಭೂಮಿಗಳನ್ನು ಖಾತೆ ಮಾಡಿಕೊಂಡು ಮಾರಾಟ ಮಾಡಿಬಿಡುತ್ತಾರೆ. ತಹಶೀಲ್ದಾರ್, ಎ.ಸಿ. ಡಿ.ಸಿ.ಯವರಿಗೆ ಆಗ ಸ್ಪೀಕರ್‌ವರಿಗೂ ಒಂದು ಅರ್ಜಿಯನ್ನು ಕಳುಹಿಸಿಕೊಟ್ಟಿದ್ದೆ. ಸನ್ಮಾನ್ಯ ಎಂ.ವಿ.ವೆಂಕಟಪ್ಪನವರು ಅಧ್ಯಕ್ಷರಾಗಿದ್ದಾಗ ಹಿಂದಿನ ಅವಧಿಯಲ್ಲಿ. 8–10 ವರ್ಷವಾದ ಮೇಲೆ 25–30 ದಿನಗಳಲ್ಲಿ ಕೇಸ್ ಆಗಿ ಸಸ್ಪೆಂಡ್ ಮಾಡಿದ್ದಾರೆ. ಕಲ್‌ಬಾಳು ಸರ್ವೆ ನಂಬರ್‌ದಲ್ಲಿ 1997 ನಲ್ಲಿ ನಿನ್ನೆ ನಮ್ಮ ಕೆಲವು ನಾಯಕರು ಮಾತನಾಡುತ್ತಿದ್ದರು. ಭೂ ಕಬಳಿಕೆ ಹೇಗೆ ಆಗಿದೆ. 1 ಗುಂಟೆ 5 ಗುಂಟೆ ಕನ್‌ವರ್ಷನ್ ಆಗುವಾಗ ಫೈನ್ ಹಾಕದೆ ಖಾತೆಗಳನ್ನು ಮಾಡಿ ಬಿಟ್ಟಿದ್ದಾರೆ. ರೆಗ್ಯುಲರೈಸ್ ಮಾಡಿ ಕೊಟ್ಟಿದ್ದಾರೆ. ಮಾರಾಟವಾಗಿರುತ್ತದೆ ಎಂದು ನನ್ನ ಕ್ಷೇತ್ರದಲ್ಲಿ ಹಾಗೆ ಅಲ್ಲ 10 ಎಕರೆ ಭೂಮಿ 40 ಎಕರೆ ಖರಾಬು ಕನ್‌ವರ್ಷನ್‌ಗೆ ಅರ್ಜಿ ಹಾಕುವುದು 50 ಎಕರೆ ಕನ್‌ವರ್ಷನ್ ಆಗಿದೆ. ಸಬ್ ರಿಜಿಸ್ಟರ್ ವ್ಯಾಲ್ಯು 2 ಲಕ್ಷ ರೂ.ಗಳು ಮಾರ್ಕೆಟ್ ವ್ಯಾಲ್ಯೂ ಒಂದು ಕೋಟಿ ರೂ.ಗಳು. 500–600 ಎಕರೆ ಹೀಗೆ ಆಗಿದೆ. ಈ ಬಗ್ಗೆ ಎಲ್ಲಾ ಅಧಿಕಾರಿಗಳಿಗೆ ಹೇಳಿದ್ದೇನೆ. ಸರ್ಕಾರಕ್ಕೆ ಹಣ ಬಂದರೆ ಇದರಿಂದ ಆರ್ಥಿಕ ಪರಿಸ್ಥಿತಿ ಬಲಿಷ್ಟವಾದರೆ ಈ ರಾಜ್ಯದ ಅಭಿವೃದ್ಧಿ ಮಾಡಬಹುದು. ಈ ವಿಚಾರದಲ್ಲಿ ನಾವು ಜನಪ್ರತಿನಿಧಿಗಳು ಇರಬಹುದು, ಅಧಿಕಾರಿಗಳು ಇರಬಹುದು. ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಬೇಕಾಗಿದೆ, ಇದುವರೆಗೂ ತನಿಖೆಯಾಗಲಿಲ್ಲ. 28 ಕೇಸ್‌ಗಳು ಕೋರ್ಟಿನಲ್ಲಿ ಇದೆ. ಅಕ್ರಮ ಖಾತೆಯಗಿರುವುದು ಅದನ್ನು ಮಾರಾಟ ಮಾಡಿರುವುದು. ಸರ್ಕಾರಿ ಕೆರೆ, ಗೋಮಾಳ ಕೇಸ್ ಆಗಿದೆ, ಡಿಸಿ ಯವರು ಆ ಕೇಸ್‌ಅನ್ನು ತೆಗೆದುಕೊಂಡರು. ಆ 28 ಕೇಸ್‌ಗಳಲ್ಲಿ 8–9ನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿತು. ಆದರೆ ಅಕ್ರಮವಾಗಿ ಖಾತೆ ಮಾಡಿದಂಥ ಅಧಿಕಾರಿ ಯಾರು? ಜಡ್ಜ್‌ಮೆಂಟ್ ಮಾಡಿದರು, ಭೂಮಿಯನ್ನು ವಶಕ್ಕೆ ಪಡೆದುಕೊಂಡಿರಿ, ನಂತರ ಈ ಗೋಮಾಳ ಜಮೀನನ್ನು ಖಾಸಗಿ ವ್ಯಕ್ತಿಗಳಿಗೆ ಯಾವ ರೀತಿ ಖಾತೆ ಮಾಡಿದರು. ಆ ವ್ಯಕ್ತಿ ಯಾರು, ಯಾರು ಇನ್ಸ್‌ಪೆಕ್ಟರ್, ಆರ್.ಐ, ತಹಶೀಲ್ದಾರ್ ಅವರ ಬಗ್ಗೆ ಕ್ರಮ ಕೈಗೊಳ್ಳಬೇಕು. ಕ್ರಮ ತೆಗೆದುಕೊಂಡಾಗ ಮಾತ್ರ ಆಡಳಿತ ಸುಧಾರಿಸುತ್ತದೆ. ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು, ಯಾವುದೇ ಅಧಿಕಾರಿಯ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ. ನಾನು ಖಾತೆ ಮಾಡುತ್ತೇನೆ, ಅಧಿಕಾರದಲ್ಲಿ ಮುಂದುವರೆಯುತ್ತೇನೆ, ಒಂದು ಇನ್‌ಕ್ರಿಮೆಂಟ್ ಕಡಿಮೆಯಾಗುತ್ತದೆಯಾ ಅಥವಾ 3 ತಿಂಗಳು ಸಸ್ಪೆಂಡ್ ಆಗುತ್ತೇವಾ? ರಿವೋಕ್ ಆಗುತ್ತದೆ. ಮೂರು ತಿಂಗಳು 60 ರಿಂದ 80 ಪರ್ಸೆಂಟ್ ಸಂಬಳ ಬರುತ್ತದೆ, ಈ ಒಂದು ವ್ಯವಸ್ಥೆಯಲ್ಲಿ ಯಾವುದೇ ರಾಜ್ಯ ಸರ್ಕಾರ ಮಾಡಿದರೂ ಅಧಿಕಾರಿಗಳು ರಾಜ್ಯದ ಆಡಳಿತವನ್ನು ಒಂದು ದಿಕ್ಕಿನಲ್ಲಿ ನಡೆಸುವುದಿಲ್ಲ.

ಸರ್ಕಾರದ ಅಧಿಕಾರಿಗಳಾದ ಜಿಲ್ಲಾಧಿಕಾರಿಗಳು ಒಂದು ಆದೇಶ ಮಾಡಿದ ಮೇಲೆ ಅದರ ಬಗ್ಗೆ ತನಿಖೆಯಾಗಬೇಕು. ಯಾರು ಮಾಡುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಆನೇಕಲ್ ತಾಲ್ಲೂಕಿನಲ್ಲಿ ಸುಮಾರು 2 ಸಾವಿರ ಸರ್ಕಾರಿ ಭೂಮಿ... ನಾನು ನಿನ್ನೆ ಸಭೆಯನ್ನು ಮಾಡಿದೆ. ಕೆಐಎಡಿಬಿ ಯವರು ಅಕ್ವಿಜೇಶನ್ ಮಾಡುತ್ತಿದ್ದಾರೆ, ಅಲ್ಲಿ ಸಶ್ಮಾನ ಇರಬೇಕು, ಶಾಲೆಗೆ ಜಾಗ ಬಿಡಬೇಕು, ಮೈದಾನಕ್ಕೆ ಜಾಗ ಬಿಡಬೇಕು. ಅಂಗನವಾಡಿ ಕಟ್ಟಡ ಇವೆಲ್ಲವುಗಳಿಗೆ ರಿಸರ್ವ್ ಮಾಡುವುದಕ್ಕೆ ಎಲ್ಲೆಲ್ಲಿ ಕೆಐಎಡಿಬಿ ಯವರು ಅಕ್ವಿಜೇಶನ್ ಮಾಡುತ್ತಿದ್ದಾರೆ ಮಾನ್ಯ ಮಂತ್ರಿಗಳು ಮೀಟಿಂಗ್ ಕರೆದಿದ್ದಾರೆ ಅದರ ಬಗ್ಗೆ ಮಾತನಾಡಬೇಕೆಂದು ಸಭೆ ಕರೆದಿದ್ದೆ. ಇಲ್ಲ ಸರ್ ನಮಗೆ ಬಹಳ ಅರ್ಜಂಟ್ ಇದೆ, ಸರ್ಕಾರಿ ಭೂಮಿಗಳನ್ನು ಗೋಮಾಳಗಳನ್ನು ಸರ್ವೆ ಮಾಡಿ ಹರಾಜು ಮಾಡುವುದಕ್ಕೆ ಸರ್ಕಾರದವರು ಆದೇಶ ಮಾಡಿದ್ದಾರೆ. ಈ ಬಗ್ಗೆ ಎಲ್ಲಾ ಕಡೆ ಸರ್ವೆ ಮಾಡಬೇಕು ಅಂದರು. ಎಲ್ಲಿ ಮಾಡುತ್ತಿದ್ದೀರಿ ಅಂದೆ. ಅವರು 4 ಹಳ್ಳಿಗಳನ್ನು ಹೇಳಿದರು. 4 ಹಳ್ಳಿಗಳನ್ನು ಹೇಳಿದಾಗ ಅಲ್ಲಿ 1 ಗುಂಟೆ 4 ಗುಂಟೆ ಜಮೀನು ಸರ್ವೆ ಮಾಡುತ್ತಿದ್ದೀರಿ? ನೂರಾರು ಎಕರೆ ಇರುವ ಕಡೆ ಲೇಔಟ್ ಮಾಡಿ ಡೆವಲಪ್ ಮಾಡಿ ಒಳಗಡೆ ಫಾರ್ಮ್ 9 ಮತ್ತು 10 ಹಾಕಿಸಿಕೊಂಡು ಮಾರಾಟ ಮಾಡುವುದನ್ನು ಏಕೆ ಸರ್ವೆ ಮಾಡಲಿಲ್ಲ ಎಂದು ಕೇಳಿದರೆ, ಸರ್ ಬಹಳ ದೊಡ್ಡದಿದೆ ಸಾವಿರ ಎಕರೆ ಸರ್ವೆ ಮಾಡಬೇಕು, ಆದ್ದರಿಂದ ಮೊದಲು 1 ಎಕರೆ 1 ಗುಂಟೆ ಇರುವುದನ್ನು ಸರ್ವೆ ಮಾಡಿ ಬಿಡುತ್ತೇವೆ ಸರ್ ಎಂದು ಹೇಳಿದರು. ಯಾವ ಡೆವಲಪರ್ ಈ ಸರ್ಕಾರಕ್ಕೆ ವಂಚನೆ ಮಾಡಬೇಕು, ಸರ್ಕಾರದ ಭೂಮಿಯನ್ನು ಕಬಳಿಸಬೇಕು ಆ ದೃಷ್ಟಿಯಲ್ಲಿ ಲೇಔಟ್ ಮಾಡಿ ಸರ್ಕಾರಿ ಭೂಮಿಗೆ ಫಾರ್ಮ್ 9 ಮತ್ತು 10 ಹಾಕಿಸಿಕೊಂಡಿದ್ದಾರೆ. ನನಗೆ ಗೊತ್ತಿರುವ ಅನುಭವದ ಪ್ರಕಾರ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಫಾರ್ಮ್ ನಂಬರ್ 9 ಮತ್ತು 10 ಗೆ ಎರಡು ರಿಜಿಸ್ಟರ್. ಬಿಲ್ ಕಲೆಕ್ಷನ್ ಬುಕ್ ಎರಡು, ಎಲ್ಲಾ ಕಡೆ ಎಲ್ಲಾ ಪಂಚಾಯಿತಿಗಳಲ್ಲಿ, ಒಂದು ಸಲ ಇಡೀ ತಾಲ್ಲೂಕಿನಲ್ಲಿ ಆಡಿಟ್ ಆಯಿತು. ಆಡಿಟ್‌ಗೆ ಒಬ್ಬ ಅಧಿಕಾರಿಯನ್ನು ನೇಮಿಸಿ ಬಿಟ್ಟರು. ಎಲ್ಲಿ ಹೋಗಿದ್ದೀರಿ ಎಂದು ಕೇಳಿದರೆ, ಪಂಚಾಯಿತಿ ಆಡಿಟ್‌ಗೆ ಹೋಗಿದ್ದೆವು. ಸೆಕ್ರೆಟರಿ ಏನು ವರದಿ ಮಾಡುತ್ತಾನೆ ಅದನ್ನು ಆಡಿಟ್ ಬರೆಯುವುದು. ಬಹಳ ಸೀರಿಯಸ್ಸಾಗಿ ಗ್ರಾಮ ಪಂಚಾಯತಿಗಳಲ್ಲಿ ಹಿಂದಿ 9 ಮತ್ತು 10 ಓರಿಜಿನಲ್ ಅದು ಯಾವುದು ಇತ್ತು, ಈಗ ಸರ್ಕಾರಿ ಗೋಮಾಳಗಳಿಗೆ 9 ಮತ್ತು 10 ಹಾಕಿ ನನ್ನ ತಾಲ್ಲೂಕಿನಲ್ಲಿ 2 ರಿಂದ 5 ಸಾವಿರ ಎಕರೆ ಆಗಿದೆ. ಈ ಬಗ್ಗೆ ತನಿಖೆ ಮಾಡಿ ಸಿಇಓ ಅವರಿಗೆ ಹೇಳಿದೆ, ಡಿಸಿ ಯವರಿಗೆ ಹೇಳಿದೆ ಯಾರೂ ತನಿಖೆಯನ್ನು ಮಾಡಲಿಲ್ಲ. ಸರ್ಕಾರಿ ಭೂಮಿ ಕಬಳಿಸದೆ ಇನ್ನೇನು ಮಾಡುತ್ತಾರೆ? ಅಧಿಕಾರಿಗಳು ಎಚ್ಚರಿಕೆಯಿಂದ ಗಮನಿಸದೆ ಹೋದರೆ ಆ ಒಂದು ಭೂಮಿಯನ್ನು ರಕ್ಷಣೆ ಮಾಡಿಕೊಳ್ಳದೆ ಹೋದರೆ ಹೇಗೆ ಕಳ್ಳತನ ಮಾಡುವವರನ್ನು ಬಿಟ್ಟು ಬಿಡುವುದಕ್ಕೆ ಅಲ್ಲ ಆ ಕಳ್ಳರ ಮೇಲೆ ಎಚ್ಚರಿಕೆಯಿಂದ ಇರಬೇಕಾದ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಯಾರು ನೂರಾರು ಎಕರೆ ಭೂಮಿಯನ್ನು ಲೇಔಟ್ ಮಧ್ಯದಲ್ಲಿ ಸೇರಿಸಿಕೊಂಡು ಲೇಔಟ್‌ಗಳನ್ನು ಮಾಡಿ ಮಾರಾಟ ಮಾಡುತ್ತಿದ್ದಾರೆ ಈ ಬಗ್ಗೆ ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಒಂದು ಆದೇಶವನ್ನು ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ 94-(ಸಿ) ಬಗ್ಗೆ ಹಿಂದೆ ಜನತಾದಳ ಸರ್ಕಾರ ಇದ್ದಾಗ ಒಂದು ಆದೇಶ ಮಾಡಿದ್ದರು. ಪ್ರತಿಯೊಬ್ಬರೂ 50 ರೂ.ಗಳನ್ನು ಕಟ್ಟಬೇಕು, ಅರ್ಜಿ ಹಾಕಬೇಕು, ಲಕ್ಷಾಂತರ ರೂ. ಹಣ ಸರ್ಕಾರದಲ್ಲಿದೆ. 100 ಕ್ಕೆ 20-30 ಪರ್ಸೆಂಟ್‌ನಷ್ಟು ಜನಕ್ಕೆ 94(ಸಿ) ನಲ್ಲಿ ಡಿಕ್ಲರೇಶನ್ ಮಾಡಲಿಲ್ಲ. ತಹಶೀಲ್ದಾರ್, ಎಸಿ, ಡಿಸಿ ಯವರು ಮಾಡಲಿಲ್ಲ. ಮೀಟಿಂಗ್‌ಗಳು

ಆಗುತ್ತಿಲ್ಲ. ಅನೇಕರು 30–40 ವರ್ಷಗಳಿಂದ ಮನೆಯನ್ನು ಕಟ್ಟಿಕೊಂಡು ಯಾರು ವಾಸ ಮಾಡುತ್ತಿದ್ದಾರೆ ಅವರು 94–(ಸಿ)ನಲ್ಲಿ ಅರ್ಜಿಯನ್ನು ಹಾಕಿ ಇವತ್ತು ಅಥವಾ ನಾಳೆ ಹಕ್ಕುಪತ್ರ ಕೊಡುತ್ತಾರೆ ಎಂದು ಕಾಯುತ್ತಿದ್ದಾರೆ. ಬೆಂಗಳೂರಿನ ಮಧ್ಯದಲ್ಲಿರುವ ಜಮೀನಿಗೆ 94–(ಸಿ)ಗೆ ರೆಗ್ಯುಲರೈಸ್ ಮಾಡಿ ಎಂದು ನಾವು ಹೇಳುವುದಿಲ್ಲ. ಯಾವ ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಬಡವರು ಒಂದು ವರ್ಷದಿಂದ ನಿವೇಶನ ಕೊಡುವುದಕ್ಕಾಗಲಿಲ್ಲ. ಒಂದು ಹಕ್ಕುಪತ್ರವನ್ನು ಕೊಡುವುದಕ್ಕಾಗಲಿಲ್ಲ ಕನಿಷ್ಟ 94–(ಸಿ) ಪ್ರಕಾರ ಕ್ರಮವನ್ನಾದರೂ ತೆಗೆದುಕೊಳ್ಳಬೇಕಲ್ಲವೆ? ಈ ಬಗ್ಗೆ ಆದಷ್ಟು ಬೇಗ ಸನ್ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು 94–(ಸಿ) ಪ್ರಕಾರ ಅಕ್ರಮ ಸಕ್ರಮದಲ್ಲಿ ಬಡವರು ಸರ್ಕಾರಿ ಜಮೀನಿನಲ್ಲಿ 20–30 ವರ್ಷದಿಂದ ಮನೆಯನ್ನು ಕಟ್ಟಿಕೊಂಡಿದ್ದಾರೆ. ಸರ್ಕಾರ ಒಂದು ಆದೇಶ ಹೊರಡಿಸಿತು 94–(ಸಿ) ಪ್ರಕಾರ ಅರ್ಜಿ ಹಾಕಿ ಅವರನ್ನು ನಾವು ಅಲ್ಲಿಯೆ ರೀಟೈನ್ ಮಾಡುತ್ತೇವೆ, ಅಲ್ಲಿ ಅಳತೆ ಮಾಡಿ ನಿಮಗೆ ಎಷ್ಟೆಷ್ಟು ಅಳತೆ ಬರುತ್ತದೆ ಅಷ್ಟಷ್ಟಕ್ಕೆ ನಿಮಗೆ ಹಕ್ಕು ಪತ್ರ ಕೊಡುತ್ತೇವೆಂದು ಹೇಳಿ ಒಂದು ಆದೇಶವಾಯಿತು. ನನಗೆ ಗೊತ್ತಿರುವಂತೆ ಬೆಂಗಳೂರು ನಗರ ಹಾಗೂ ನಗರ ಜಿಲ್ಲೆ ಸೇರಿ 3–4 ಲಕ್ಷ ಅರ್ಜಿ ಬಂದಿದೆ. ಕಳೆದ 4 ವರ್ಷದಿಂದ ಇವರು ಏನೂ ಮಾಡಲಿಲ್ಲ. ಮಾನ್ಯ ದೇವೇಗೌಡರು ಏನು ರ್‍ಯಾಲಿ ಮಾಡಿದರು, ಬಡವರು ಎಲ್ಲಿ ಇದ್ದಾರೆ ಅವರಿಗೆ ಅಲ್ಲಿಯೇ ಜಾಗ ಕೊಡಬೇಕೆಂದು ಏನು ಹೋರಾಟ ಮಾಡಿದರು. ಅದರದ್ದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಮಾನ್ಯ ದೇವೇಗೌಡರು ಹೋರಾಟವನ್ನು ಮಾಡಿ ಬಡವರಿಗೆ ಅದನ್ನು ಕೊಡಬೇಕೆಂದು ಹೇಳಿದರು. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ನಿಮ್ಮ ಅಧಿಕಾರಿಗಳು ಏನು ಮಾಡಿದ್ದಾರೆಂದರೆ ಮಲ್ಲತ್ತಹಳ್ಳಿ ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಮಲ್ಲತ್ತಹಳ್ಳಿ ಗ್ರಾಮ ಸರ್ವೆ ನಂ:4ರಲ್ಲಿ ಸುಮಾರು 30 ವರ್ಷದಿಂದ ಬಡವರು ಗುಡಿಸಲುಗಳನ್ನು ಹಾಕಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಹೆಂಚಿನ ಮನೆ ಹಾಗೂ ಶೀಟಿನ ಮನೆಗಳನ್ನು ಸಹ ಕಟ್ಟಿಕೊಂಡಿದ್ದಾರೆ. ನೀವು ಅವರಿಗೆ ಒಂದು ಆದೇಶವನ್ನು ಹೊರಡಿಸಿದ್ದೀರಿ. 2004–05ನೇ ಇಸವಿಯಲ್ಲಿ ಬೆಂಗಳೂರು ಜಿಲ್ಲಾಧಿಕಾರಿಗಳ ಕಛೇರಿಯಿಂದ ಅವರಿಗೆ ಒಂದು ನೋಟೀಸ್ ಬಂದಿದೆ. ಅದೇನೆಂದರೆ, 20 X 30 ಅಳತೆಯ ನಿವೇಶನ ಮಂಜೂರಾಗಿರುವ 570 ಚದರ ಅಡಿಗೆ ಅಡಿ ಒಂದಕ್ಕೆ 147–76 ರೂಪಾಯಿಗಳಂತೆ ನೀವು ಹಣವನ್ನು ಕಟ್ಟಿ ಎಂದು ಹೇಳಿದ್ದಾರೆ. ಅಂದರೆ ಇದು ಎಷ್ಟು ಆಗುತ್ತದೆಂದರೆ 84, 222–00 ರೂಪಾಯಿಗಳು ಆಗುತ್ತದೆ. 20 X 30 ಅಡಿಯಲ್ಲಿ ಬಡವರು ಕಟ್ಟಿರುವ ನಿವೇಶನಕ್ಕೆ 84,222–00 ರೂಪಾಯಿಗಳು ಕಟ್ಟಿ ಎಂದು ಅವರಿಗೆ ನೋಟೀಸನ್ನು ಕೊಟ್ಟಿದ್ದೀರಿ. ಸ್ವಾಮಿ, ಯಾರಾದರೂ ಬಡವರು 147–00 ರೂಪಾಯಿಗಳ ಹಣವನ್ನು ಒಂದು ಅಡಿಗೆ ಕೊಟ್ಟು ತೆಗೆದುಕೊಳ್ಳುವುದಕ್ಕೆ ಸಾಧ್ಯವೇ? ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ನೀವು ಬಡವರಿಗೆ ಏನು ಮಾಡಿದ್ದೀರಿ, ಏನು ಈ ರೀತಿಯಾಗಿ ಆದೇಶವಿದೆ. ನೀವು 20 X 30 ಅಳತೆಯಲ್ಲಿ ಮನೆಕಟ್ಟಿಕೊಂಡಿರುವವರಿಗೆ ಫ್ರೀಯಾಗಿ ಕೊಡುತ್ತೇವೆಂದು ನೀವು ಪತ್ರಿಕೆಗಳಲ್ಲಿ ಹೇಳಿಕೆಯನ್ನು ಕೊಡುತ್ತೀರಿ. ಆದರೆ ನೋಟೀಸ್ ಕೊಡುವಾಗ ದಿನಾಂಕ:26–05–2005, ಈ ಆದೇಶವನ್ನು ಕೊಟ್ಟಿದ್ದೀರಿ, ಇದರಿಂದಾಗಿ ಬಡವರಿಗೆ ಏನು ಉಪಯೋಗವಾಗುತ್ತದೆ? 94(ಸಿ) ಪ್ರಕಾರ ನೀವು ಅವರಿಗೆ ಕೊಡುತ್ತೇವೆಂದು ಹೇಳುತ್ತೀರಿ, ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಬೆಂಗಳೂರು ಅಥವಾ ರಾಜ್ಯದಲ್ಲಿ ಎಲ್ಲಿಯಾದರೂ ಇರಬಹುದು, ಇದನ್ನು ತಾವು ಮಾಡಿಫೈ

ಮಾಡಬೇಕು. 2000–00 ರೂಪಾಯಿಗಳನ್ನು ತಾವು ತೆಗೆದುಕೊಳ್ಳಿ, ಪರಿಶಿಷ್ಟ ಜಾತಿಯ ಬಡವರು ಯಾರು ಇದ್ದಾರೆ ಎಸ್‌ಸಿ:ಎಸ್‌ಟಿಗಳು ಇದ್ದಾರೆ ಅವರಿಗೆ 500–00 ರೂಪಾಯಿಗಳನ್ನು ತೆಗೆದುಕೊಳ್ಳಿ. ಹಿಂದೆ ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಯಾರು ಅಕ್ರಮ–ಸಕ್ರಮ ಮಾಡಿಕೊಂಡಿದ್ದರೋ ಅವರಿಗೆ ಒಂದು ಮನೆಗೆ 500–00 ರೂಪಾಯಿಗಳನ್ನು ಹಾಕಿ ಅವರಿಗೆ ಸಕ್ರಮ ಮಾಡಿ ಅವರಿಗೆ ಹಕ್ಕುಪತ್ರವನ್ನು ಕೊಟ್ಟಿದ್ದೀರಿ. ಬಿಡಿಎನಲ್ಲಿ ಯಾರು ಇದ್ದಾರೆ ಅವರಿಗೆ ಇವತ್ತು ಫ್ರೀಯಾಗಿ ಕೊಡುತ್ತಿದ್ದೀರಿ, ಬಿಡಿಎ ಲೇಔಟ್‌ಗಳಲ್ಲಿ ಯಾರು ಬಡವರು ಇದ್ದಾರೆ, ಯಾರು ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ, ಕಾರ್ಪೊರೇಷನ್‌ರವರು 500–00 ರೂಪಾಯಿ ದಂಡ ಹಾಕಿ ಕೊಡುತ್ತಿದ್ದಾರೆ. ಆದರೆ ನೀವು ಒಂದು ಸೈಟಿಗೆ 84 ಸಾವಿರ ರೂಪಾಯಿಗಳು ಹಾಕುತ್ತೀರೆಂದರೆ, ಯಾವುದಾದರೂ ಗುಡಿಸಲುಗಳಲ್ಲಿ ಇರುವಂತಹ ಬಡವರು ಅವರು ಜೀವನ ಮಾಡುವುದೇ ಕಷ್ಟ, ಅವನು ಹಳದಿ ಪಡಿತರ ಚೀಟಿಯನ್ನು ಇಟ್ಟುಕೊಂಡಿದ್ದಾನೆ, ಅವನಿಗೆ ಈ ರೀತಿ ಹಾಕಿದರೆ ಅವನು ಕೊಡುವುದಕ್ಕೆ ಸಾಧ್ಯವೇ? ದಯವಿಟ್ಟು ಇದನ್ನು ತಾವು ವಾಪಸ್ಸು ತೆಗೆದುಕೊಳ್ಳಬೇಕು. ನೀವು ಲಂಮ್‌ಸಮ್ ಆಗಿ ಒಂದು ರೇಟನ್ನು ಫಿಕ್ಸ್ ಮಾಡಬೇಕು. ಒಂದು ಸಾವಿರ ರೂಪಾಯಿ ಅಥವಾ ಎರಡು ಸಾವಿರ ರೂಪಾಯಿಗಳು ಎಂದು ಫಿಕ್ಸ್ ಮಾಡಬೇಕು. ಅದನ್ನು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು,

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮಲೆನಾಡಿನಲ್ಲಿ..

ಅಧ್ಯಕ್ಷರು : ಮಾನ್ಯ ಜ್ಞಾನೇಂದ್ರರವರೇ, ತಾವು ಕುಳಿತುಕೊಳ್ಳಿ. ಮಾನ್ಯ ನಾರಾಯಣ ಸ್ವಾಮಿಯವರು ಮಾತನಾಡಲಿ.

ಶ್ರೀ ಅರಗ ಜ್ಞಾನೇಂದ್ರ : ನಮ್ಮ ಮಲೆನಾಡಿನಲ್ಲಿ 94(ಸಿ) ನಲ್ಲಿ..

ಅಧ್ಯಕ್ಷರು : ಏನಾಯಿತು ಅಂದರೆ, ನಾರಾಯಣಸ್ವಾಮಿಯವರು ಮಾತನಾಡುತ್ತಾ ನಿಂತಮೇಲೆ ಅವರು ಬೇರೆಯವರು ಎದ್ದುನಿಂತುಕೊಂಡ ತಕ್ಷಣ ಕುಳಿತುಕೊಳ್ಳುತ್ತಾರೆ. ಬರೀ ಇದೇ ಆಗಿಹೋಯಿತಲ್ಲಾ. ಅದು ಆಗುವುದಿಲ್ಲ, ನೋ ಇದು ಆಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಬಹಳ ಹಳ್ಳಿಗಳ ರೈತರ ಪರಿಸ್ಥಿತಿ ಇದೇ ರೀತಿಯಾಗಿದೆ. ತಾವು ಕೂಡ ಹಳ್ಳಿಯಿಂದ ಬಂದವರಾಗಿದ್ದೀರಿ. ಏಕೆಂದರೆ....

ಅಧ್ಯಕ್ಷರು : ಅದು ಆಗುವುದಿಲ್ಲ, ನೀವು ಮಾತನಾಡುವಾಗಲೇ ಹೇಳಬೇಕು. ಈಗ ಏತಕ್ಕಾಗಿ ತಾವು ನಿಂತುಕೊಳ್ಳುತ್ತೀರಿ?

ಶ್ರೀ ಅರಗ ಜ್ಞಾನೇಂದ್ರ : ಇದೊಂದು ಸಂದರ್ಭದಲ್ಲಿ...

ಅಧ್ಯಕ್ಷರು : ಮಾನ್ಯ ನಾರಾಯಣಸ್ವಾಮಿಯವರೇ, ತಾವು ಮಾತನಾಡಿ. ತಾವು ಇನ್ನು 10 ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀ ಜೆ. ಸಿ. ಮಾಧುಸ್ವಾಮಿ : ಅವರು ಎಷ್ಟು ಸಾರಿ ಎದ್ದು ನಿಂತುಕೊಂಡು ಮಾತನಾಡಿದ್ದಾರೆ ಕೇಳಿ.

ಅಧ್ಯಕ್ಷರು : ನಾರಾಯಣಸ್ವಾಮಿಯವರೆ, 10 ನಿಮಿಷದಲ್ಲಿ ಮುಗಿಸಿ.

ಶ್ರೀ ಎ. ನಾರಾಯಣಸ್ವಾಮಿ : ಭೂ ಹಗರಣದ ವಿಚಾರಕ್ಕೆ ಬಂದಾಗ ಮತ್ತೊಂದು ದೊಡ್ಡ ಹಗರಣ ಈ ರಾಜ್ಯದಲ್ಲಿ ನಡೆಯುತ್ತಿದೆ. ಅನೇಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಡುಬಡವರಿಗೆ ಭೂ ಮಂಜೂರಾತಿ ಆಗಿತ್ತು. ಇದರ ಬಗ್ಗೆ ಸುಪ್ರಿಂಕೋರ್ಟ್‌ನಲ್ಲಿ ಜಡ್ಜ್‌ಮೆಂಟ್ ಕೂಡ ಆಯಿತು. 1949ರ ನಂತರ ಯಾವುದೇ ಭೂಮಿಯು ಪರಿವರ್ತನೆಯಾಗಿದ್ದರೆ ಆ

ಭೂಮಿಯನ್ನು ಸರ್ಕಾರಕ್ಕೆ ವಾಪಸ್ಸು ಕೊಟ್ಟು ಮತ್ತೆ ಅದೇ ರೈತನಿಗೆ ಕೊಡಬೇಕೆಂದು ಇದೆ. ಬೆಂಗಳೂರು ಸುತ್ತಮುತ್ತಲು ಎ.ಸಿ. ಮತ್ತು ಡಿ.ಸಿ.ಯವರಿಗೆ ಸುಮೋಟೊ ಅಧಿಕಾರವಿದೆ. ಈ ರಾಜ್ಯದಲ್ಲಿ ಯಾವ ದಲಿತವರ್ಗದ ಕುಟುಂಬಕ್ಕೆ ಸೇರಿದಂತಹ...

ಅಧ್ಯಕ್ಷರು : ನಾರಾಯಣಸ್ವಾಮಿಯವರೆ, ತಾವು ಬೇಗನೆ ಮುಗಿಸಿ. ಎಲ್ಲರೂ ಹೊರಟುಹೋಗುತ್ತಾರೆ.

ಶ್ರೀ ಎ. ನಾರಾಯಣಸ್ವಾಮಿ : ಈ ಭೂಮಿಯು ಯಾವ ದಲಿತರಿಗೆ ಮಂಜೂರಾಗಿದೆ, ಆ ಭೂಮಿಯನ್ನು ಸ್ಟೇಟ್ ಪರ್ಮಿಶನ್ ಇಲ್ಲದೆ ಮಾರಾಟ ಮಾಡಬಾರದು. 1949ರ ನಂತರ ಯಾರು ಭೂಮಿಯನ್ನು ಮಾರಾಟ ಮಾಡಿದ್ದಾರೆ. ಅದರ ಬಗ್ಗೆ ಸರ್ಕಾರದ ಪೂರ್ಣ ವರದಿಯಿಲ್ಲ. ಆ ಕಡುಬಡವರಿಗೆ ಗೊತ್ತಾಗುವುದಿಲ್ಲ. 'ನಾಕ್ ಚಪ್ಪೀಸ್ ರಾ ಅಂಟೆ, ಚಪ್ಪೀಸಿ, ನೇನ್ ಸೈನ್ ಏಸ್ನೀ ಸ್ವಾಮಿ'.

100ಕ್ಕೆ 20 ರಿಂದ 30 ಪರ್ಸೆಂಟ್ ದಲಿತರಿಗೆ 100 ರೂಪಾಯಿಗಳಿಗೆ ಸಹಿ ಹಾಕಿಸಿಕೊಂಡು ಭೂಮಿಯನ್ನು ಪಡೆಯುತ್ತಿದ್ದಾರೆ. ಈ ವಿಚಾರದ ಬಗ್ಗೆ ಇಡೀ ರಾಜ್ಯದಲ್ಲಿ ಯಾವ ದಲಿತ ಸಮುದಾಯವಿದೆ. ಆ ಸಮುದಾಯಕ್ಕೆ ಮಂಜೂರಾದಂತಹ ಭೂಮಿ ಸರ್ಕಾರದಿಂದ ಸೇಲ್ ಪರ್ಮಿಷನ್‌ಗೆ, ಏಲಿನಿಯೇಷನ್‌ಗೆ ಪರ್ಮಿಶನ್ ತೆಗೆದುಕೊಳ್ಳದೆ ಪರಭಾರೆ ಅಗುವುದನ್ನು ಸರ್ಕಾರ ಸುಮೋಟೊ ತೀರ್ಮಾನ ಮಾಡಿ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಭೂಮಿಯನ್ನು ವಾಪಸ್ಸು ಮತ್ತೆ ರೈತನಿಗೆ ಕೊಡಬೇಕೆಂದು ಒತ್ತಾಯವನ್ನು ಮಾಡುತ್ತೇನೆ. ಕೆಲವರು ಸುಮೋಟೋ ಕೇಸ್‌ಗಳನ್ನು ಹಾಕಿದ್ದಾರೆ. ಕೇಸ್ ಹಾಕಿದ ಮೇಲೆ ಅದು ತೀರ್ಮಾನವಾಗಿ ಜಡ್ಜಮೆಂಟ್‌ನ್ನು ಕೊಟ್ಟಿದ್ದಾರೆ. ಈ ಭೂಮಿಯನ್ನು ಪರಭಾರೆ ಮಾಡಬಾರದು. ಪರಭಾರೆ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿದ್ದಾರೆ. ಅದು ಆಗಿ ಒಂದು ತಿಂಗಳಿಗೆ ಅಧ್ಯಕ್ಷರೆ, ಮಾರಾಟ ಮಾಡಿರುವುದು ತಪ್ಪು. ನಿಮಗೆ ಭೂಮಿಯನ್ನು ಕೊಡುವುದಿಲ್ಲ, ರೈತನಿಗೆ ಭೂಮಿಯನ್ನು ಕೊಟ್ಟಿದ್ದೇವೆ ಎಂದು ಸರ್ಕಾರ ವಜಾ ಮಾಡಿದೆ. ಇನ್ನು ಒಂದು ತಿಂಗಳಿಗೆ ಸೇಲ್ ಪರ್ಮಿಶನ್, ಇವತ್ತು ವಜಾ, 30 ದಿನ ಆದ ಮೇಲೆ ಅದೇ ವ್ಯಕ್ತಿಗೆ ಮಾರಾಟ ಮಾಡುತ್ತಾರೆ. ಇದರ ಬಗ್ಗೆ ಸರ್ಕಾರ ಯೋಚನೆಯನ್ನು ಮಾಡಬೇಕು. ಯಾವ ವ್ಯಕ್ತಿ ಪರಭಾರೆ ಮಾಡಿದ್ದಾನೆ ಮತ್ತೆ ಅದೇ ವ್ಯಕ್ತಿಗೆ ಪರಭಾರೆ ಮಾಡುವುದಕ್ಕೆ ಅವಕಾಶವನ್ನು ನೀಡಬಾರದು, ಆ ವಿಚಾರದಲ್ಲಿ ಖಾತೆ ಆಗಬಾರದು, ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ಒತ್ತಾಯವನ್ನು ಮಾಡುತ್ತೇನೆ. ಈ ರಾಜ್ಯದಲ್ಲಿ ಭೂ ಹಗರಣದ ಬಗ್ಗೆ ಈ ಸದನದಲ್ಲಿ ಅನೇಕ ಬಾರಿ ಚರ್ಚೆಯಾಗಿದೆ. ಎಲ್ಲಾ ತಾಲ್ಲೂಕು ಕಛೇರಿಗಳಲ್ಲಿ ಒಂದು ಪುಸ್ತಕ ಇದೆ. ಎಲ್ಲಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಒಂದು ಪುಸ್ತಕ ಇದೆ. ಸರ್ಕಾರಿ ಶಾಲೆಗಳು ಎಷ್ಟು ಇದೆ, ಎಷ್ಟು ಕುಂಟೆ ಇದೆ, ಅಂಗನವಾಡಿ ಎಷ್ಟು ಇದೆ, ಕುಂಟೆ ಎಷ್ಟು ಇದೆ, ಗುಂಡು ತೋಪು ಎಷ್ಟು ಇದೆ, ಸರ್ಕಾರಿ ಭೂಮಿ ಯಾವುದು, ಖರಾಬು ಯಾವುದು, ಈ ಭೂಮಿ ಗ್ರಾಮಪಂಚಾಯಿತಿದಾ, ಅಥವಾ ಭೂಮಿ ತಾಲ್ಲೂಕು ಪಂಚಾಯಿತಿಗೆ ಸೇರಿರುವುದಾ, ಯಾವುದಕ್ಕೆ ಒಳಪಡಬೇಕೆಂಬುದರ ಬಗ್ಗೆ ಒಂದು ಪುಸ್ತಕ ಇದೆ. ಬಹುಶಃ ಇಡೀ ರಾಜ್ಯದ ಜನತೆಗೆ ಇದರ ಬಗ್ಗೆ ಗೊತ್ತಾಗಬೇಕಾದರೆ ಪ್ರತಿ ಜಿಲ್ಲೆಗಳಿಗೆ ಒಳಪಟ್ಟಂತೆ ಈ ರಾಜ್ಯದ ಈ ರಾಜ್ಯ ಸರ್ಕಾರದ ಆಸ್ತಿ ಏನು? ಈ ಒಂದು ಪುಸ್ತಕವನ್ನು ಹೊರಡಿಸುವುದರ ಮುಖಾಂತರ ರಾಜ್ಯಸರ್ಕಾರದ ಹಿಂದಿನ ಆಸ್ತಿ ಎಷ್ಟು ಇತ್ತು, ಆ ಒಂದು ವರ್ಷದಲ್ಲಿ ಏನಾಗಿದೆ ಎಂಬುದನ್ನು ತಿಳಿಸಬೇಕು. ಈ ಬಗ್ಗೆ ಏನಾದರೂ ಸಮಸ್ಯೆ ಇರಬಹುದು. ಈ ನಿಟ್ಟಿನಲ್ಲಿ

ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಸನ್ಮಾನ್ಯ ನಾಯಕರು ಪ್ರಸ್ತಾಪ ಮಾಡಿದರು, ಅಡ್ವರ್ಸ್ ಪೊಸೆಶನ್‌ನಲ್ಲಿ 30 ವರ್ಷ ಪೊಸಿಷನ್‌ನಲ್ಲಿದ್ದರೆ ಭೂ ಮಂಜೂರಾತಿ ಮಾಡಬಹುದು, ಒಂದು ಕಡೆ ಜಡ್ಜ್‌ಮೆಂಟ್‌ನ್ನು ಕೊಟ್ಟಿದ್ದಾರೆ, ಹೈಕೋರ್ಟಿನಲ್ಲಿ ಮತ್ತು ಸುಪ್ರೀಂಕೋರ್ಟಿನಲ್ಲಿ ಜಡ್ಜ್‌ಮೆಂಟ್ ಕೊಟ್ಟರು ಇನ್ನೊಂದು ಕಡೆ ಆದೇಶ ಇದೆ, 18 ಕಿಲೋಮೀಟರ್ಸ್ ಒಳಗಡೆ ಗ್ರೀನ್ ಬೆಲ್ಟ್‌ನಲ್ಲಿ ಭೂ ಮಂಜೂರಾತಿ ಮಾಡುವುದಕ್ಕೆ ಬರುವುದಿಲ್ಲ. ಪುರಸಭೆ ವ್ಯಾಪ್ತಿಯಲ್ಲಿ 5 ಕಿ.ಮಿ. ವ್ಯಾಪ್ರಿಯಲ್ಲಿ ಭೂಮಂಜೂರಾತಿ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಮತ್ತೊಂದು ಕಡೆ ಕೋರ್ಟುಗಳಲ್ಲಿ 30 ವರ್ಷ ಅಡ್ವರ್ಸ್ ಪೊಸೆಷನ್‌ನಲ್ಲಿದ್ದಾರೆ. ಜಡ್ಜ್‌ಮೆಂಟ್ ಮೇಲೆ ಖಾತೆ ಮಾಡಿ ಎಂದು ಹೇಳುತ್ತಾರೆ. ಯಾವುದೇ ರೀತಿಯಲ್ಲಿ ಸರ್ಕಾರದ ಆದೇಶವನ್ನು ಗ್ರೀನ್‌ಬೆಲ್ಟ್‌ನಲ್ಲಿ ಬೆಂಗಳೂರು ಸಿಟಿಯೊಳಗಡೆ ವಿಧಾನಸೌಧದ ಪಕ್ಕದಲ್ಲಿ 30 ವರ್ಷದಿಂದ ಪೋಸಿಷನ್‌ನಲ್ಲಿದ್ದಾರೆ. ಅದಕ್ಕೆ ಜಡ್ಜ್‌ಮೆಂಟ್ ಇದೆ, ಮಂಜೂರು ಮಾಡಿಬಿಡು ಅಂದರೆ ಇದು ಕಾನೂನುಬಾಹಿರ. ಈ ಬಗ್ಗೆ ಕಂದಾಯ ಮಂತ್ರಿಗಳು ಈ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ನನ್ನ ಕೊಡಲು ಎಂಬ ಒಂದು ಗ್ರಾಮವಿದೆ, ದೊಡ್ಡಮಂಗಲ ಎಂಬ ಗ್ರಾಮವಿದೆ, ಹಕ್ಕುಪತ್ರ ಇದೆ, ಹಕ್ಕುಪತ್ರವನ್ನು ನೀಡಿದ ಮೇಲೆ ಖಾತೆಯನ್ನು ಮಾಡುತ್ತಿಲ್ಲ. ಇದು ಅಕ್ರಮ ತಹಶೀಲ್ದಾರ್‌ರವರ ಕಛೇರಿಯಲ್ಲಿ ಈ ಬಗ್ಗೆ ನಡವಳಿಕೆ ನಡೆದು, ಹಕ್ಕು ಪತ್ರ ಕೊಟ್ಟು ಭೂ ಮಂಜೂರಾತಿ ಆಗಲಿ ಎಂದು ಹೇಳಿದರೆ, ಇದರಲ್ಲಿ ಯಾವುದು ನ್ಯಾಯವಿದೆ ಅಧ್ಯಕ್ಷರೆ? ಈ ತಕ್ಷಣ ಆ ಎರಡು ಗ್ರಾಮಗಳ ಬಗ್ಗೆ ಹಕ್ಕು ಪತ್ರ ಅದು ಸರಿಯಾಗಿದೆಯೋ ಅಥವಾ ಇಲ್ಲವೋ ಈ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಾನು ಮೂರು ಬಾರಿ ಈ ಸದನಕ್ಕೆ ಶಾಸಕನಾಗಿ ಬಂದಿದ್ದೇನೆ, ಹಿಂದೆ ಸನ್ಮಾನ್ಯ ಶ್ರೀಕಂಠಯ್ಯನವರು ಕಂದಾಯ ಮಂತ್ರಿಗಳಾಗಿದ್ದರು. ಆಗ ತಹಶೀಲ್ದಾರ್‌ರವರು ಸಹಕಾರವನ್ನು ಕೊಡುತ್ತಿರಲಿಲ್ಲ. ಭೂಮಂಜೂರಾತಿಯ ಬಗ್ಗೆ ಸಭೆಗಳನ್ನು ಮಾಡಿದ್ದೇವೆ. ಭೂಮಂಜೂರಾತಿ ಸಭೆಗಳ ಮುಂದೆ ಅರ್ಜಿಗಳನ್ನು ಮಂಡನೆ ಮಾಡುತ್ತಾರೆ.

ಶ್ರಿ ಜೆ. ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ನಾರಾಯಣಸ್ವಾಮಿಯವರ ಭಾಷಣಕ್ಕೆ ಮುಂಚೆ ಒಂದು ಹೇಳಿಕೆಯನ್ನು ಮಾನ್ಯ ತನ್ವೀರ್‌ಸೇಠ್‌ರವರಿಂದ ಕೊಡಿಸಿಬಿಡಿ.

ಅಧ್ಯಕ್ಷರು : ಆಯಿತು. ಮಾನ್ಯ ತನ್ವೀರ್‌ಸೇಠ್‌ರವರೇ, ತಾವು ಸ್ಟೇಟ್‌ಮೆಂಟ್‌ನ್ನು ಮಾಡಿ.

3:- ಮಂತ್ರಿಗಳ ಹೇಳಿಕೆ:-

ವಿಷಯ :- 43 ಖಾಸಗಿ ಕೈಗಾರಿಕಾ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡುವ ಬಗ್ಗೆ.

ಶ್ರೀ ತನ್ವೀರ್‌ಸೇಠ್ (ಕಾರ್ಮಿಕ ರಾಜ್ಯಸಚಿವರು) : ಮಾನ್ಯ ಅಧ್ಯಕ್ಷರೆ, ಇವತ್ತಿನಿಂದ ಪರೀಕ್ಷೆ ಪ್ರಾರಂಭವಾಗಿದೆ. ಮಾನ್ಯ ಗೌರವಾನ್ವಿತ ಸದಸ್ಯರು ಮಾಧುಸ್ವಾಮಿಯವರು ನಿನ್ನೆ ದಿನ ಸದನದಲ್ಲಿ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರುವಂತಹ ವಿಚಾರಕ್ಕೆ ರಾಜ್ಯದಲ್ಲಿ ಸುಮಾರು 636 ಐ.ಟಿ.ಐ.ಗಳು ಇದ್ದು ಆ ಪೈಕಿ 43 ಖಾಸಗಿ ಕೈಗಾಗಿಕಾ ಸಂಸ್ಥೆಗಳಲ್ಲಿ ಅಖಿಲಭಾರತ ವೃತ್ತಿ ಪರೀಕ್ಷೆ ಸಂಯೋಜನೆ ಪಡೆಯದೆ ಹಾಗೂ ಶಿಫಾರಸ್ಸು ಆಗದೆ ಇರುವಂತಹ ವೃತ್ತಿಗಳಿಗೆ ವಿದ್ಯಾರ್ಥಿಗಳನ್ನು ದಾಖಲಿಸಿದ್ದು ಈ ದಾಖಲಾತಿಯು ನಿಯಮ ಬಾಹಿರವಾಗಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಾಗೂ ಈ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಖಾಸಗಿ ತರಬೇತಿ ಸಂಸ್ಥೆಗಳಿಂದ ಮುಂದೆ